

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪಾರಪತ್ರಿಕೆ

ಐಕ್ಯರಂಗ

ಸಂಪುಟ 12 | ಸಂಚಿಕೆ 40 | ಅಕ್ಟೋಬರ್ 7,1990 | ರೂ. 1.50

ಕಾಂಗ್ರೈ ಸರಕಾರದ 10 ತಿಂಗಳ ಆಡಳಿತ

ಸಿ.ಪಿ.ಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ರಾಜಕೀಯ ನಿರ್ಣಯ

ಅಕ್ಟೋಬರ್ 1 ಹಾಗೂ 2 ರಂದು ಕಾಂ. ಸೂರ್ಯನಾರಾಯಣ ರಾವ್ ರವರ ಅಧ್ಯಕ್ಷತೆಯಲ್ಲಿ ನಡೆದ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ರಾಜ್ಯ ಸಮಿತಿಯ ಸಭೆಯಲ್ಲಿ ಕರ್ನಾಟಕ ರಾಜ್ಯದ ಪರಿಸ್ಥಿತಿಯ ಬಗ್ಗೆ ಮುಖ್ಯವಾಗಿ ವೀರೇಂದ್ರ ಪಾಟೀಲರ ಸರಕಾರದ 10 ತಿಂಗಳ ಆಡಳಿತದ ಬಗ್ಗೆ ರಾಜಕೀಯ ನಿರ್ಣಯವೊಂದನ್ನು ಅಂಗೀಕರಿಸಿತು.

ಪೋಲೀಸ್ ದಬ್ಬಾಳಿಕೆ

ರಾಜ್ಯ ಸಂಕೀರ್ಣ ರಾಜಕೀಯ ಪರಿಸ್ಥಿತಿಯ ಲಾಭ ಪಡೆದು ಅತಿ ಹೆಚ್ಚಿನ ಆಶ್ವಾಸನೆಯನ್ನು ನೀಡಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಕೂಡಲೇ ಥರ್ಡ್ ಡಿಗ್ರಿ ವಿಧಾನಗಳ ಕಾರಣ ಲಾಕಪ್ ಸಾವುಗಳ ಪರಂಪರೆ ಗೃಹ ಮಂತ್ರಿಗಳೂ ಆದ ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿ ಆರಂಭವಾಯಿತು. ಅವರು ಅಧಿಕಾರಕ್ಕೆ ಬಂದ ಕೂಡಲೇ ಆರಂಭವಾದ ಗೋಲೀಬಾರ್‌ಗಳು 10 ತಿಂಗಳ ಅವಧಿಯಲ್ಲಿ 17 ಜನರನ್ನು ಬಲಿ ತೆಗೆದುಕೊಂಡಿದೆ.

ತನ್ನ ರಾಜಕೀಯ ವಿರೋಧಿಗಳನ್ನು ದಮನ ಮಾಡಲು ಕಾರ್ಮಿಕ ಸಂಘಗಳಿಗೆ ನಡೆಯುವ ಚುನಾವಣೆಗಳಲ್ಲಿ ನಿಜವಾದ ಕಾರ್ಮಿಕ ಪ್ರತಿನಿಧಿಗಳು ಆಯ್ಕೆಯಾಗದ ಹಾಗೆ ನೋಡಿಕೊಳ್ಳುವುದರಲ್ಲಿ, ಕಾರ್ಮಿಕ ವಿವಾದಗಳಲ್ಲಿ ಪೋಲೀಸರನ್ನು ಮಾಲೀಕರ ಹಾಗೂ ಗೂಂಡಾಗಳ ಪರವಾಗಿ ಬಳಸುತ್ತಿದೆ.

ಸಭೆ ಸೇರುವುದು, ಮೆರವಣಿಗೆ ನಡೆಸುವುದು ಮೊದಲಾದ ಮೂಲಭೂತ ಹಕ್ಕುಗಳನ್ನು ಸೀಮಿತಗೊಳಿಸುವ ಅನುಮತಿ ಪತ್ರ ಮೊದಲಾದ ಅಡೆತಡೆಗಳನ್ನು ತನ್ನ ವಿರೋಧಿಗಳಿಗೊಡ್ಡಿದರೆ ಕಾಂಗ್ರೆ ಸಂಘಟನೆಗಳಿಗೆ ಯಾವುದೇ ಅಂಕೆ ಇಲ್ಲವಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಂತೂ ಪೋಲೀಸ್ ಠಾಣೆಗಳು ಕಾಂಗ್ರೆ ಕಛೇರಿಗಳಂತಾಗಿವೆ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಪೋಲೀಸರು ಅಧಿಕಾರಕ್ಕೆ ಬಂದಂತೆ ಎಂಬ ಮಾತು ಸಾಬೀತಾಗಿದೆ.

ಅಧಿಕಾರ ಶಾಹಿ ಆಡಳಿತ

ಕಾಂಗ್ರೆ ಸರಕಾರ ಜನಾಭಿಪ್ರಾಯವನ್ನು ಜನರ ಅಹವಾಲುಗಳನ್ನು ಕಡೆಗಣಿಸುವುದಲ್ಲದೆ ಜನರ ಪ್ರತಿನಿಧಿಗಳಾದ ಶಾಸಕರ-ತನ್ನದೇ ಪಕ್ಷದ ಶಾಸಕರ ಅಭಿಪ್ರಾಯಕ್ಕೆ ಅಷ್ಟೇ ಅಲ್ಲ ಜೊತೆಯ ಸಚಿವರ ಅಭಿಪ್ರಾಯಗಳಿಗೂ ಬೆಲೆ ಕೊಡದೆ ಅಧಿಕಾರ ಶಾಹಿಯ ಮೇಲೆ ಪೂರ್ಣ ಅವಲಂಬನೆ ಹೊಂದಿದೆ.

ನೌಕರ ವಿರೋಧಿ ಧೋರಣೆ:

ಉಚ್ಚ ಅಧಿಕಾರಿಗಳಿಗೆ ಸರ್ವ ಸ್ವಾತಂತ್ರ್ಯವನ್ನು ನೀಡಿರುವ ಅದೇ ಸರಕಾರ ನೌಕರರ ಸಾರಾಸಗಟು ವರ್ಗಾವಣೆಯ, ನಿವೃತ್ತಿ ವಯಸ್ಸನ್ನು ಇಳಿಸುವ ಪ್ರಯತ್ನದ ಕಡ್ಡಾಯ ನಿವೃತ್ತಿಯ ಕತ್ತಿಯನ್ನು ನಿರಂತರ ತಲೆಯ ಮೇಲೆ ತೂಗಾಡಿಸುವುದರ ಮೂಲಕ ಹಾಗೂ ಅವರೆಲ್ಲರ ಭಾವನೆಗಳನ್ನು ಬಿಂಬಿಸುವ ಒಗ್ಗಟ್ಟಿನ ಹೋರಾಟವನ್ನು ಒಡೆಯುವ, ತುಳಿಯುವ ಮೂಲಕ ತನ್ನ ನೌಕರ ವಿರೋಧಿ ಧೋರಣೆಯನ್ನು ಪ್ರತಿಬಿಂಬಿಸುತ್ತದೆ.

ಅಧಿಕಾರ ವಿಕೇಂದ್ರೀಕರಣ

ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ರಾಜ್ಯ ಸರಕಾರಗಳ ಹಕ್ಕು ಅಧಿಕಾರಗಳನ್ನು ಕಸಿದುಕೊಳ್ಳಲು ತಹತಹಿಸುತ್ತಿದ್ದ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಜಿಲ್ಲಾ ಪರಿಷತ್ ವ್ಯವಸ್ಥೆಯ ಮೂಲಕ ಸಾಧಿಸಿದ ಅಲ್ಪ ಸ್ವಲ್ಪ ಅಧಿಕಾರ ವಿಕೇಂದ್ರೀಕರಣವನ್ನು ನುಂಗಲಾರದೆ ತಳಮಳಿಸುತ್ತಿದ್ದ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಕೂಡಲೇ ಜಿಲ್ಲಾ ಪರಿಷತ್‌ಗಳ ಮೇಲೆ ಧಾಳಿಯನ್ನು ಆರಂಭಿಸಿತು. ಚುನಾಯಿತ ಪ್ರತಿನಿಧಿಗಳ ವಿರುದ್ಧವಾಗಿ ಅಧಿಕಾರಿಗಳನ್ನು ಬಲಪಡಿಸುವ ಎತ್ತಿಕಟ್ಟುವ ಈ ಸಂಸ್ಥೆಗಳ ಹಣ ಅಧಿಕಾರಗಳನ್ನು ಕಸಿದುಕೊಳ್ಳುವ ಪ್ರಯತ್ನವನ್ನು ನಿರಂತರವಾಗಿ ನಡೆಸುತ್ತಾ ಬಂದಿದೆ. ಈ ವ್ಯವಸ್ಥೆಯಲ್ಲಿದ್ದ ಕೆಲವು ಲೋಪದೋಷಗಳನ್ನು ತಿದ್ದುವ ನೆಪದಲ್ಲಿ ವಿಕೇಂದ್ರೀಕರಣವನ್ನೇ ನಾಶ ಮಾಡಲು ಹೊರಟಿದೆ. ತನ್ನ ಮಂತ್ರಿ ಶಾಸಕರಿಗೆ ಮುನ್ನಿನ ಸರ್ವಾಧಿಕಾರವನ್ನು ಮರಳಿ ಕೊಡಲು ಶತ ಪ್ರಯತ್ನ ನಡೆಸಿದೆ.

ಕೆಳ ಹಂತದ ಸಂಸ್ಥೆಗಳ ಅಧಿಕಾರವನ್ನು ಕಿತ್ತುಕೊಳ್ಳುವುದರ ಜೊತೆಗ 43 ವರ್ಷಗಳ ಕಾಲ ನಿರಂತರವಾಗಿ ಕಿತ್ತುಕೊಳ್ಳಲಾಗಿರುವ ರಾಜ್ಯಗಳ ಹಣ, ಅಧಿಕಾರಗಳನ್ನು ಮರಳಿ ಪಡೆಯಲು ಹಿಂದಿನ ಸರಕಾರ ಮಾಡುತ್ತಿದ್ದ ಪ್ರಯತ್ನ ಸಂಪೂರ್ಣವಾಗಿ ನಿಂತುಹೋಗಿರುವುದಲ್ಲದೆ ಕೇಂದ್ರದಿಂದ ಹೆಚ್ಚು ಸ್ವಾಯತ್ತತೆಯನ್ನು ಪಡೆದು ರಾಜ್ಯದ ಅಭಿವೃದ್ಧಿ ಮಾಡು-

ಕೋಮು ಭಾವನೆ ಹಬ್ಬಿಸುವ ಪ್ರಯತ್ನ

ಕಾಂಗ್ರೆಸ್(ಐ) ಸರ್ವಾಧಿಕಾರವನ್ನು ಜನವಿರೋಧಿ ಧೋರಣೆಗಳನ್ನು ಪ್ರದರ್ಶಿಸುತ್ತಿರುವಾಗಲೇ ರಾಜ್ಯದ ಜನರನ್ನು ಒಡಿಯುವ ಕೋಮು ಭಾವನೆಯನ್ನು ಬಡಿದೆಬ್ಬಿಸುವ ಕೆಲಸವನ್ನು, ಹಿಂದೂ ಮತೀಯವಾದಿಗಳು- ಮುಖ್ಯವಾಗಿ ಎರ್‌ಎಸ್‌ಎಸ್ ಹಾಗೂ ಅದಕ್ಕೆ ಕುಮ್ಮಕ್ಕಾಗಿರುವ ಬಿಜೆಪಿ-ನಡೆಸುತ್ತಿದೆ. ಹೆಗಡೇವಾರ್ ಜನ್ಮ ಶತಾಬ್ದಿಯಿಂದ ಆರಂಭವಾದ ರಾಮಶಿಲಾ ಪೂಜೆ, ವಿಜಯ ಯಾತ್ರೆ, ರಾಮ ಜ್ಯೋತಿ ಹಾಗೂ ರಥಯಾತ್ರೆಗಳೆಂದು ಕೋಮುದ್ವೇಷ ಪ್ರಚಾರ ಕಾರ್ಯಕ್ರಮಗಳು ಮಾತ್ರವಲ್ಲದೆ, ಜನರು ಸಂತೋಷದಿಂದ ನಕ್ಕು ನಲಿದಾಡಲು ಆಚರಿಸುವ ಗಣಪತಿ ಉತ್ಸವ, ದಸರಾಗಳಲ್ಲಿಯೂ ಕೋಮು ವಿಷ ಜ್ವಾಲೆಯನ್ನು ಕೋಮು ಗಲಭೆಗಳನ್ನು ಉಂಟುಮಾಡಲು ಬಳಸಲಾಗಿದೆ. ಪ್ರಜಾಸತ್ತಾತ್ಮಕ ಚಳುವಳಿಯ ವಿಷಯದಲ್ಲಿ ತನ್ನೆಲ್ಲಾ ಗೂಢಚರ್ಯೆ,ದಮನಕಾರಿ ಕ್ರಮಗಳನ್ನು ಹರಿಬಿಡುವ ಪೋಲೀಸ್ ಯಂತ್ರ ಕೋಮು ದ್ವೇಷ ಹಬ್ಬಿಸುವ ವಿಷಯದಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳದಿರುವುದು ಮಾತ್ರವಲ್ಲ ರಾಮನಗರದಲ್ಲಾದಂತೆ ತಾನೇ ಪಕ್ಷಪಾತ ರೀತಿಯಲ್ಲಿ ವರ್ತಿಸುತ್ತಿದೆ.

ಮಂಡಲ ವರದಿಯ ಅನುಷ್ಠಾನದ ವಿಷಯದಲ್ಲಿಯೂ, ಕಾಂಗ್ರೆ ಪಕ್ಷದ ಗೊಂದಲಕಾರಿ ನೀತಿ ವೀರೇಂದ್ರ ಪಾಟೀಲರ ವರದಿ ವಿರೋಧಿ ಹೇಳಿಕೆಗಳ ಮೂಲಕ ಮೀಸಲಾತಿ ವಿರೋಧಿ ಚಳುವಳಿಯ ಬೆಂಕಿಗೆ ತೈಲ ಎರೆದಿದ್ದಾರೆ. ಮೀಸಲಾತಿ ವಿರೋಧಿ ಚಳುವಳಿಗಳಲ್ಲಿ ಕಾಂಗ್ರೆ ಹಾಗೂ ಬಿಜೆಪಿ ಕಾರ್ಯಕರ್ತರ, ಹಿಂಬಾಲಕರ ಕೈವಾಡಗಳಿವೆ. ಜಾತೀಯ ವೈಷಮ್ಯವನ್ನು ಬೆಳೆಸುವ ಕೆಲಸ ಮಾಡುತ್ತಿವೆ.

ಒಂದು ಕಡೆ ಜನರ ಸಂಕಷ್ಟಗಳು ಹೆಚ್ಚಿ ಕಾಂಗ್ರೆ ಸರಕಾರದ ಬಗ್ಗೆ ಜನರಲ್ಲಿ ಅತೃಪ್ತಿ ಸಮಾಧಾನಗಳು ಹೆಚ್ಚುತ್ತಿರುವಲ್ಲಿ ಕೋಮುಬಾವನೆಗಳನ್ನು ಜಾತೀಯ ಭಾವನೆಗಳನ್ನು ಹಬ್ಬಿಸಲು ಪ್ರಯತ್ನಿಸುತ್ತಿರುವ ಈ ಸನ್ನಿವೇಶದಲ್ಲಿ ಎಲ್ಲಾ ಜಾತ್ಯಾತೀತ ಶಕ್ತಿಗಳು ಒಗ್ಗೂಡಿ ಜನರ ಸಮಸ್ಯೆಗಳ ಪರಿಹಾರಕ್ಕಾಗಿ ಜನರ ಅತೃಪ್ತಿ ಅಸಮಾಧಾನಗಳಿಗೆ ಅಭಿವ್ಯಕ್ತಿ ನೀಡುವುದಕ್ಕಾಗಿ ಕ್ರಮ ವಹಿಸಬೇಕೆಂದು ಸಿ.ಪಿ.ಐ(ಎಂ) ಕರೆ ನೀಡುತ್ತಿದೆ.

ಅದ್ವಾನಿ ಅಧ್ವಾನದ ಬಗ್ಗೆ.....

★ ಬಿ.ಜೆ.ಪಿ. ಅಧ್ಯಕ್ಷ ಎಲ್.ಕೆ. ಅದ್ವಾನಿಯವರ 'ರಥಯಾತ್ರೆ' 'ಅತ್ಯಂತ ಕೆಟ್ಟ ರಾಜಕೀಯ ತಂತ್ರಗಾರಿಕೆ'ಯಾಗಿದೆ.

ನ್ಯಾ! ವಿ.ಎಂ. ತಾರ್ಕುಂಡೆ, ಕೊಚ್ಚಿಯಲ್ಲಿ

★ ಅದ್ವಾನಿಯವರ ರಥಯಾತ್ರೆ ಕಾರ್ಯಕ್ರಮ 'ರಾಜಕೀಯ ತಂತ್ರ'. ಅದು ಅವರು ಈಗ ತೊಡಗಿರುವ ನೋಟು ಮತ್ತು ಓಟು ರಾಜಕಾರಣ. ಇದು ಮುಗ್ಧ ಹಾಗೂ ಹಿಂದೂ ಧಾರ್ಮಿಕವಾದಿಗಳನ್ನು ಬಳಸಿಕೊಳ್ಳುವುದಾಗಿದೆ.

ಈ ಯಾತ್ರೆಯಿಂದ ಕೋಮುಘರ್ಷಣೆ ಉಂಟಾದರೆ ಅದ್ವಾನಿ ಮತ್ತು ಅವರ ಪಕ್ಷವೇ ಅದಕ್ಕೆ ಹೊಣೆ.

-'ಪುರಿ ಜಗದ್ಗುರು' ಶಂಕರಾಚಾರ್ಯ ನಿರಂಜನ ದೇವತೀರ್ಥ ಸ್ವಾಮಿ.

★ .... ಆದರೆ ಸೋಮನಾಥವನ್ನು ರಥಯಾತ್ರೆ ಪ್ರಾರಂಭಕ್ಕೆ ಆಯ್ದುಕೊಂಡು ಮತ್ತು ಶ್ರೀರಾಮನ ರಾಜಧಾನಿಯಾಗಿದ್ದ ಅಯೋಧ್ಯೆಯನ್ನು ಅಲ್ಲಿ ಮಂದಿರ ನಿರ್ಮಾಣಕ್ಕೆ ಮುನ್ನಾದಿನ ತಲುಪುವಂತೆ ಕಾರ್ಯಕ್ರಮ ನಿಯೋಜಿಸಿರುವುದು ಏಕತೆ, ರಾಷ್ಟ್ರೀಯತೆಯ ಬಲವರ್ಧನೆಗೆ ಸಹಾಯಕವಾಗುವುದೆಂದು ನಂಬುವುದು ಕಷ್ಟ. ಏಕೆಂದರೆ ಸೋಮನಾಥದ ಶಿವಮಂದಿರವು ಘಜ್ನಿ ಮಹಮದನು ಭಾರತದ ಮೇಲೆ ದಾಳಿ ಮಾಡಿದಾಗಲೆಲ್ಲ ನಾಶಕ್ಕೊಳಗಾಯಿತೆಂದು ಇತಿಹಾಸ ಹೇಳುತ್ತದೆ. ಎರಡನೆಯದಾಗಿ ಅದ್ವಾನಿಯವರು ಸಂಚರಿಸಲಿರುವ ರಾಜ್ಯಗಳೆಲ್ಲ ಮೀಸಲಾತಿ ವಿರೋಧಿ ಚಳವಳಿಯಿಂದ ತತ್ತರಿಸುತ್ತಿವೆ. ಮೂರನೆಯದಾಗಿ, ಮಹಾಭಾರತ ಮಾದರಿ ರಥದಲ್ಲಿ ಭಾರತೀಯ ಜನತಾಪಕ್ಷದ ಅಧ್ಯಕ್ಷರ ಯಾತ್ರೆಯು ಮತೀಯ ಭಾವನೆಗಳನ್ನು ಕೆರಳಿಸುವ ಸಾಧ್ಯತೆಯಿಲ್ಲದಿಲ್ಲ. ಈ ಎಲ್ಲ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡರೆ ಏಕತೆ ಮತ್ತು ರಾಷ್ಟ್ರೀಯತೆ ಬಗ್ಗೆ ಜನಜಾಗೃತಿ ಎಂದು ಹಿಂದೂ ಮತ ರಾಜಕೀಯದಲ್ಲಿ ತಂತ್ರವನ್ನು ಇದರ ಹಿಂದೆ ಸ್ಪಷ್ಟವಾಗಿ ಕಾಣಬಹುದು......

ಶ್ರೀ ರಾಮಮಂದಿರ ನಿರ್ಮಾಣ ವಿಷಯದಲ್ಲಿ, ವಿಶ್ವ ಹಿಂದೂ ಪರಿಷತ್ ಹಾಗೂ ಭಜರಂಗದಳ ಮತ್ತಿತರ ಸಂಘಟನೆಗಳಿಗಿಂತ ಹೆಚ್ಚಿನ ಬಿಗಿ ನಿಲುವನ್ನು ಭಾರತೀಯ ಜನತಾಪಕ್ಷವೇ ಇತ್ತೀಚಿನ ದಿನಗಳಲ್ಲಿ ತಳೆದಿದೆ ಎನ್ನಬಹುದು.

'ಸಂಯುಕ್ತ ಕರ್ನಾಟಕ'
ಸಂಪಾದಕೀಯ ಸೆ. 28.

ಕೋಮುವಾದದ ವಿರುದ್ಧ ಎಡಪಕ್ಷಗಳ ತೀವ್ರ ಪ್ರಕ್ಷೋಭೆ

ಅಕ್ಟೋಬರ್ 23 ರಿಂದ 30 : ಕೋಮು ಸೌಹಾರ್ದ ವಾರಾಚರಣೆ

ಕೋಮು ಸೌಹಾರ್ದ ಮತ್ತು ರಾಷ್ಟ್ರೀಯ ಐಕ್ಯತೆಯ ರಕ್ಷಣೆಗೆ ಒಂದು ಅಖಿಲ ಭಾರತ ತೀವ್ರ ಪ್ರಕ್ಷೋಭೆ ನಡೆಸಲು ಎಡಪಕ್ಷಗಳು ನಿರ್ಧರಿಸಿವೆ. ಅಕ್ಟೋಬರ್ 23 ರಿಂದ 30ರವರೆಗೆ ದೇಶಾದ್ಯಂತ ಒಂದು ತೀವ್ರ ಪ್ರಚಾರ ಪ್ರಕ್ಷೋಭೆ ನಡೆಸಬೇಕೆಂದು ಅವು ಕರೆ ನೀಡಿವೆ. ಸೆಪ್ಟೆಂಬರ್ 25 ರಂದು ನಡೆದ ಸಿಪಿಐ(ಎಂ), ಸಿಪಿಐ, ಆರ್‌ಎಸ್‌ಪಿ ಮತ್ತು ಫಾರ್ವರ್ಡ್ ಬ್ಲಾಕ್ ಪಕ್ಷಗಳ ಸಭೆಯಲ್ಲಿ ಈ ಬಗ್ಗೆ ನಿರ್ಧರಿಸಲಾಯಿತು.

ದೇಶ ಈಗಾಗಲೇ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿರುವಾಗ ದೇವಸ್ಥಾನ-ಮಸೀದಿಯ ವಿವಾದಕ್ಕೆ ಗಾಳಿಹಾಕಿ ವಿಎಚ್.ಪಿ. ದೇಶದ ಐಕ್ಯತೆ ಮತ್ತು ಕೋಮು ಸೌಹಾರ್ದಕ್ಕೆ ದೊಡ್ಡ ಬೆದರಿಕೆ ಉಂಟುಮಾಡಿದೆ ಎಂದಿರುವ ನಾಲ್ಕು ಪಕ್ಷಗಳ ಹೇಳಿಕೆ ದೇಶದ ಎಲ್ಲಾ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳು ಕೋಮು ಸೌಹಾರ್ದ ಕಾಪಾಡಲು ಒಂದಾಗಬೇಕೆಂದು ಕರೆ ನೀಡಿದೆ. ಉತ್ತರ ಪ್ರದೇಶದಲ್ಲಿ ಈಗಾಗಲೇ ತೀವ್ರವಾಗಿ ನಡೆಯುತ್ತಿರುವ ಕೋಮುವಾದ-ವಿರೋಧಿ ಪ್ರಕ್ಷೋಭೆಯನ್ನು ಸ್ವಾಗತಿಸಿದ ಎಡಪಕ್ಷಗಳು, ಬಿಹಾರದಲ್ಲಿ ಎಡ-ಜಾತ್ಯಾತೀತ ಪಕ್ಷಗಳು ಜಂಟಿ ಪ್ರಯತ್ನ ನಡೆಸುತ್ತಿವೆಯೆಂಬುದನ್ನು ಗಮನಿಸುತ್ತಾ ಇದೇ ರೀತಿ ದೇಶಾದ್ಯಂತ ಕೋಮು ಸೌಹಾರ್ದದ ರಕ್ಷಣೆಗೆ ಜನರನ್ನು ಅಣಿನೆರಸಬೇಕೆಂದು ಅವು ಕರೆ ನೀಡಿವೆ. ರ್‍ಯಾಲಿಗಳು ಸಾರ್ವಜನಿಕ ಸಭೆಗಳು ಮತ್ತು ವಿಧಾನಗಳ ಮೂಲಕ ದೇಶದಲ್ಲಿ ಕೋಮು ಸೌಹಾರ್ದದ ವಿವಾದದ ಶಾಂತಿಯುತ ಪರಿಹಾರದ ವಾತಾವರಣ ನಿರ್ಮಿಸಲಾಗುವುದು.

ಅಕ್ಟೋಬರ್ 30 ರಂದು ಅಯೋಧ್ಯೆಯಲ್ಲಿ ದೇವಸ್ಥಾನ ಕಟ್ಟಲು ವಿ.ಎಚ್.ಪಿ.ಯ ಸಿದ್ಧತೆಗಳು, ಈ ಪ್ರಶ್ನೆಯ ಮೇಲೆ ಉದ್ರೇಕ ಎಬ್ಬಿಸುವ ಪ್ರಯತ್ನ, ಬಿಜೆಪಿ ಅಧ್ಯಕ್ಷ ಅದ್ವಾನಿ ಆರಂಭಿಸಿರುವ ರಥಯಾತ್ರೆ ಬಗ್ಗೆ ಎಡಪಕ್ಷಗಳ ಸಭೆ ತೀವ್ರ ಆತಂಕ ವ್ಯಕ್ತ ಪಡಿಸಿದವು. ರಥಯಾತ್ರೆ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುತ್ತದೆ ಎಂದು ಅವು ಅಭಿಪ್ರಾಯ ಪಟ್ಟವು. ಮದ್ರಾಸಿನಲ್ಲಿ ನಡೆದ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆಯ ನಿರ್ಣಯವು ವಿವಾದದ ಸೌಹಾರ್ದಯುತ ಪರಿಹಾರ ಹಾಗೂ ನ್ಯಾಯಾಲಯ ನಿರ್ಣಯಗಳನ್ನು ಒಪ್ಪುವ ಬಗ್ಗೆ ಒಂದು ಉತ್ತಮ ಆಧಾರ ನಿರ್ಮಿಸಿದೆಯೆಂದು ಅವು ಹೇಳಿವೆ.

ಒಳಪುಟಗಳಲ್ಲಿ

ಮಿಂಚಿನಂತೆ ಮರೆಯಾದವ....

– ವಿಶ್ವ

36 ರ ತರುಣ ಶಂಕರ್‌ನಾಗ್ ಸೆಪ್ಟೆಂಬರ್ 30 ರಂದು ದಾವಣಗೆರೆ ಬಳಿ ನಡೆದ ಅಪಘಾತದಲ್ಲಿ ಮೃತಪಟ್ಟರು. ಇಷ್ಟು ಸಣ್ಣ ಪ್ರಾಯದಲ್ಲಿಯೇ ಅವರು ಉತ್ತಮ ನಟ, ನಿರ್ದೇಶಕ, ಚಲನಚಿತ್ರರಂಗದ ಆಲ್‌ರೌಂಡರ್ ಆಗಿ ಹೆಸರುಗಳಿಸಿದ್ದರು.

ಉತ್ತರ ಕನ್ನಡ ಜಿಲ್ಲೆಯವರಾದ ಶಂಕರ್ ಉದ್ಯೋಗಕ್ಕಾಗಿ ಮುಂಬಯಿಯಲ್ಲಿದ್ದಾಗ ಮರಾಠಿ ರಂಗಭೂಮಿಯಲ್ಲಿ ಸಕ್ರಿಯರಾಗಿದ್ದರು. ಅನಂತರ ಸುಮಾರು ಒಂದು ದಶಕದ ಹಿಂದೆ ಖ್ಯಾತ ನಿರ್ದೇಶಕ ಗಿರೀಶ್‌ಕಾರ್ನಾಡರ ನಿರ್ದೇಶನದ 'ಒಂದಾನೊಂದು ಕಾಲದಲ್ಲಿ' ಚಿತ್ರದ ಮೂಲಕ ಇವರು ಬೆಳ್ಳಿ ತೆರೆಗೆ ಕಾಲಿಟ್ಟರು. ಇನ್ನೂ ನೆನಪಿನಲ್ಲಿ ಉಳಿಯುವಂತೆ ನಿರ್ವಹಿಸಿರುವ ಉತ್ತಮ ನಟನೆಗಾಗಿ ಶಂಕರನಾಗ್ ಮೊದಲ ಚಿತ್ರದಲ್ಲೇ ಪ್ರಶಂಸೆ ಗಳಿಸಿದರು. ಚಿತ್ರ ಅಂತರರಾಷ್ಟ್ರೀಯ ಮನ್ನಣೆಯನ್ನೂ ಗಳಿಸಿತು. ಅನಂತರ ಅವರು ಸೀತಾ ರಾಮು, ಮೂಗನಸೇಡು, ಆಟೋರಾಜ ಚಿತ್ರದ ಪಾತ್ರಗಳಿಗೆ ಉತ್ತಮ ನಟ ಪ್ರಶಸ್ತಿ ಗಳಿಸಿದರು.

ರಂಗಭೂಮಿ, ಚಿತ್ರ ನಟನೆ ಜತೆಗೆ ಚಲನಚಿತ್ರ ನಿರ್ದೇಶನಕ್ಕೂ, ಕೈಹಾಕಿದ ಶಂಕರ್‌ನಾಗ್, ತಮ್ಮ ನಿರ್ದೇಶನದ ಮೊದಲ ಚಿತ್ರ 'ಮಿಂಚಿನ ಓಟ'ಕ್ಕೆ ಶ್ರೇಷ್ಠ ನಿರ್ದೇಶಕ ಪ್ರಶಸ್ತಿಗಳಿಸಿ ಮಿಂಚಿನ ಸಾಧನೆಯನ್ನು ಮೆರೆದರು. ಈ ಮೊದಲೇ ಪ್ರಸ್ತಾಪಿಸಿದ ಆಕ್ಸಿಡೆಂಟ್ ಚಿತ್ರಕ್ಕೂ ಉತ್ತಮ ನಿರ್ದೇಶಕ ಪ್ರಶಸ್ತಿ ಸಿಕ್ಕಿತು. ಹೊಸ ಅಲೆಯ ಮನರಂಜನೀಯ ಚಿತ್ರಗಳು ಕನ್ನಡ ಚಿತ್ರಪ್ರೇಮಿಗಳಿಗೆ ಅವರ ಅಪೂರ್ವ ಕೊಡುಗೆ. ಸಾಮಾನ್ಯವಾಗಿ ಮನರಂಜನೆ ಎಂದರೆ ದ್ವಂದ್ವಾರ್ಥ ಸಂಭಾಷಣೆ, ಅಶ್ಲೀಲ ದೃಶ್ಯಗಳು ಇರಬೇಕು ಎಂದು ಕೆಲವು ನಿರ್ಮಾಪಕರ ಅಂಬೋಣ. ಮಿಂಚಿನ ಓಟ, ನೋಡಿ ಸ್ವಾಮಿ ನಾವಿರೋದು ಹೀಗೆ ಮೊದಲಾದವು ಉದಾಹರಣೆ. ರಾಜ್ಯದಲ್ಲೇ ಚಲನ ಚಿತ್ರ ಅಭಿವೃದ್ಧಿಗೆ ಅವಕಾಶ ಆಗುವ ಉದ್ದೇಶದಿಂದ 'ಸಂಕೇತ್' ಧ್ವನಿ ಮುದ್ರಣ ಕೇಂದ್ರವನ್ನೂ ಸ್ಥಾಪಿಸಿದ್ದರು. ಮಕ್ಕಳ ಚಿತ್ರ ಬಗ್ಗೆಯೂ ಈ ವಿಶಿಷ್ಟ ಪ್ರತಿಭಾವಂತ ವಿಶೇಷ ಆಸಕ್ತಿ ಇಟ್ಟುಕೊಂಡಿದ್ದರು. ಖ್ಯಾತ ಸಾಹಿತಿ ಆರ್.ಕೆ. ನಾರಾಯಣ್ ಅವರ 'ಮಾಲ್ಗುಡಿ ಡೇಸ್' ಅನ್ನು ದೂರದರ್ಶನಕ್ಕಾಗಿ ನಿರ್ದೇಶಿಸಿ ಈ ಕ್ಷೇತ್ರದಲ್ಲೂ ತಮ್ಮ ಪ್ರತಿಭೆಯನ್ನು ಛಾಪನ್ನು ಒತ್ತಿದ್ದರು - ಶಂಕರ್ ಈ ಸರಣಿ ಅಂತರರಾಷ್ಟ್ರೀಯ ಮನ್ನಣೆ ಗಳಿಸಿತು.

ರಂಗಭೂಮಿ - ಚಲನ ಚಿತ್ರ ಮಾತ್ರವಲ್ಲದೆ ಸಮಾಜದ ಇತರ ಕ್ಷೇತ್ರಗಳಲ್ಲಿಯೂ ಆಸಕ್ತಿ ಬೆಳೆಸಿಕೊಂಡಿದ್ದ ಶಂಕರ್‌ನಾಗ್ ರಾಜಕೀಯವನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದರು. ವಿದ್ಯಾರ್ಥಿ ದೆಸೆಯಿಂದಲೂ ಸರ್ವಾಧಿಕಾರಿ ವಿರೋಧಿ ಮನೋಭಾವ ಬೆಳೆಸಿಕೊಂಡಿದ್ದ ಅವರು, ಕರ್ನಾಟಕದಲ್ಲಿ 1985 ರಲ್ಲಿ ನಡೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಅಣ್ಣ ಅನಂತ್‌ನಾಗ್‌ರ ಜತೆಗೆ ರಾಜ್ಯದ್ಯಂತ ಸಂಚರಿಸಿ ಜನತಾ ಪಕ್ಷದ ಪರವಾಗಿ ಪ್ರಚಾರ ಮಾಡಿದ್ದರು. ಇತ್ತೀಚಿನ ಲೋಕಸಭಾ, ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ರಂಗಕ್ಕಿಳಿದಿದ್ದರು.

ಒಟ್ಟಿನಲ್ಲಿ, ಸದಭಿರುಚಿಯ ಚಲನಚಿತ್ರಗಳನ್ನು ನೋಡಬೇಕೆನ್ನುವವರಿಗೆ, ಉತ್ತಮ ನಾಟಕಗಳ ಪ್ರದರ್ಶನ ಆಶಿಸುತ್ತಿದ್ದವರಿಗೆ ಶಂಕರ್‌ನಾಗ್ ಅಕಾಲಿಕ ಸಾವು ಯಾವ ದೃಷ್ಟಿಯಲ್ಲಿ ಕಂಡರೂ ನಷ್ಟವೇ.

ವೈವಿಧ್ಯಮಯ ಚಿತ್ರಗಳು ಹಾಗೂ ಅರ್ಥಪೂರ್ಣ ಚಿತ್ರದ ಜತೆಗೆ ಕುಸುರಿ ಕೆಲಸದಂತೆ ಎದ್ದುಕಾಣುತ್ತಿದ್ದ ಅಭಿನಯದ ಮೂಲಕ ಸೃಜನಶೀಲ ಚಿತ್ರಗಳನ್ನು ಜನರ ಬಳಿಗೆ ಒಯ್ಯುವ ಮಹತ್ತರ ಕನಸನ್ನು ಶಂಕರ್ ಕಂಡಿದ್ದರು. ಆದರೆ ತುಂಬಾ ಕಡಿಮೆ ಎನ್ನಬಹುದಾದ ಅವಧಿಯಲ್ಲಿ ಮಿಂಚಿನ ಓಟದಲ್ಲಿಯೇ ಮರೆಯಾಗಿ ಚಿತ್ರಜಗತ್ತಿನಲ್ಲಿ 'ಆಕ್ಸಿಡೆಂಟ್' ಉಂಟುಮಾಡಿದ್ದಾರೆ.

ಶ್ರೀ ಶಂಕರ್‌ನಾಗ್‌ರವರ ಆಕಸ್ಮಿಕ ನಿಧನಕ್ಕೆ ಸಿಐಟಿಯು ಕರ್ನಾಟಕ ರಾಜ್ಯಸಮಿತಿ ಶೋಕ

ಪ್ರತಿಭಾವಂತ ಯುವನಟ ಶಂಕರ್‌ನಾಗ್ ಹಾಗೂ ಅವರ ಕಾರಿನ ಚಾಲಕ ತಾ 30.9.90 ರಂದು ದಾವಣಗೆರೆ ಸಮೀಪ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾರು ಅಪಘಾತದಲ್ಲಿ ದುರ್ಮರಣಕ್ಕೆ ಈಡಾಗಿರುವುದಕ್ಕೆ ಸಿಐಟಿಯು ಕರ್ನಾಟಕ ರಾಜ್ಯಸಮಿತಿಯು ತನ್ನ ಅತೀವ ಶೋಕವನ್ನು ವ್ಯಕ್ತಪಡಿಸುತ್ತದೆ. ಶಂಕರ್‌ನಾಗ್ ಒಬ್ಬ ಖ್ಯಾತ ನಟ, ನಿರ್ದೇಶಕ, ನಿರ್ಮಾಪಕ, ರಂಗಭೂಮಿ ನಟ ಮಾತ್ರ ಅಲ್ಲದೆ ಪುರೋಗಾಮಿ ವಿಚಾರಣೆ ಹೊಂದಿದ್ದು ಒಬ್ಬ ಒಳ್ಳೆಯ ನಟನನ್ನು ಕಳೆದುಕೊಂಡಿರುವುದಲ್ಲದೆ ಒಬ್ಬ ಪುರೋಗಾಮಿ ವಿಚಾರವಂತನನ್ನೂ ರಾಜ್ಯದ ಜನತೆ ಕಳೆದುಕೊಂಡಿದೆ.

ಸುಪ್ರಸಿದ್ಧ ಚಲನಚಿತ್ರನಟ ಮತ್ತು ರಂಗಭೂಮಿನಟ ದಿವಂಗತ ಶ್ರೀ ಶಂಕರ್‌ನಾಗ್ ಆಕಸ್ಮಿಕ ನಿಧನಕ್ಕೆ ಸಿ.ಪಿ.ಐ. (ಎಂ) ರಾಜ್ಯ ಸಮಿತಿಯ ಶ್ರದ್ಧಾಂಜಲಿ.

ತಾ: 1.10.90 ರಂದು . ಸೂರ್ಯನಾರಾಯಣರಾವ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಿ.ಪಿ.ಐ(ಎಂ) ರಾಜ್ಯಸಮಿತಿಯು ಸುಪ್ರಸಿದ್ಧ ಚಲನಚಿತ್ರ ಹಾಗೂ ಸ್ವತ: ರಂಗಭೂಮಿಯ ಚಳವಳಿಯನ್ನು ಬೆಳೆಸಲು ಕಾರಣಿಭೂತರಾಗಿದ್ದ ಹಾಗೂ ಸ್ವತ: ರಂಗಭೂಮಿಯ ನಟರಾಗಿದ್ದ ಶ್ರೀ ಶಂಕರ್‌ನಾಗ್ ಅವರು ಅಪಘಾತದಲ್ಲಿ ಮರಣ ಹೊಂದಿದ್ದಕ್ಕೆ ತನ್ನ ತೀವ್ರ ಸಂತಾಪವನ್ನು ಮತ್ತು ದು:ಖವನ್ನು ವ್ಯಕ್ತಪಡಿಸಿದೆ.

ಶ್ರೀ ಶಂಕರ್‌ನಾಗ್ ಅವರು ಕರ್ನಾಟಕದಲ್ಲಿ ರಂಗಭೂಮಿಯ ಚಳುವಳಿಯ ಬೆಳವಣಿಗೆಗೆ ಅಪಾರ ಕೊಡುಗೆಯನ್ನು ಕೊಟ್ಟಿರುವುದು ಅಷ್ಟೆ ಅಲ್ಲದೆ, ರಾಜ್ಯದಲ್ಲಿ ಚಲನಚಿತ್ರ ಉದ್ಯಮದ ಬೆಳವಣಿಗೆಗೆ ತುಂಬಾ ಕಾಣಿಕೆಯನ್ನು ನೀಡಿದ್ದಾರೆ. ಹಾಗೆ ಶ್ರೀ ಶಂಕರ್‌ನಾಗ್ ಅವರು ಪ್ರಾರಂಭದಿಂದಲೂ ರಾಜ್ಯದಲ್ಲಿನ ಪ್ರಗತಿಪರ ಚಳುವಳಿಗಳ ಬಗ್ಗೆ ಆಸಕ್ತಿ ವಹಿಸಿದ್ದರು. ಪ್ರಗತಿಪರ ಮತ್ತು ಪ್ರಜಾಸತ್ತಾತ್ಮಕ ರಾಜಕೀಯ ಪಕ್ಷಗಳ ಚಳುವಳಿ ಗಳನ್ನು ಬೆಂಬಲಿಸುತ್ತಿದ್ದರು. ತಾನೇ ಒಂದು ಉದ್ಯಮವಾಗಿ ಬೆಳೆಯುತ್ತಿದ್ದ ಈ ಪ್ರಸಿದ್ಧ ಕಲಾವಿದನಿಗೆ ಸಿ.ಪಿ.ಐ(ಎಂ) ರಾಜ್ಯ ಸಮಿತಿಯು ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ. ಅಷ್ಟೇ ಅಲ್ಲದೆ ಅಪಘಾತದಲ್ಲಿ ಗಾಯಗೊಂಡಿರುವ ಅವರ ಪತ್ನಿ ಅರುಂಧತಿ ಮತ್ತು ಮಗಳು ಕಾವ್ಯ ಅವರುಗಳು ಶೀಘ್ರ ಗುಣಮುಖ ಆಗಲಿ ಎಂದು ಹಾರೈಸುತ್ತದೆ.

ಲಂಕೇಶ್ ಪತ್ರಿಕೆ ನೌಕರರ ಹೋರಾಟ

'ಲಂಕೇಶ್ ಪತ್ರಿಕೆ' ಕರ್ನಾಟಕದ 80 ರ ದಶಕದ ಆರಂಭದಲ್ಲಿ ಒಂದು ಹೊಸ ತಿರುವನ್ನು ಕೊಟ್ಟ ಪತ್ರಿಕೆ ಎಂದು ಪರಿಗಣಿತವಾಗಿದೆ ಇಂದು ಅದೇ ಪತ್ರಿಕೆ ಮತ್ತು ಅದರ ಮಾಲಿಕ, ಖ್ಯಾತ ಸಾಹಿತಿ ಪಿ.ಲಂಕೇಶ್ ಪ್ರಗತಿಪರ ಜನರ ಕೆಂಗಣ್ಣಿಗೆ ಬಲಿಯಾಗಿದ್ದಾರೆ. ಇದು ಸ್ವತಃ ಲಂಕೇಶ್ ಅವರೇ ಸೃಷ್ಟಿಸಿಕೊಂಡಿರುವ ಸ್ಥಿತಿಯಾಗಿದೆ

ಇತ್ತೀಚೆಗೆ ಲಂಕೇಶ್ ಪತ್ರಿಕೆಯಲ್ಲಿ ಕಂಪ್ಯೂಟರನ್ನು ಅಳವಡಿಸಿ ಏಕಾಏಕಿಯಾಗಿ 10 ಮಂದಿ ಕಂಪೋಸಿಟರ್‌ಗಳನ್ನು ಯಾವುದೇ ಸೂಕ್ತ ನೋಟೀಸ್ ಹಾಗೂ ಪರಿಹಾರ ಸೌಲಭ್ಯಗಳನ್ನು ನೀಡದೆ ವಜಾ ಮಾಡಲಾಯಿತು. ಈ ನೌಕರರಿಗೆ ಬೆಂಬಲ ನೀಡಬಹುದೆಂಬ ಶಂಕೆಯಿಂದ ಸಂಪಾದಕೀಯ ಸಿಬ್ಬಂದಿಗಳಿಗೆ 'ಕೇವಿಯಟ್' ಕೂಡ ನೀಡಿದರು. ಸಂಪಾದಕೀಯ ವರ್ಗದವರ ವಿರುದ್ಧ ಪೋಲೀಸರಿಗೆ ದೂರು ಸಲ್ಲಿಸಿದರು. ಲಂಕೇಶ್ ಕಚೇರಿ ಪೋಲೀಸ್ ರಾಜ್ಯವಾಗಿದ್ದಲ್ಲದೆ ಭದ್ರತಾ ಸಿಬ್ಬಂದಿಗಳ ಹೆಸರಿನಲ್ಲಿ ಗೂಂಡಾಗಳನ್ನು ಒಳಗೆ ಕರೆಸಿಕೊಳ್ಳಲಾಯಿತು.

ಸೆಪ್ಟೆಂಬರ್ 17 ರಂದು ಸಮಸ್ಯೆಯ ಬಗೆಗೆ ಚರ್ಚಿಸಲು ಹೋದ ಪತ್ರಿಕೆ ಕಲಾವಿದರಾದ ಚಂದ್ರಶೇಖರ ಗುಬ್ಬಿ, ಪಂಜುಗಂಗುಲಿ ಮತ್ತು ಶೇಖರಪ್ಪರ ಮೇಲೆ ಹಲ್ಲೆನಡೆಸಿದರು. ಸಂಪಾದಕೀಯ ವರ್ಗದವರ ಹಾಜರಿ ಪುಸ್ತಕಕ್ಕೆ ಸಹಿಹಾಕದಂತೆ ತಡೆಯಲಾಗುತ್ತಿದೆ.

ಸದಾ ಪ್ರಗತಿಪರತೆ, ನ್ಯಾಯ, ಸಮಾಜವಾದ, ಭ್ರಷ್ಟಾಚಾರದ ವಿರುದ್ಧ ಮಾತನಾಡುತ್ತಿದ್ದ ಲಂಕೇಶರು ನಡೆಸುತ್ತಿರುವ ಅನ್ಯಾಯವನ್ನು ಪ್ರತಿಭಟಿಸುತ್ತಿರುವ ನೌಕರ ವೃಂದಕ್ಕೆ ರಾಜ್ಯದ ಪ್ರಮುಖ ಸಾಹಿತಿಗಳು ಬೆಂಬಲ ಸಾರಿದ್ದಾರೆ.

ಸೆ.24 ರಂದು ಲಂಕೇಶ್ ಅನ್ಯಾಯ ಪ್ರತಿಭಟಿಸಿ ಬೆಂಗಳೂರಿನಲ್ಲಿ ಹಲವು ಸಂಘ ಸಂಸ್ಥೆಗಳ ಆಶ್ರಯದಲ್ಲಿ ಮೌನ ಮೆರವಣಿಗೆ ಮತ್ತು ಸಭೆ ನಡೆಯಿತು. ಡಾ/ ಎಂ. ಚಿದಾನಂದ ಮೂರ್ತಿ, ಬರಗೂರು ರಾಮಚಂದ್ರಪ್ಪ, ಡಾ ವಿಜಯಾ, ಚಿತ್ರನಟ ಅಶೋಕ್, ಜೆ.ಕೆ.ಸತ್ಯ, ವೈ.ಎಸ್.ವಿ. ದತ್ತ, ರಮ್ಜಾನ್‌ದರ್ಗಾ, ಆರ್.ಜಿ.ಹಳ್ಳಿ ನಾಗರಾಜ್, ನರಸಿಂಹನ್ ಮೊದಲಾದವರು ಮಾತನಾಡಿದರು.

ಲಂಕೇಶ್‌ರದು ಮೊದಲಿನಿಂದಲೂ ದ್ವಿಮುಖ ವ್ಯಕ್ತಿತ್ವವೇ ಅದು ಈಗ ಇನ್ನಷ್ಟು ಸ್ಫುಟವಾಗಿ ಹೊರಹೊಮ್ಮಿದೆಯಷ್ಟೆ ಎನ್ನುವುದು ಬಹುತೇಕ ಎಲ್ಲಾ ಭಾಷಣಕಾರರ ಮಾತಿನ ತಿರುಳಾಗಿತ್ತು. ಅವರು ದೈಹಿಕ ಹಲ್ಲೆಯನ್ನು ನಡೆಸಲೂ ಮುಂದಾಗಿರುವುದರಿಂದ ಲಂಕೇಶ್ ಈಗ ಕೇವಲ 'ಸಾಹಿತ್ಯಿಕ ಗೂಂಡಾ' ಆಗಿರದೆ 'ಗೂಂಡಾ' ಆಗಿದ್ದಾರೆ ಎಂದು ಚಿದಾನಂದ ಮೂರ್ತಿ ಹೇಳಿದರು.

ಡಿವೈಎಫ್‌ಐ ದಶಮಾನೋತ್ಸವ

ಮಂಗಳೂರಿನ ಬಡಗ ಎಡಪದವು ಡಿವೈಎಫ್‌ಐ ಘಟಕದ ವತಿಯಿಂದ ದಶಮಾನೋತ್ಸವದ ಅಂಗವಾಗಿ ಸೈಕಲ್ ರೇಸ್ ಸ್ಪರ್ಧೆಯನ್ನು ಏರ್ಪಡಿಸಿತ್ತು. ಡಿವೈಎಫ್‌ಐನ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಕಾರ್ಯದರ್ಶಿ ಆರ್.ಜಯಕುಮಾರ್ ಸ್ಪರ್ಧೆಯನ್ನು ಉದ್ಘಾಟಿಸುತ್ತಾ ಡಿವೈಎಫ್‌ಐ ಸ್ಥಾಪನೆಯಾದ ವರ್ಷದಿಂದ ಸರ್ವರಿಗೂ ಶಿಕ್ಷಣ ಮತ್ತು ಸರ್ವರಿಗೂ ಉದ್ಯೋಗ ಎಂಬ ಬೇಡಿಕೆಯಿಟ್ಟು ಹೋರಾಡುತ್ತಾ ಬಂದಿದೆ. ಅದನ್ನು ಮುಂದುವರಿಸುತ್ತಾ ಯುವಜನರ ಸಾಂಸ್ಕೃತಿಕ, ಕ್ರೀಡೆ ಮುಂತಾದುವುಗಳಿಗೆ ಸ್ಪಂದಿಸುತ್ತಿದೆ ಎಂದು ತಿಳಿಸಿದರು.

ಸೈಕಲ್ ರೇಸ್‌ನಲ್ಲಿ ವಿಜೇತರಾದ ...ಗೌಡ, ರಾಮೇಗೌಡ ಹಾಗೂ ಗಂಗಾಧರ್‌ರವರಿಗೆ ಬೆಳ್ಳಾಚೂರು ಶಾಲೆಯ ಶಾರೀರಕ ಶಿಕ್ಷಕ ರಾಘವ ವೈದ್ಯರವರು ಬಹುಮಾನ ವಿತರಿಸಿದರು

ಕೋಮು ಸೌಹಾರ್ದತೆಗಾಗಿ ಕರೆ

ಸೋಮೇಶ್ವರ ಗ್ರಾಮದ ದಾರಂದಬಾಗಿಲು ಪ್ರದೇಶದಲ್ಲಿ ಸೆಪ್ಟೆಂಬರ್ 21 ರಂದು ನಡೆದ ಡಿವೈಎಫ್‌ಐನ ವಿಸ್ತೃತ ಸಭೆಯಲ್ಲಿ ರಾಮಜನ್ಮ ಭೂಮಿ -ಬಾಬ್ರಿ ಮಸೀದಿ ವಿವಾದ ಹಾಗೂ ಕಾಶ್ಮೀರಿ ಸಮಸ್ಯೆಕುರಿತು ಬೇರೆ ಬೇರೆ ಕೋಮಿಗೆ ಸೇರಿದ ಮತೀಯ ಸಂಘಟನೆಗಳು ಜನರ ಧಾರ್ಮಿಕ ಭಾವನೆಯನ್ನು ಕೆರಳಿಸಿ ಘರ್ಷಣೆಗೆ ಆಸ್ಪದವೀಯುವಂತಹ ಕ್ರಮಗಳನ್ನು ಅನುಸರಿಸುತ್ತಿರುವುದನ್ನು ಖಂಡಿಸಿ ಈ ಬಗ್ಗೆ ಯುವಜನರು ಜಾಗರೂಕರಾಗಿರಬೇಕೆಂದು ಡಿವೈಎಫ್‌ಐ ಉಳ್ಳಾಲ ವಲಯ ಸಮಿತಿ ತಿಳಿಸಿದೆ.

ಇತಿಹಾಸ ಪುಟಗಳಿಂದ

ವರ್ಗ ಜಾಗೃತಿ ಮೂಡಿಸಿದರು

1939ರ ಕಾಲಘಟ್ಟದಲ್ಲಿ ಕಮ್ಯುನಿಸ್ಟ್ ಪಕ್ಷದ ಮೇಲೆ ನಿಷೇಧ ಆಜ್ಞೆ ಇದ್ದಾಗ ಒಂದು ಕಡೆ ಅವರು ಭೂಗತ ಚಟುವಟಿಕೆಗಳಲ್ಲಿ ತೊಡಗಬೇಕಾಯಿತು. ಕಮ್ಯುನಿಸ್ಟ್ ಪಕ್ಷದಸದಸ್ಯ ಬಲವನ್ನು ಹೆಚ್ಚಿಸಲು ಊರೂರುಗಳಲ್ಲಿ ಹಗಲು ರಾತ್ರಿಯೆನ್ನದೆ ಅಲೆದಾಡಬೇಕಾಯಿತು. ಎಲ್ಲ ಕಡೆಗಳಲ್ಲಿಯೂ ಕಾರ್ಮಿಕ ಸಂಘಗಳ ಸದಸ್ಯರುಗಳು, ರೈತರು, ಕೂಲಿಗಾರರು ಮತ್ತು ಪುರೋಗಾಮಿಗಳು ಭಾರಿ ಸಂಖ್ಯೆಯಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಸೇರತೊಡಗಿದ್ದರು.

ಇನ್ನೊಂದು ಸಂದರ್ಭದಲ್ಲಿ ಕೃಷ್ಣ ಪಿಳ್ಳೆಯವರು ತಮ್ಮ ಕ್ರಾಂತಿಕಾರಿ ಚಟುವಟಿಕೆಗಳಿಂದ ಜನರಲ್ಲಿ ಎಷ್ಟು ಬದಲಾವಣೆ ಉಂಟಾಗಿದೆ ಎಂಬುದನ್ನು ಪ್ರತ್ಯಕ್ಷದಲ್ಲಿ ಕಾಣುವ ಹಂಬಲ ಉಂಟಾಯಿತು. ಅದೇ ಆಲೋಚನೆಯಲ್ಲಿ ಕುಳಿತಿದ್ದಾಗ, ಎರಾಮಲ್ಲೂರಿನಲ್ಲಿ ನಡೆಯಲಿದ್ದ ಒಂದು ಸಮಾವೇಶಕ್ಕೆ ತಪ್ಪದೆ ಬರುವುದಾಗಿ ಪಿ.ಎ.ಸೋಲೋಮನ್‌ರಿಗೆ ಮಾತು ಕೊಟ್ಟದ್ದು ನೆನಪಾಯಿತು. ಅವಿರಾ ತರಗನ್ ಎಂಬ ಭೂಮಾಲಿಕರೊಬ್ಬರ ಮನೆಯಲ್ಲಿ ದಾರಿ ಕಾಯುತ್ತಾ ಕೂಡುವೆನೆಂದು ಸೋಲೋಮನ್ ಹೇಳಿದ್ದರು. ಅವಿರಾ ತರಗನ್ ಒಬ್ಬ ಭೂಮಾಲಿಕರು. ತಿರುವಾಂಕೂರಿನಲ್ಲಿ ಜವಾಬ್ದಾರಿ ಸರಕಾರದ ಸ್ಥಾಪನೆಗಾಗಿ ನಡೆಯುತ್ತಿದ್ದ ಚಳುವಳಿಯಲ್ಲಿ ಭಾಗವಹಿಸಿದವರು. ಆ ಪ್ರದೇಶದಲ್ಲಿನ ಹುರಿ ಹಗ್ಗ ಕಾರ್ಮಿಕರ ಸಂಘದ ಅಧ್ಯಕ್ಷರೂ ಆಗಿದ್ದರು.

ಕೃಷ್ಣ ಪಿಳ್ಳೆಯವರು ಒಬ್ಬ ಚಿಲ್ಲರೆ ವ್ಯಾಪಾರಿಯಂತೆ ಎರಡು ಬದಿಗಳಲ್ಲೂ ಉದ್ದಕ್ಕೆ ಇಳಿಬಿದ್ದಿದ್ದ ಖಾಕಿ ಒಳಚಡ್ಡಿ, ಅದರ ಮೇಲೊಂದು ಹರಕು ಲುಂಗಿ ಮತ್ತು ಹಳೆಯ ಒಂದು ಶರಟು ಹಾಕಿಕೊಂಡು ಹೊರಟರು.

ಹೊಲಗದ್ದೆಗಳ ಮಧ್ಯೆ ಒಂದು ಕಿರಿದಾದ ರಸ್ತೆ, ಬೆಳದಿಂಗಳಿನಲ್ಲಿ ಪಚ್ಚೆ ಪೈರುಗಳು ಲಕಲಕನೆ ಹೊಳೆಯುತ್ತಿದ್ದವು. ಮೈಗೆ ಹಿತವಾದ ತಂಪು ಗಾಳಿ. ಆ ರಸ್ತೆಯಲ್ಲಿ ಹಾಯ್ದು ಕೃಷ್ಣಪಿಳ್ಳೆಯವರು ತರಗನ್ ಅವರ ಮನೆಗೆ ಬರುತ್ತಿದ್ದಾಗ ಇಬ್ಬರು ಮಧ್ಯವಯಸ್ಸಿನ ರೈತರು ಕಷ್ಟ ಪಟ್ಟು ಬೆಳೆಸಿದ್ದ ಬಾಳೆಕಾಯಿಗಳ ದೊಡ್ಡ ಗೊಂಚಲನ್ನು ತಮ್ಮ ಹೆಗಲ ಮೇಲೆ ಹೊತ್ತುಕೊಂಡು ಅದೇ ನಿಟ್ಟಿನಲ್ಲಿ ಹೋಗುತ್ತಿದ್ದುದು ಕಂಡಿತು. ಕೃಷ್ಣ ಪಿಳ್ಳೆ ಸರಸರನೆ ನಡೆದು ಅವರ ಬಳಿ ಬಂದು ಹೇಳಿದರು.

'ಎಲ್ಲಿಗೆ ಹೊರಟದ್ದೀರಿ?

'ಯಜಮಾನರ ಕಡೆಗೆ ಇವುಗಳನ್ನು ಕೊಟ್ಟು ಬರಲು'. ಒಬ್ಬ ರೈತ ಹೇಳಿದ.

' ಇದು ನೀವೇ ಕಷ್ಟ ಪಟ್ಟು ಬೆಳೆಸಿದ್ದು ಅಲ್ವಾ, ಇದನ್ನು ಕೊಟ್ರೆ ನಿಮ್ಮ ಯಜಮಾನರು ನಿಮಗೆ ಏನು ಕೊಡುತ್ತಾರೆ?'

'ಅವರ್ಯಾಕೆ ಕೊಡಬೇಕು. ನಾವು ಅವರ ಗೇಣಿದಾರರು. ಇದನ್ನು ಅವರಿಗೆ ಮುಟ್ಟಿಸಬೇಕಾದದ್ದು ನಮ್ಮ ಧರ್ಮ' ಇನ್ನೊಬ್ಬ ರೈತ ಹೇಳಿದ.

'ಧರ್ಮ ಸರಿ ಆದರೆ ಇದನ್ನು ನೀವು ಕಷ್ಟ ಪಟ್ಟು ಬೆಳೆಸಿದ್ದು ಸುಳ್ಳೇ. ನೀವು ಪಟ್ಟ ಕಷ್ಟಕ್ಕಾಗಿ ಇದಕ್ಕೆ ಏನಾದರೂ ಪ್ರತಿಫಲ ಕೇಳಬೇಕು . ಅದೂ ಧರ್ಮ ಅಲ್ಲವೇನು? ನಿಮ್ಮ ಹಕ್ಕು ಅಲ್ಲವೇನು?

'ಹೌದು, ಆದರೆ ಹೇಗೆ ಕೇಳಬೇಕು. ಜಮೀನ್ದಾರರ ನಿಯಮಗಳನ್ನು ಮುರಿದಂತೆ ಆಗುತ್ತದೆ'

'ಹೆದರಬೇಡಿ ನಿಮ್ಮ ಯಜಮಾನರನ್ನು ನಾನು ಬಲ್ಲೆ. ಒಳ್ಳೆಯವರು ಪ್ರಯತ್ನ ಮಾಡಿ ನೋಡಿ'

ಕೃಷ್ಣಪಿಳ್ಳೆಯವರು ಅವರಲ್ಲಿ ವರ್ಗ ಜಾಗೃತಿಯನ್ನು ಮೂಡಿಸಿದರು.. ಈ ಪ್ರಯತ್ನ ಎಷ್ಟು ಸಫಲವಾಗುವುದು ನೋಡೋಣವೆಂದು ಅವರನ್ನು ಬೀಳ್ಕೊಟ್ಟು ತಾವು ಹಿಂದೆ ಉಳಿದರು.

ಸೋಲೋಮನ್ ಅವರು ರಾತ್ರಿ ತರಗನ್ ಅವರ ಭವ್ಯ ಮನೆಯಲ್ಲಿ ಊಟ ಮಾಡಿಕೊಂಡು ಹೊರಕೋಣೆಯಲ್ಲಿ ಮಾತಾಡುತ್ತಾ ಕುಳಿತಿದ್ದರು. ಇಬ್ಬರು ರೈತರು ಒಳಗೆ ಬಂದು ಬಾಳೆಕಾಯಿಗಳ ಹೊರೆಯನ್ನು ಇಳಿಸಿ ಹೆಗಲ ಮೇಲಿನ ಅರಿವೆಯನ್ನು ಕೈಯಲ್ಲಿ ಹಿಡಿದು ಬಾಗಿ ಯಜಮಾನರಿಗೆ ಗೌರವ ಸೂಚಿಸಿದರು.

'ಯಜಮಾನ್ರು ಸ್ವೀಕರಿಸಬೇಕು' ಇಬ್ಬರೂ ಗೌರವಪೂರ್ವಕವಾಗಿ ಬೇಡಿಕೊಂಡರು.

' ಹ್ಞಾಂ...... ಆಯ್ತು' ಯಜಮಾನರು ಸಮ್ಮತಿ ಸೂಚಿಸಿದರು.

ಯಜಮಾನರು ಸಮ್ಮತಿ ಸೂಚಿಸಿದ ಕೂಡಲೇ ರೈತರು ತಮ್ಮ ಕಾಣಿಕೆಯನ್ನು ಅಲ್ಲೇ ಬಿಟ್ಟು ಬಂದ ದಾರಿಗೆ ಸುಂಕವಿಲ್ಲದಂತೆ ಹೋಗುವುದು ಹಿಂದಿನಿಂದ ಬೆಳೆದು ಬಂದಿದ್ದ ರೂಢಿ! ಆದರೆ ಈ ಇಬ್ಬರು ರೈತರು ಅಂದು ನಿಂತ ಜಾಗ ಬಿಟ್ಟು ಕದಲಲಿಲ್ಲ.

'.....................' ಯಜಮಾನರು ಆಶ್ಚರ್ಯದಿಂದ ಅವರ ಕಡೆಗೆ ಪ್ರಶ್ನಾರ್ಥಕವಾಗಿ ನೋಡಿದರು.

'ದೇವರೂ....................' ತಲೆ ತುರಿಕೊಳ್ಳುತ್ತಾ ಅವರು ಏನನ್ನೋ ಹೇಳಲು ಬಾಯಿ ತೆರೆದು ಧೈರ್ಯ ಸಾಲದೆ ನಿಂತ। .ಸೋಲೋಮನ್ ಮೂಕವಿಸ್ಮಿತರಾಗಿ ಒಮ್ಮೆ ತರಗನ್ ಅವರನ್ನು ಮತ್ತೆ ರೈತರನ್ನೂ ನೋಡತೊಡಗಿದರು.

'ದೇವರೂ, ನಮ್ಮ ಬಾಯಾರಿಕೆ ಹಿಂಗಿಸಿಕೊಳ್ಳಲು ಒಂದೆರಡಾಣೆ ಕೊಟ್ಟರೆ ಈ ಬಡ ಜೀವಿಗಳು ಬದುಕಿಕೊಳ್ಳುತ್ತವೆ.' ಒಬ್ಬ ರೈತ ಕೊನೆಗೂ ಧೈರ್ಯ ಮಾಡಿ ಬಾಯಿಬಿಟ್ಟು ಹೇಳಿದ.

ದುಡಿತಕ್ಕೆ ಪ್ರತಿಫಲ ಕೇಳುತ್ತಿದ್ದ ಅವರ ನಡವಳಿಕೆಯನ್ನು ಕಂಡು ತರಗನ್ ಅವರು ಆವಾಕ್ಕಾದರು. ಆದರೆ ಅವರು ಜಮೀನ್ದಾರರಾಗಿದ್ದರೂ ಹೊರ ಜಗತ್ತಿನ ಅರಿವು ಉಳ್ಳವರಾಗಿದ್ದರು, ವಿಚಾರವಾದಿಯೂ ಆಗಿದ್ದರು. ಒಳಗಡೆ ಹೋಗಿ ಒಂದೆರಡು ನಾಣ್ಯವನ್ನು ಆ ಬಡಪಾಯಿಗಳಿಗೆ ಕೊಟ್ಟರು. ಸೂರ್ಯನ ಬಿಸಿಲಿನಲ್ಲಿ ದುಡಿದು ಕಪ್ಪಾಗಿದ್ದ ಆ ರೈತರ ಮುಖದಲ್ಲಿ ಗೆಲುವಿನ ಮಂದಹಾಸ ಮೂಡಿತು.

ಅದು ಸಖಾವ್ ಕೃಷ್ಣ ಪಿಳ್ಳೆ ಹೋದಲ್ಲೆಲ್ಲಾ ಯಾವುದಾದರೊಂದು ರೀತಿಯಲ್ಲಿ ನಡೆಸುತ್ತಿದ್ದ ವರ್ಗ ಸಮರದ ಒಂದು ಅಂಶವಾಗಿತ್ತು.

ಕಾಮ್ರೇಡ್ ಕೃಷ್ಣ ಪಿಳ್ಳೆಯವರು 1948 ಆಗಸ್ಟ್ 19 ರಲ್ಲಿ ಹಾವು ಕಡಿತಕ್ಕೆ ಒಳಗಾಗಿ ನಿಧನರಾದರು. ಅವರು ಹುಟ್ಟಿದ ದಿನಾಂಕ 1906,ಆಗಸ್ಟ್ 19 ಆಗಿದ್ದು ಒಂದು ಕಾಕತಾಳೀಯ .

—ಸಿ.ರಾಮಯ್ಯ

ಕೆ.ಜಿ.ಎಫ್. ಸಂಪೂರ್ಣ ಬಂದ್

ಕೋಲಾರ ಚಿನ್ನದ ಗಣಿ ಲಾಭಕರವಾಗಿ ನಡೆಯುತ್ತಿಲ್ಲವೆಂಬ ಕಾರಣವನ್ನು ಮುಂದೊಡ್ಡಿ ಕಳೆದ 110 ವರ್ಷಗಳಿಂದ ಕಾರ್ಯವೆಸಗಿದ ಗಣಿಯನ್ನು ಹಂತ-ಹಂತವಾಗಿ ಮುಚ್ಚುವ ಯೋಜನೆಯನ್ನು ಕೈಬಿಟ್ಟು, ಸ್ಲಾಲೋಮೈನಿಂಗ್ ಅನುಸರಿಸಿ ಚಿನ್ನದ ಗಣಿಯನ್ನು ಲಾಭಕರವಾಗಿ ಇನ್ನು 50 ವರ್ಷಗಳ ಕಾಲ ನಡೆಸಬಹುದಾದ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂದು ಒತ್ತಾಯಿಸಿ ಸೆ. 24ರಂದು ಸಂಪೂರ್ಣ ಬಂದ್ ನಡೆಯಿತು.

ಈ ಬಂದ್ ಗೆ ಸಿಐಟಿಯು ಕರೆ ನೀಡಿದ್ದು ಕೆಜಿಎಫ್‌ನ ಎಲ್ಲಾ ರಾಜಕೀಯ ಪಕ್ಷಗಳ ಕಾರ್ಮಿಕ ಸಂಘಗಳ ಸಹಕಾರ ಕ್ರೋಢೀಕರಿಸಿ ಅತ್ಯಂತ ಯಶಸ್ವಿಯಾಗಿ ಆಚರಿಸಲಾಯಿತು.

ಸ್ಲಾಲೋ ಮೈನಿಂಗ್ ಯೋಜನೆ ಜ್ಯಾರಿಯಾಗಬೇಕು, ತಾಂತ್ರಿಕ ನಿರ್ದೇಶಕ ನಟರಾಜನ್‌ರವರ ರಾಜೀನಾಮೆಯನ್ನು ಅಂಗೀಕರಿಸಕೂಡದು, ರಿಟೈರ್ ವಯಸ್ಸಾದರೂ ಇನ್ನೂ 4 ವರ್ಷ ಮುಂದುವರೆದಿರುವ ಛೇರ್‌ಮನ್ ಆಗಾರವರ ಮುಂದುವರಿಕೆ ನಿಲ್ಲಿಸಬೇಕೆಂದು ಸಿಐಟಿಯು ಬೇಡಿಕೆಗಳನ್ನು ಮುಂದಿಟ್ಟರು. ಇದಕ್ಕೆ ಕಾರ್ಮಿಕರ ಜನರ ಬೆಂಬಲ ಕ್ರೋಢೀಕರಿಸಲು ಚಿನ್ನದ ಗಣಿ ಪ್ರದೇಶದಲ್ಲಿ ಹಲವೆಡೆ ಗೇಟ್ ಮೀಟಿಂಗ್‌ಗಳನ್ನು ನಡೆಸಲಾಯಿತು.

ಈ ಪ್ರದೇಶದ ಎಲ್ಲಾ ಕಾರ್ಮಿಕ ಸಂಘಗಳಿಂದ ರಾಜಕೀಯ ಪಕ್ಷಗಳಿಂದ ಪ್ರತ್ಯೇಕವಾಗಿ ಮಂತ್ರಿಗಳಿಗೆ ತಂತಿ, ಕಾರ್ಮಿಕರ ಮಧ್ಯೆ ಕರಪತ್ರಗಳ ಹಂಚಿಕೆ ನಡೆಯಿತು. ಹೀಗೆ ಪ್ರತ್ಯೇಕವಾಗಿ ನಡೆಯುತ್ತಿದ್ದ ಚಳುವಳಿಯನ್ನು ಸಿಐಟಿಯು ಒಂದುಗೂಡಿಸಿ ಚಿನ್ನದ ಗಣಿಯ ಎಲ್ಲಾ ಕಾರ್ಮಿಕ ಸಂಘಗಳ, ರಾಜಕೀಯ ಪಕ್ಷಗಳ ಸಭೆಯನ್ನು ಏರ್ಪಡಿಸಿತ್ತು.

ಸೆಪ್ಟೆಂಬರ್ 20 ನೇ ತಾರೀಖಿನಂದು ನಡೆದ ಆ ಸಭೆಯಲ್ಲಿ ಸೆಪ್ಟೆಂಬರ್ 24 ನೇ ತಾರೀಖಿನಂದು ಬಿ.ಜಿ.ಎಂ.ಎಲ್. ಆಡಳಿತದ ಬೋರ್ಡು ಮೀಟಿಂಗ್‌ನ ದಿನವೇ ಕೆಜಿಎಫ್ ಬಂದ್ ನಡೆಸಬೇಕೆಂದು ತೀರ್ಮಾನಿಸಲಾಯಿತು.

ದಿನಾಂಕ 22 ರಂದು ಊರಿಗಾಂ ರೈಲ್ವೆ ಸ್ಟೇಷನ್‌ನ ಪಕ್ಕದಲ್ಲಿ ಬಂದ್ ಬಗ್ಗೆ ವಿವರಣೆ ನೀಡುವ ಬಹಿರಂಗ ಸಭೆಯನ್ನು ನಡೆಸಲಾಯಿತು. ಸಿಐಟಿಯು ಕಾರ್ಮಿಕ ಸಂಘದ ಉಪಾಧ್ಯಕ್ಷರಾದ ಕಾಂ. ಟಿ.ಎಸ್. ಮಣಿಯವರ ಅಧ್ಯಕ್ಷತೆಯಲ್ಲಿ ನಡೆದ ಭಾರಿ ಬಹಿರಂಗ ಸಭೆಯಲ್ಲಿ ಸಿಪಿಐ(ಎಂ), ಎಐಎಡಿಎಂಕೆ, ಡಿಎಂಕೆ, ಆರ್‌ಪಿಐ, ಜನತಾದಳ, ಬಿಜೆಪಿ, ತೆಲುಗುದೇಶಂ ಪಕ್ಷಗಳ ಮುಖಂಡರುಗಳಲ್ಲದೆ ಹಲವು ಕಾರ್ಮಿಕ ಸಂಘಗಳ ಮುಖಂಡರೂ ಭಾಗವಹಿಸಿದ್ದರು.

ಸಂಘದ ಅಧ್ಯಕ್ಷರಾದ ಸೂರ್ಯನಾರಾಯಣರಾವ್‌ರವರು ಸೆಪ್ಟೆಂಬರ್ 18,19,20 ನೇ ತಾರೀಕುಗಳಲ್ಲಿ ದೆಹಲಿಗೆ ಹೋಗಿ ಗಣಿ ಮಂತ್ರಿಗಳ ಕಾರ್ಯದರ್ಶಿಗಳಾದ ಶ್ರೀಯುತ ಲಹರಿ,ಶ್ರೀಯುತ ಗೋಪಾಲಕೃಷ್ಣ ಮುಂತಾದವರೊಡನೆ ನಡೆಸಿದ ಮಾತುಕತೆಗಳ ವಿವರವನ್ನು, ಸರಕಾರದ ಗಮನ ಸೆಳೆಯಲು ಮಾಡಬೇಕಾದ ಹೋರಾಟದ ಅವಶ್ಯಕತೆಯನ್ನು ಕುರಿತು ಹೇಳಿದರು. ಚಿನ್ನದ ಗಣಿ ಪ್ರದೇಶದ ಜನತೆಯ ಬಾಳ್ವೆಗಾಗಿ ರಾಜಕೀಯ ವೈಷಮ್ಯ, ವೈಯಕ್ತಿಕ ವಿರೋಧಗಳನ್ನು ಬದಿಗೊತ್ತಿ ಕಾರ್ಯವೆಸಗಬೇಕಾಗಿರುವ ಅವಶ್ಯಕತೆಯನ್ನು ಒತ್ತಿ ಹೇಳಿದರು.

ಸಿಐಟಿಯುವಿನ ಪರವಾಗಿ ಕಾಂ. ಜಯರಾಂ, ಸಿಪಿಐ(ಎಂ) ಪರವಾಗಿ ಕಾಂ.ಎಸ್. ಸಫಿರಿದಾಸ್, ಎಐಎಡಿಎಂಕೆ ಪರವಾಗಿ ಶ್ರೀ ಭಕ್ತವತ್ಸಲಂ ಎಂ.ಎಲ್‌ಎ., ಡಿಎಂಕೆ ಪರವಾಗಿ ಕರುಣಾನಿಧಿ, ಆರ್‌ಪಿಐ ಪರವಾಗಿ ಶ್ರೀ ಮುಗಿಲನ್, ಜನತಾದಳದ ಪರವಾಗಿ ಶ್ರೀ ಶಿವಷಣ್ಮುಗಂ, ಬಿಜೆಪಿ ಪರವಾಗಿ ಶ್ರೀ ವಿಕ್ರಮಾದಿತ್ಯನ್, ತೆಲುಗುದೇಶಂ ಪರವಾಗಿ ಶ್ರೀ ವೆಂಕಟೇಶಪ್ಪ ಮತ್ತು ಕಾರ್ಮಿಕ ಮುಖಂಡರಾದ ಕಾಂ. ವಿಶಾಂಬರಂ, ಶ್ರೀ ಮರುದಾವನನ್, ಶ್ರೀ ಸೀತಾ ಶ್ರೀನಿವಾಸನ್, ದೇ.ಮಾ. ಮಾಣಿಕ್ಯಂ ಮತ್ತಿತರರು ಮಾತನಾಡಿದರು.

- ಬಂದ್ ಹೋರಾಟದ ಬಗ್ಗೆ ವಿವರಣೆ ನೀಡಲು ಆಟೋಪ್ರಚಾರವನ್ನು ನಗರದ ಹಲವು ಭಾಗಗಳಲ್ಲಿ ನಡೆಸಲಾಯಿತು.

ಚಿನ್ನದ ಗಣಿ ಬಂದ್

ಚಿನ್ನದ ಗಣಿ ಪ್ರದೇಶದ ಕಾರ್ಮಿಕರು. ಎಲ್ಲಾ ವಿಭಾಗದ ವ್ಯಾಪಾರಿಗಳು ಈ ಬಂದ್ ನ್ಯಾಯಯುತವಾದುದೆಂದು ಇದಕ್ಕೆ ಸಂಪೂರ್ಣ ಬೆಂಬಲವಿತ್ತರು.

ಬಿ.ಜಿ.ಎಂ.ಎಲ್. ಬೋರ್ಡು ಮೀಟಿಂಗ್

ಸೆಪ್ಟೆಂಬರ್ 24 ರಂದು ಸಂಜೆ ಸ್ಥಳೀಯ ಎಲ್ಲಾ ಪಕ್ಷಗಳ ಮತ್ತು ಕಾರ್ಮಿಕ ಸಂಘಗಳ ನಾಯಕರು ಬೆಂಗಳೂರಿನಲ್ಲಿ ನಡೆಯುತ್ತಿದ್ದ ಬೋರ್ಡು ಮೀಟಿಂಗ್ ಸ್ಥಳಕ್ಕೆ ಹೋಗಿ ಛೇರ್ಮನ್‌ರವರನ್ನು ಭೇಟಿಯಾದರಲ್ಲದೆ ಮೇಲ್ಕಂಡ ಬೇಡಿಕೆಗಳ ಬಗ್ಗೆ ಬೋರ್ಡು ಸದಸ್ಯರಿಗೆ ಮನವರಿಕೆ ಮಾಡಿದರು.

ವಿದ್ಯುತ್ ದರ ಏರಿಕೆಗೆ ಸಿಐಟಿಯು ಪ್ರತಿಭಟನೆ

ವಿದ್ಯುತ್ ದರ ಏರಿಸಿದ ರಾಜ್ಯ ಸರಕಾರದ ವಿರುದ್ಧ ಪ್ರತಿಭಟಿಸಿ, ಶಹಾಬಾದ್ ಎ. ಬಿ.ಎಲ್. ಕಾರ್ಖಾನೆಯ ಸಿಐಟಿಯು ಕಾರ್ಮಿಕ ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿಯ ಸದಸ್ಯರು ಮತ್ತು ಕಾರ್ಮಿಕರು ಸೆ.24 ರಂದು ಮೆರವಣಿಗೆ ಮೂಲಕ ವಿದ್ಯುಚ್ಛಕ್ತಿ ಮಂಡಳಿಯ ಕಾರ್ಯನಿರ್ವಾಹಕ ಅಭಿಯಂತರರಿಗೆ ಮನವಿ ಪತ್ರ ಕೊಡಲಾಯಿತು. ಸಭೆಯನ್ನುದ್ದೇಶಿಸಿ ಸಿಐಟಿಯು ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಧರಮ್ ವೀರ ಚವ್ಹಾಣರು ಮಾತನಾಡಿದರು. ಅವರು ರಾಜ್ಯಸರಕಾರದ ರೈತ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿ, ಏರಿಸಿರುವ ವಿದ್ಯುಚ್ಛಕ್ತಿ ದರವನ್ನು ಇಳಿಸಬೇಕೆಂದು ಆಗ್ರಹಪಡಿಸಿದರು.

ತೊಕ್ಕೊಟ್ಟುವಿನಲ್ಲಿ

ವಿದ್ಯುತ್ ದರವನ್ನು ಶೇಕಡ 30ರಿಂದ 50 ರವರೆಗೆ ಏರಿಸಿ ಜನಸಾಮಾನ್ಯರನ್ನು ತೀರಾ ಸಂಕಷ್ಟಕ್ಕೀಡುಮಾಡಿದ ರಾಜ್ಯ ಸರಕಾರದ ನೀತಿಯನ್ನು ಖಂಡಿಸಿ ಸಿಐಟಿಯು ನೇತೃತ್ವದಲ್ಲಿ ಸೆ.24 ರಂದು ತೊಕ್ಕೊಟ್ಟು ಕೆ.ಇ.ಬಿ. ಕಛೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಏರಿಸಿದ ವಿದ್ಯುತ್ ದರವನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿರುವ ಮನವಿಯೊಂದಿಗೆ ತೊಕ್ಕೊಟ್ಟು ಕಛೇರಿಯಲ್ಲಿ ಹೆಚ್ಚುವರಿ ಕೌಂಟರನ್ನು ತೆರೆಯಬೇಕು ಹಾಗೂ ಕ್ರಮವತ್ತಾಗಿ ವಿದ್ಯುತ್ ಬಿಲ್ ಕಳುಹಿಸಬೇಕೆಂದು ಒತ್ತಾಯಿಸುವ ಇನ್ನೊಂದು ಮನವಿಯನ್ನು ಸ್ಥಳೀಯ ಕೆ.ಇ.ಬಿ. ಮುಖ್ಯಾಧಿಕಾರಿಯವರಿಗೆ ಅರ್ಪಿಸಲಾಯಿತು. ಸಭೆಯನ್ನುದ್ದೇಶಿಸಿ ಜಗನ್ನಾಥ್‌ನಾಯಕ್, ಎಂ.ವೆಂಕಪ್ಪಶೆಟ್ಟಿ, ಟಿ.ರಾಜೀವ್ ಮೆಂಡನ್, ಸುಕುಮಾರ್ ಹಾಗೂ ಜನವಾದಿ ಮಹಿಳಾ ಸಂಘಟನೆಯ ಉಪಾಧ್ಯಕ್ಷೆ ಶ್ರೀಮತಿ ಎಸ್.ಆರ್. ಲೀಲಾವತಿ ಮಾತನಾಡಿದರು.

ಚಿಕ್ಕಮಗಳೂರು

ವಿದ್ಯುತ್ ದರ ಏರಿಕೆಯನ್ನು ಪ್ರತಿಭಟಿಸಿ ಚಿಕ್ಕಮಗಳೂರು ಜಿಲ್ಲೆಯ ಸಿಐಟಿಯು ಇತರ ಕಾರ್ಮಿಕ ಸಂಘಗಳು ಸೆ.24ರಂದು ವಿದ್ಯುಚ್ಛಕ್ತಿ ಮಂಡಳಿ ಕಾರ್ಯನಿರ್ವಾಹಕ ಅಭಿಯಂತರರಿಗೆ ಮನವಿ ಪತ್ರವನ್ನು ಅರ್ಪಿಸಲಾಯಿತು.

ಕಾರ್ಮಿಕ ಸಂಘಗಳಾದ ಕೆ.ಪಿ.ಪಿ. ಡಬ್ಲ್ಯು.ಡಿ. ಯೂನಿಯನ್, ಕಾಫಿ ಕ್ಯುರಿಂಗ್ ಮತ್ತು ಇತರ ಕಾರ್ಮಿಕ ಸಂಘಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಏರಿಸಿರುವ ದರದ ಪರಿಣಾಮವಾಗಿ ದುಡಿಯುವ ಜನತೆ, ಗ್ರಾಹಕರು ಹಾಗೂ ಸಣ್ಣ ಕೈಗಾರಿಕೆಗಳು ಸಂಕಷ್ಟಕ್ಕೀಡಾಗಿದ್ದಾರೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಹರಿಹರ

ಹರಿಹರದ ಸಿಐಟಿಯು ಕಾರ್ಮಿಕರು ವಿದ್ಯುತ್‌ದರ ಏರಿಕೆ ಕ್ರಮವನ್ನು ಕೈ ಬಿಡಬೇಕೆಂದು ಆಗ್ರಹಿಸಿ ಸೆಪ್ಟೆಂಬರ್ 24ರಂದು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದ ನಂತರ ಕೆ.ಇ.ಬಿ. ಕಛೇರಿ ಒಳಗೆ ನುಗ್ಗಿ ಒಂದು ಘಂಟೆಗೂ ಹೆಚ್ಚು ಕಾಲ ಅಲ್ಲಿಯ ಕೆಲಸಕಾರ್ಯಗಳನ್ನು ಸ್ಥಗಿತಗೊಳಿಸಿದರು.

ಅನಂತರ ನಡೆದ ಪ್ರತಿಭಟನಾ ಸಭೆಯಲ್ಲಿ ಕಾರ್ಮಿಕ ಮುಖಂಡ ನಿತ್ಯಾನಂದ ಸ್ವಾಮಿ ಮಾತನಾಡಿದರು. ಸಿಐಟಿಯು ಕಾರ್ಮಿಕ ಮುಖಂಡರಾದ ಆರ್.ಸಿ. ಉನ್ನಿತನ್, ರೇಖಪ್ಪ ಲಮಾಣ, ಬಿ.ಎಸ್. ಪ್ರಕಾಶ, ಎಂ. ಮಲ್ಲಿಕಾರ್ಜುನ ಅವರು ಮತಪ್ರದರ್ಶನದ ನೇತೃತ್ವ ವಹಿಸಿದ್ದರು.

ಸಾಲಮನ್ನಾಕ್ಕಾಗಿ ನೇಕಾರರ ಹೋರಾಟ

ಉಡುಪಿ ನೇಯ್ಗೆ ಕೆಲಸಗಾರರ ಸಂಘ ಸಿಐಟಿಯು ನೇತೃತ್ವದಲ್ಲಿ ಸೆಪ್ಟೆಂಬರ್ 21 ರಂದು ಕರ್ನಾಟಕ ಕೈ ಮಗ್ಗ ನಿಗಮದ ಉಡುಪಿ ಉತ್ಪಾದನಾ ಕೇಂದ್ರ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳ ಮುಂದೆ ಮೆರವಣಿಗೆ ಪ್ರದರ್ಶನ ನಡೆಸಿ ಕೇಂದ್ರ ಸರಕಾರದ ಸಾಲಮನ್ನಾ. ಯೋಜನೆಯನ್ನು ನೇಕಾರ ಕಾರ್ಮಿಕರಿಗೆ ಕೂಡಲೇ ಜಾರಿಗೊಳಿಸುವಂತೆ ಆಗ್ರಹ ಪಡಿಸಿದರು. ನಿಗಮದ ನೇಕಾರರಿಗೆ ವಸತಿ ನಿವೇಶನ, ಮನೆ ಕಟ್ಟಲು ಸಹಾಯ, ಕಾನೂನಿನ ಸವಲತ್ತುಗಳು,ಬೋನಸ್ಸು,ತುಟ್ಟಿಭತ್ಯೆ, ವೇತನ ಏರಿಕೆ ಬೇಡಿಕೆಗಳಿಗಾಗಿ ಒತ್ತಾಯಿಸಿದರು. ಸಭೆಯನ್ನುದ್ದೇಶಿಸಿ ಸಂಘದ ಕಾರ್ಯದರ್ಶಿ ಶ್ರೀಗುರುರಾಜ್ ಸೆಟ್ಟಿಗಾರರು ಹಾಗೂ ಸಿಐಟಿಯು ಮುಂದಾಳು ಡೇವಿಡ್ ಎ.ಕರ್ಕಡ ಅವರು ಮಾತನಾಡಿದ್ದರು.

ಕಬ್ಬು ಬೆಳೆಗಾರರಿಗೆ ನ್ಯಾಯವಾದ ಬೆಲೆ ನೀಡಲು ಆಗ್ರಹ

ಉಡುಪಿ ತಾಲೂಕಿನ ರೈತರ ಸಮಾವೇಶವು ಸೆಪ್ಟೆಂಬರ್ 19 ರಂದು ತಮ್ಮ ಬೇಡಿಕೆಗಳಿಗಾಗಿ ಒತ್ತಾಯಿಸಲು ಶ್ರೀಗೋಡ್ವಿನ್ ಡೇವಿಸ್ ಫರ್ನಾಂಡಿಸರ ಅಧ್ಯಕ್ಷತೆಯಲ್ಲಿ ಜರುಗಿತು.

ಕಬ್ಬು ಬೆಳೆಗಾರರಿಗೆ ಟನ್ನು ಒಂದಕ್ಕೆ ರೂ.450 ನ್ನು ನಿಗದಿಮಾಡಲು, ಅಬಕಾರಿ ಕಾಯಿದೆಗೆ ತಿದ್ದುಪಡಿ ತಂದು ಮೂರ್ತೇದಾರರಿಗೆ ವಿನಾಯಿತಿ ನೀಡುವಂತೆಯೂ, ಸೇಂದಿ ಲೀಟರ್ ಒಂದಕ್ಕೆ ರೂ.3ರಂತೆ ದರ ನಿಗದಿಗೊಳಿಸಬೇಕೆಂದೂ, ಕೃಷಿಕಾರ್ಮಿಕರಿಗೆ ಕನಿಷ್ಠ ವೇತನ ಹಾಗೂ ಮನೆ ನಿವೇಶನ ನೀಡಬೇಕೆಂಬ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಬಿಹಾರದ ಪಾಟ್ನಾದಲ್ಲಿ ಸೇರಿದ್ದ ಅಖಿಲ ಭಾರತ ಕಿಸಾನ್ ಸಭಾ ಕೇಂದ್ರ ಕೌನ್ಸಿಲ್ ನೀಡಿದ ಕರೆಯಂತೆ ಅಕ್ಟೋಬರ್ 8 ರಂದು ರೈತರ ಚಳುವಳಿಯನ್ನು ಉಡುಪಿಯಲ್ಲಿಯೂ ಪ್ರಚಾರಗೊಳಿಸಲು ನಿರ್ಧರಿಸಲಾಯಿತು.

ರಾಣೆಬೆನ್ನೂರು

ರಾಜ್ಯಾದ್ಯಂತ ನೇಕಾರರ ಸಮನ್ವಯ ಸಮಿತಿಯು ಕರೆಯ ಮೇರೆಗೆ 20.9.90 ರಂದು ರಾಣೆಬೆನ್ನೂರು ನೇಕಾರರು, ರೈತರ ಹತ್ತು ಸಾವಿರ ರೂ.ಗಳ ಸಾಲಮನ್ನಾ ಮಾಡುವ ಯೋಜನೆಯಡಿಯನ್ನು ರಾಜ್ಯದ ನೇಕಾರರ ಸಾಲ ಮನ್ನಾ ಮಾಡಬೇಕೆಂದು ಒತ್ತಾಯಿಸಿ ನಗರದಲ್ಲಿ ಮೆರವಣಿಗೆ ನಡೆಸಿ ತಾಲೂಕು ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಅಡಿಯಲ್ಲಿ ಕೆಲಸ ಮಾಡುವ ನೇಕಾರರು ಮಗ್ಗ ಮತ್ತು ನೂಲಿಗಾಗಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ಅಥವಾ ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ಪಡೆದ ಸಾಲವನ್ನು ಹಾಗೂ ಡಚ್ ಸರಕಾರದ ನೆರವಿನಿಂದ ನೇಕಾರರಿಗೆ ಕಟ್ಟಿಸಿ ಕೊಡಲಾದ ಮನೆಗಳ ಸಾಲವನ್ನು ಮನ್ನಾ ಮಾಡಬೇಕೆಂದು ಅಗ್ರಹಿಸಿದ್ದಾರೆ.

ಧರಣಿಸತ್ಯಾಗ್ರಹ

ಗುಲ್ಬರ್ಗಾ ಜಿಲ್ಲೆಯ ಚಿತಾಪುರ ತಾಲೂಕು ಪ್ರಾಂತ ರೈತ ಸಂಘದ ಸುಮಾರು 200 ಜನ ರೈತರು ಶಹಾಬಾದ ಮುಖ್ಯ ರಸ್ತೆಯಿಂದ ಮೆರವಣಿಗೆಯಲ್ಲಿ , ತಮ್ಮ ಬೇಡಿಕೆಗಳಾದ ರೈತರ ಸಾಲಮನ್ನಾ, ಮಳೆಯಿಂದ ಬೆಳೆ ಹಾನಿ ಹಾಗೂ ಮನೆ ಬಿದ್ದವರಿಗೆ ಪರಿಹಾರ ಧನ , ಬಂಜರು ಭೂಮಿ ಸಾಗುವಳಿ ಮಾಡುವವರಿಗೆ ಪಟ್ಟಾ ನೀಡುವುದು, ರೈತರ ಬೆಳೆಗೆ ನ್ಯಾಯವಾದ ಬೆಲೆ ಕೊಡಬೇಕೆಂದು ಒತ್ತಾಯಿಸಲು ಶಹಾಬಾದ ನಾಡ ಕಛೇರಿ ಎದುರು ಧರಣಿ ಸತ್ಯಾಗ್ರಹ ನಡೆಸಲಾಯಿತು.

ರೈತರ ಸಮಾವೇಶ

ಬಡಗ ಎಡಪದವು ಗ್ರಾಮದ ರೈತರ ಸಭೆಯು ಸೆಪ್ಟೆಂಬರ್ 16ರಂದು ಕಾಂ. ಗೋವಿಂದ ಗೌಡರ ಅಧ್ಯಕ್ಷತೆಯಲ್ಲಿ ರೈತರು ಅತಿಕ್ರಮಣ ಮಾಡಿದ ಭೂಮಿಯನ್ನು ಖಾಯಂ ಮಾಡಲು ಹಾಗೂ ರೈತ ಕೃಷಿ ಕಾರ್ಮಿಕರ 10 ಸಾವಿರ ರೂಪಾಯಿಗಳ ಸಾಲವನ್ನು ಮನ್ನಾ ಮಾಡಬೇಕೆಂದು ಒತ್ತಾಯಿಸಿತು.

ಸಭೆಯ ಮುಂದಿನ ಚಟುವಟಿಕೆಗಳಿಗಾಗಿ ಕಾಂ. ಗೋವಿಂದಗೌಡರನ್ನು ಅಧ್ಯಕ್ಷರಾಗಿ , ಕಾಂ.ಚಂದ್ರು ಪೂಜಾರಿಯವರನ್ನು ಉಪಾಧ್ಯಕ್ಷರನ್ನಾಗಿ, ನಾಣಯ್ಯ ಗೌಡರನ್ನು ಕಾರ್ಯದರ್ಶಿಯಾಗಿ, ಕಾಂ.ಶ್ರೀನಿವಾಸ ಪೂಜಾರಿಯವರನ್ನು ಸಹಕಾರ್ಯದರ್ಶಿಯಾಗಿ, ಕಾಂ. ರಾಮಣ್ಣ ಭಂಡಾರಿಯವರನ್ನು ಕೋಶಾಧಿಕಾರಿಯನ್ನಾಗಿ ಆಯ್ಕೆ ಮಾಡಿತು.

ರೈತರ ಸಮಾವೇಶ

ಕರ್ನಾಟಕ ಪ್ರಾಂತ ರೈತ ಸಂಘದ ವಿಜಾಪುರ ಘಟಕ 10-9-90 ರಂದು ಡೊಳ್ಳು, ಕೋಂಬು, ಘೋಷಣೆ ಮುಖಾಂತರ ಮೆರವಣಿಗೆ ಹಾಗೂ ಗ್ರಾಮದ ಸಂತೆ ಮೈದಾನದಲ್ಲಿ ಬಹಿರಂಗ ಸಭೆಯನ್ನು ನಡೆಸಲಾಯಿತು. ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟ ಮಾಡಲು ನಿರ್ಣಯಿಸಲಾಯಿತು. ಜಿಲ್ಲಾ ರೈತ ಸಂಘದ ಅಧ್ಯಕ್ಷ ಭೀಮಸಿ ಕಲಾದಗಿ ಉದ್ಘಾಟನೆ ಮಾಡಿದರು. ಸಭೆಯು 12 ಜನರ ಕಮಿಟಿ ಸದಸ್ಯರನ್ನು ಹಾಗೂ ಪದಾಧಿಕಾರಿಗಳನ್ನು ನೇಮಕ ಮಾಡಿತು. ಅಧ್ಯಕ್ಷರಾಗಿ ಡಿ.ಕೆ. ಪೂಜಾರಿ, ಉಪಾಧ್ಯಕ್ಷರಾಗಿ ಎಂ.ಪಿ. ಗಣಿ ಹಾಗೂ ಎಸ್.ಡಿ. ನಾಯಕೂಲಡಿ, ಕಾರ್ಯದರ್ಶಿಯಾಗಿ ಎನ್.ಪಿ. ಚುಂಚುರು ಮಠ, ಉಪಕಾರ್ಯದರ್ಶಿಯಾಗಿ ಬಿ.ಜೆ.ಗುಗ್ಗರಿ ಹಾಗೂ ಆರ್.ಬಿ. ಮಶಿಬನಾಳ, ಖಜಾಂಚಿಯಾಗಿ ಬಿ.ಎ. ಸರೋಜ ಆಯ್ಕೆಯಾಗಿದ್ದಾರೆ.

ವರದಕ್ಷಿಣೆಗಾಗಿ ಕೊಲೆ, ಮಹಿಳಾ ಸಂಘಟನೆಯ ಖಂಡನೆ

ದುಸ್ತಾಪುರ ಗ್ರಾಮದ ಶ್ರೀಮತಿ ಗುರುಬಾಯಿಯನ್ನು ಆತನ ಗಂಡ ಮೋರಸ್ ಪಾಟೀಲ್ ಸುಮಾರು ಒಂದು ಲಕ್ಷದಷ್ಟು ವರದಕ್ಷಿಣೆ ತೆಗೆದುಕೊಂಡು ಬರಲು ಚಿತ್ರಹಿಂಸೆ ಕೊಡುತ್ತಿದ್ದುದರ ಪರಿಣಾಮವಾಗಿ ಮನೆಯಲ್ಲಿರುವ ಅತ್ತೆ, ಮಾವ, ಮೈದುನ, ನಾದಿನಿ ಹಾಗೂ ಆಕೆಯ ಗಂಡ ಇವರುಗಳು ಸೇರಿ ಆಕೆಯ ಕೊಲೆ ಮಾಡಿ ನಂತರ ಪೂರ್ವಸಿದ್ಧತೆಯಂತೆ ನೇಣು ಹಾಕಲಾಗಿದೆ ಎಂದು ಜನವಾದಿ ಮಹಿಳಾ ಸಂಘಟನೆ ಆಪಾದಿಸಿದೆ. ಈ ಕೊಲೆಯನ್ನು ಸಿ.ಓ.-ಡಿಗೆ ಒಪ್ಪಿಸಲು ಜಿಲ್ಲಾಧಿಕಾರಿಗಳಿಗೆ ಮತ್ತು ಎಸ್.ಪಿ. ಯವರಿಗೆ ಆಗ್ರಹಪಡಿಸಿದೆ. ಒಂದು ವಾರದಲ್ಲಿ ಪರಿಹಾರ ಕಾಣದಿದ್ದರೆ ಹೋರಾಟಕ್ಕೆ ಇಳಿಯಬೇಕಾಗುತ್ತದೆಂದು ಸಂಘಟನೆ ತಿಳಿಸಿದೆ.

ಫಕೀರವ್ವಗೆ ಸೂಕ್ತ ಪರಿಹಾರ– ಜ.ಮ.ಸಂ.ಒತ್ತಾಯ

ವರದಕ್ಷಿಣೆ, ಬಲಾತ್ಕಾರದಿಂದ ಅತ್ಯಾಚಾರ, ಕೊಲೆ, ನಿಗೂಢ ಸಾವು ಇಂತಹುದೇ ಸುದ್ದಿಗಳನ್ನು ದಿನನಿತ್ಯ ಕೇಳುವಾಗಲೇ, ತಪ್ಪಿತಸ್ಥರು ಶಿಕ್ಷೆಗೆ ಒಳಪಡದೆ ಪಾರಾಗುತ್ತಿರುವುದು ವಾಸ್ತವ.

ಇತ್ತೀಚೆಗೆ ಗೋಕಾಕದಲ್ಲಿ– ಮಣ್ಣಕೇರಿಯ ಲಿಂಗಪ್ಪ ಭಾಗೋಜಿ ಎಂಬುವವನ ಪತ್ನಿ ಫಕೀರವ್ವ 22 ವರ್ಷದ ಹೆಣ್ಣು ವರದಕ್ಷಿಣೆಯ ಪಾಲಿನಿಂದ ಬರಬೇಕಾಗಿದ್ದ ಹೊಲಿಗೆ ಯಂತ್ರವನ್ನು ತರಲಿಲ್ಲವೆಂದು ಆಕೆಯನ್ನು ಉರಿಯುವ ಬೆಂಕಿಗೆ ನೂಕಿದಾಗ ಪ್ರಾಣ ಉಳಿದು ಎರಡು ಕಣ್ಣುಗಳನ್ನು ಆಕೆ ಕಳೆದುಕೊಂಡಿದ್ದಾಳೆ.

ವರದಕ್ಷಿಣೆ ಕೊಡುವವರಿಗೆ, ತೆಗೆದುಕೊಳ್ಳುವವರಿಗೆ ಶಿಕ್ಷೆಯಾಗಬೇಕು- ಅತ್ಯಂತ ಭೀಕರವಾಗಿ ಬೆಳೆಯುತ್ತಿರುವ ಈ ಸಾಮಾಜಿಕ ಅನಿಷ್ಟ ತೊಲಗಬೇಕು ಎಂದು ಹಲವಾರು ವರ್ಷಗಳಿಂದ ನಿರಂತರ ಹೋರಾಟ ಮಾಡುತ್ತಿರುವ ಜನವಾದಿ ಮಹಿಳಾ ಸಂಘಟನೆಯು ಈ ಘಟನೆಯನ್ನು ಉಗ್ರವಾಗಿ ಖಂಡಿಸುತ್ತದೆ. ಹಾಗೂ ಅಪರಾಧಿಗೆ ಶಿಕ್ಷೆಯಾಗಬೇಕು. ಫಕೀರವ್ವಗೆ ಸೂಕ್ತ ಪರಿಹಾರಕ್ಕಾಗಿ ಜೆ.ಎಂ.ಎಸ್. ಒತ್ತಾಯಿಸುತ್ತದೆ ಎಂದು ಜನವಾದಿ ಮಹಿಳಾ ಸಂಘಟನೆಯ ಎಸ್.ಆರ್ ಲೀಲಾವತಿ ಆಗ್ರಹ ಪಡಿಸಿದ್ದಾರೆ.

ಡಿವೈಎಫ್ಐ ನ ಸ್ಥಾಪನಾ ಸಭೆ

ಮತ್ತಿಕಟ್ಟೆಯಲ್ಲಿ ಸೆಪ್ಟೆಂಬರ್ 24ರಂದು ಸಿಐಟಿಯು ರಾಜ್ಯ ಮಂಡಳಿ ಸದಸ್ಯರಾದ ಕಾಂ. ಅಣ್ಣಯವರ ಸಮ್ಮುಖದಲ್ಲಿ ಡಿವೈಎಫ್ಐ ಸ್ಥಾಪನಾ ಸಭೆ ನಡೆಯಿತು. ಈ ಸಭೆಯಲ್ಲಿ ಬಣಕಲ್ ಹೋಬಳಿ ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಸಂಚಾಲಕರಾಗಿ ಕಾಂ. ಟಿ. ಅಣ್ಣಪ್ಪ, ಸಹಸಂಚಾಲಕರಾಗಿ ಕಾಂ. ಕಿಟ್ಟು, ವೆಂಕಟೇಶ್, ಎಲ್. ಜಯೇಂದ್ರ, ಕೃಷ್ಣಪ್ಪ ಅವರನ್ನು ಆರಿಸಲಾಯಿತು.

ಬಸ್ ಪಾಸ್ ಸೌಲಭ್ಯಕ್ಕೆ ಎಸ್‌ಎಫ್ಐನ ಯಶಸ್ವಿ ಹೋರಾಟ

ಬಳ್ಳಾರಿ ಜಿಲ್ಲಾ ಸಮಿತಿಯು ಸೆಪ್ಟೆಂಬರ್ 7 ರಂದು ಜಿಲ್ಲೆಯಾದ್ಯಂತ ಬಸ್ ರೋಕೋ ಚಳವಳಿಯ ಹಿನ್ನೆಲೆಯಲ್ಲಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಎಸ್‌ಎಫ್ಐ ನ ನೇತೃತ್ವದಲ್ಲಿ ನಗರದ ಬಸ್‌ನಿಲ್ದಾಣದಲ್ಲಿ ಒಂದು ಗಂಟೆಗೂ ಹೆಚ್ಚು ಕಾಲ ಬಸ್‌ಗಳನ್ನು ತಡೆಹಿಡಿದು ತಮ್ಮ ಬೇಡಿಕೆಗಳಲ್ಲಿಯಶಸ್ವಿಯಾಗಿದ್ದಾರೆ. ಸಾರಿಗೆ ಅಧಿಕಾರಿಗಳು ಎಲ್ಲಾ ಎಕ್ಸ್‌ಪ್ರೆಸ್ ಬಸ್‌ಗಳಲ್ಲಿ ಪಾಸ್ ಸೌಲಭ್ಯ ವ್ಯವಸ್ಥೆ, ಸಾರಿಗೆ ವ್ಯವಸ್ಥೆಯಿಲ್ಲದ ಪ್ರದೇಶಗಳಿಗೆ ಒಂದು ತಿಂಗಳಲ್ಲಿ ಬಸ್ ಸೌಕರ್ಯ ಹಾಗೂ ನಿಗದಿತ ವೇಳೆಗೆ ಬಸ್ ವ್ಯವಸ್ಥೆ ಒದಗಿಸುವುದಾಗಿ ಒಪ್ಪಿಕೊಂಡಿದ್ದಾರೆ.

ಎಸ್‌ಎಫ್ಐ ವಾರಾಚರಣೆ

ಹರಿಹರದಲ್ಲಿ ಎಸ್‌ಎಫ್ಐನ ವತಿಯಿಂದ ಸೆ.7ರಿಂದ 15ರವರೆಗೆ ನಡೆದ ವಾರಾಚರಣೆ ಅಂಗವಾಗಿ ವರದಕ್ಷಿಣೆ ಬಗ್ಗೆ ಚರ್ಚಾ ಸ್ಪರ್ಧೆ, ಕಾಶ್ಮೀರ ಸಮಸ್ಯೆ ಕುರಿತ ವಿಚಾರ ಸಂಕಿರಣ ಹಾಗೂ 'ಸ್ತ್ರೀಯರಿಂದಲೇ ದೇಶದ ಪ್ರಗತಿ ಸಾಧ್ಯ' ಎಂಬ ವಿಷಯಗಳ ಬಗ್ಗೆ ಭಾಷಣವನ್ನೇರ್ಪಡಿಸಿದ್ದರು. ಉಪನ್ಯಾಸಕರಾಗಿ ಕೃಷ್ಣ ಕೊಂಚಾಡಿ ಹಾಗೂ ಹೆಚ್.ಎ. ಧರ್ಮರ್ಮಠ ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ಎಲ್‌ಐಸಿ ನೌಕರರ ಸಂಘದ ಮುಂದಾಳು ಲಕ್ಷ್ಮಿ ನಾರಾಯಣ ಭಟ್ ವಹಿಸಿದ್ದರು.

ತ್ರಿಪುರಾ ದಿನಾಚರಣೆ

ಸಿಐಟಿಯು ಜನರಲ್ ಕೌನ್ಸಿಲ್ ನೀಡಿದ ಕರೆಯ ಮೇರೆಗೆ, ನೂರಾರು ಮಂದಿ ಕಾರ್ಮಿಕರು ಭಾಗವಹಿಸಿದ ಬೃಹತ್ ಮೆರವಣಿಗೆಯು ಉಡುಪಿಗೆ ಸಮೀಪದ ಕಲ್ಯಾಣಪುರ ಸಂತೆಕಟ್ಟೆ ಬಳಿಯಿಂದ ಹೊರಟು ಉಡುಪಿ ನಗರದಲ್ಲಿ ಹಾದು ರಥ ಬೀದಿಯಲ್ಲಿ ಶ್ರೀ ಸಂಜೀವ್ ನಾಯಕರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ಜರುಗಿತು.

ಮೆರವಣಿಗೆಯಲ್ಲಿ ತ್ರಿಪುರಾದ ಧೀರ ಜನತೆಯ ಧೀರ ಹೋರಾಟಕ್ಕೆ ಜಯವಾಗಲಿ, ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸಿ, ಮಹಿಳೆಯರ ಮೇಲೆ ಅತ್ಯಾಚಾರ ನಡೆಸುವವರಿಗೆ ಧಿಕ್ಕಾರ, ಕಾಂಗ್ರೆಸ್-ಟಿಯುಜೆಎಸ್ ಸರ್ಕಾರ ರಾಜೀನಾಮೆ ಕೊಡಬೇಕು ಎಂಬ ಘೋಷಣೆಗಳೊಂದಿಗೆ ಸಾಗಿದ ನಂತರ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಉಡುಪಿ ತಾಲೂಕು ಸಮಿತಿ ಕಾರ್ಯದರ್ಶಿ ಡೇವಿಡ್ ಎ. ಕರ್ಕಡ ಮಾತನಾಡಿದರು.

ಜನಶಕ್ತಿ

ಪೋಲೀಸ್, ಸಶಸ್ತ್ರ ಗೂಂಡಾಗಳೇ ಊರುಗೋಲಾಗಿರುವ

ತ್ರಿಪುರಾ: ರಾಕ್ಷಸೀಯ ಕೃತ್ಯಗಳ ಸರಮಾ

ಫೆಬ್ರವರಿ 1988 ರಲ್ಲಿ ಸಶಸ್ತ್ರ ಸೇನೆಗಳ ದುರುಪಯೋಗ ಪಡೆದು ಕಳ್ಳತನದಿಂದ ಅಧಿಕಾರಕ್ಕೆ ಬಂದು ಕೇಂದ್ರದಲ್ಲಿ ಕಾಂಗ್ರೆ ಆಳ್ವಿಕೆಯಿದ್ದುದರಿಂದ ಅದನ್ನು ದಕ್ಕಿಸಿಕೊಂಡಿತು. ಇದೇ ಜುಲೈನಲ್ಲಿ ಸ್ವಾಯತ್ತ ಜಿಲ್ಲಾ ಮಂಡಳಿ ಚುನಾವಣೆಗಳಲ್ಲಿ ರಾಜ್ಯ ಸರಕಾರಿ ಯಂತ್ರದ ಪೂರ್ಣ ದುರುಪಯೋಗ ಪಡೆದು ಮತ್ತೆ ಯಶಸ್ವಿಯಾಗಿ ಮೋಸ ನಡೆಸಿತು. ಆದರೆ ರಾಷ್ಟ್ರೀಯ ರಂಗದ ಸಂಸದೀಯ ನಿಯೋಗದ ಭೇಟಿಯಿಂದ ಈ ಮೋಸ ಇಡೀ ದೇಶದ ಎದುರು ಬಂದುದರಿಂದ ತನ್ನನ್ನು ತಿದ್ದುಕೊಳ್ಳುವ ಬದಲು ತ್ರಿಪುರಾದ ಕೂಟ ಸರಕಾರ ಹತಾಶಕ್ರಮಕ್ಕಿಳಿದಿದೆ. ರಾಷ್ಟ್ರೀಯ ರಂಗದ ತಂಡ ಬಂದು ಹೋದ ಮೇಲೆ ಅರೆ-ಫ್ಯಾಸಿಸ್ಟ ದಬ್ಬಾಳಿಕೆ ಇನ್ನಷ್ಟು ತೀವ್ರಗೊಂಡಿದೆ.

ಸಿಪಿಐ(ಎಂ) ತ್ರಿಪುರಾ ರಾಜ್ಯ ಸೆಕ್ರೆಟಾರಿಯಟ್ ಈ ಹಿನ್ನಲೆಯಲ್ಲಿ ಈ ಮಾನಗೇಡಿ ಸರಕಾರವನ್ನು ಇಳಿಸಲು ಸಂಯುಕ್ತ ಆಂದೋಲನವನ್ನು ಬಲಪಡಿಸಬೇಕೆಂದು ಕರೆ ನೀಡಿದೆ.

ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಹಾಗೂ ರಾಜ್ಯದ ಮಾಜಿ ಮುಖ್ಯ ಮಂತ್ರಿ ನೃಪೇನ್ ಚಕ್ರವರ್ತಿ ಇಲ್ಲಿ ರಾಜ್ಯದ ಇತ್ತೀಚಿನ ರಾಜಕೀಯ ಚಿತ್ರವನ್ನು ತಮ್ಮ ಲೇಖನದಲ್ಲಿ ನೀಡಿದ್ದಾರೆ. ಅತ್ಯಂತ ತೊಂದರೆಗೀಡಾದ ಎರಡು ಬುಡಕಟ್ಟು ಡಿವಿಜನ್‌ಗಳಲ್ಲಿ ಅಧ್ಯಯನ ಮಾಡಿದ ಸಿಪಿಐ(ಎಂ) ತಂಡದ ವರದಿ ನೀಡಿರುವ ಅರೆ- ಫ್ಯಾಸಿಸ್ಟ ದಬ್ಬಾಳಿಕೆಯ ಕೆಲವು ಉದಾಹರಣೆಗಳು ಇಲ್ಲಿವೆ.

ತ್ರಿಪುರಾದಲ್ಲಿ ಕಾಂಗ್ರೆಸ್(ಐ)-ಟಿಯುಜೆಎಸ್ ನ ಅರೆ-ಫ್ಯಾಸಿಸ್ಟ್ ಭಯೋತ್ಪಾದನೆ ಈಗ ಹೊಸ ಹಂತ ತಲುಪಿದೆ. ಸ್ವಾಯತ್ತ ಜಿಲ್ಲಾ ಮಂಡಳಿ(ಎ.ಡಿ.ಸಿ.) ಚುನಾವಣೆಗಳಲ್ಲಿ ಹಿಂಸಾತ್ಮಕ ವಂಚನೆ ನಡೆಸಿ ಗೆದ್ದ ನಂತರ ಅಮಾನುಷ 'ವಿಜಯೋತ್ಸವ'ದೊಂದಿಗೆ ಇದು ಆರಂಭವಾಯಿತು. ಈಗಾಗಲೇ ಹೆಚ್ಚಿನ ಸಿಪಿಐ(ಎಂ) ಹಾಗೂ ಎಡರಂಗ ಬೆಂಬಲಿಗರನ್ನು ಬುಡಕಟ್ಟೇತರ ಪ್ರದೇಶಗಳಲ್ಲಿ , ನಗರಪ್ರದೇಶಗಳಲ್ಲಿ ಇದ್ದ ಅವರ ಮನೆಗಳಿಂದ ಓಡಿಸಲಾಗಿದೆ. ಕಾಂಗ್ರೆಸ(ಐ) ಗೂಂಡಾಗಳಿಗೆ ತಲೆಬಾಗದ ಪ್ರಮುಖ ಹಾಗೂ ಮಧ್ಯಮ ಹಂತದ ಮುಖಂಡರು, ಕಾರ್ಯಕರ್ತರು ಈಗ ಕ್ಯಾಂಪುಗಳಲ್ಲಿ ವಾಸಿಸುತ್ತಿದ್ದಾರೆ. ತಲೆ ಬಾಗಿದವರಲ್ಲಿ ಕೂಡಾ ಕೆಲವರನ್ನು ಈ ಗೂಂಡಾಗಳು ಕೊಂದಿದ್ದಾರೆ, ಅವರನ್ನು ಲೂಟಿ ಹೊಡೆದಿದ್ದಾರೆ.

ಬುಡಕಟ್ಟೇತರ ಪ್ರದೇಶಗಳಿಗೆ ಮಾತ್ರ ತನ್ನ ಭಯೋತ್ಪಾದಕ ಕೃತ್ಯಗಳನ್ನು ಈ ಕಾಂಗ್ರೆ ಗೂಂಡಾಗಳು ಸೀಮಿತಗೊಳಿಸಿಲ್ಲ. ಸ್ವಾಯತ್ತ ಜಿಲ್ಲಾ ಮಂಡಳಿ ಪ್ರದೇಶವನ್ನೆಲ್ಲಾ ಈ ಕೊಲೆಗಡುಕ ಗ್ಯಾಂಗುಗಳು ಆವರಿಸಿ ಬುಡಕಟ್ಟು ಜನರನ್ನು ಕಾಂಗ್ರೆಸ್(ಐ)ನ ಸೆರೆಯಾಳುಗಳನ್ನಾಗಿ ಮಾಡಿದ್ದಾರೆ. ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರಗಳು ಸಾಮಾನ್ಯ ಸಂಗತಿಯಾಗುತ್ತಿದೆ. ಪೋಲೀಸರು ದೂರು ತಗೊಳ್ಳುತ್ತಿಲ್ಲ. ಆಸ್ಪತ್ರೆಗಳು, ರೇಷನ್ ಅಂಗಡಿಗಳು ಬುಡಕಟ್ಟೇತರ ಪ್ರದೇಶಗಳಲ್ಲಿರುವುದರಿಂದ ಚಿಕಿತ್ಸೆ, ರೇಷನ್ ಕೂಡಾ ದೊರೆಯುತ್ತಿಲ್ಲ. ಅವರು ತಾವು ಬೆಳೆದ ತರಕಾರಿಗಳನ್ನು ಮಾರಲು ಮಾರುಕಟ್ಟೆಗಳಿಗೂ ಹೋಗುವಂತಿಲ್ಲ. ಪಶ್ಚಿಮ ತ್ರಿಪುರಾದ ಖೊವ್ವಾ ಸಬ್ ಡಿವಿಜನ್ನಿನ ತೆಲಿಯಾಮೂರಾ ರಾಜ್ಯದಲ್ಲೇ ಅತಿದೊಡ್ಡ ಗ್ರಾಮೀಣ ಮಾರುಕಟ್ಟೆ. ಅದೀಗ ಕಾಂಗ್ರೆ ಕೊಲೆಗಡುಕ ಗ್ಯಾಂಗುಗಳ ಕೇಂದ್ರ ಸ್ಥಳ.

ಎ.ಡಿ.ಸಿ. ಚುನಾವಣೆಗಳಲ್ಲಿ ಮೋಸ, ಹಿಂಸಾಚಾರದ ಯೋಜನೆಯನ್ನು ರೂಪಿಸಿದ ಮುಖ್ಯ ಮಂತ್ರಿ ಸುಧೀರ್ ರಂಜನ್ ಮು ಜುಂದಾರ್ ಒಬ್ಬ ಬಂಗಾಳಿ ಸಂಕುಚಿತವಾದಿ. ಬುಡಕಟ್ಟು ಪ್ರದೇಶಗಳಲ್ಲಿ ಸಂಘಟಿತ ಪ್ರಜಾಪ್ರಭುತ್ವ ಶಕ್ತಿಗಳನ್ನು ನಿರ್ನಾಮ ಮಾಡದೆ ತ್ರಿಪುರಾವನ್ನು ಬಂಗಾಳೀ ರಾಜ್ಯವಾಗಿಸುವ ತನ್ನ ಉದ್ದೇಶ ಫಲಿಸದು ಎಂದಾತ ಬುಡಕಟ್ಟು ಜನಗಳೇ ಹೆಚ್ಚಾಗಿ ವಾಸಿಸುವ ಎ.ಡಿ.ಸಿ. ಪ್ರದೇಶಗಳಲ್ಲಿ ಸಿಪಿಐ(ಎಂ) ಬುಡಕಟ್ಟು ನೆಲೆಯನ್ನು ದುರ್ಬಲಗೊಳಿಸಲು ಹೂಡಿದ ಹೊಸತಂತ್ರವೇ ಅರೆಫ್ಯಾಸಿಸ್ಟ್ ಭಯೋತ್ಪಾದನೆಯ ಹೊಸ ಘಟ್ಟದ ಹಿನ್ನೆಲೆ.

ಮೊದಲು ಸಂವಿಧಾನದ ಏಳನೇ ಶೆಡ್ಯೂಲ್ ಪ್ರಕಾರ ನಂತರ ಆರನೆ ಶೆಡ್ಯೂಲ್ ಪ್ರಕಾರ ಬುಡಕಟ್ಟು ಸ್ವಾಯತ್ತ ಮಂಡಳಿಯನ್ನು ಅಸ್ತಿತ್ವಕ್ಕೆ ತಂದ ಪಕ್ಷವೆಂದರೆ ಸಿಪಿಐ(ಎಂ) ಎಂಬುದು ಎಲ್ಲರಿಗೂ ತಿಳಿದ ಸಂಗತಿ. ಎಂದೂ ಕಾಂಗ್ರೆಸ್(ಐ) ಇದನ್ನು ಬೆಂಬಲಿಸಿರಲಿಲ್ಲ. ರಾಜ್ಯದಲ್ಲಿ ಬುಡಕಟ್ಟು ಜನಸಂಖ್ಯೆ 29 ಶೇ. ವಷ್ಟೇ ಇದ್ದರೂ ದೀರ್ಘ ಹೋರಾಟದ ನಂತರ ಈ ಸಂವಿಧಾನ ತಿದ್ದುಪಡಿ ಮಾಡಿ ಬುಡಕಟ್ಟು ಜನಗಳಿಗೆ ತಮ್ಮ ಆಡಳಿತ ತಾವೇ ಮಾಡಿಕೊಳ್ಳುವ ಈ ಅವಕಾಶ ಸಾಧ್ಯವಾಯಿತು. ಬೇರಾವ ರಾಜ್ಯದಲ್ಲೂ ಇಂತಹ ಅನುಕೂಲ ಬುಡಕಟ್ಟು ಜನಗಳಿಗೆ ದೊರೆತಿಲ್ಲ ಎಂಬುದು ಗಮನಾರ್ಹ. ಇಷ್ಟೇ ಅಲ್ಲ, ಭೂಮಿ ಹಕ್ಕು ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ಇನ್ನಷ್ಟು ಅಧಿಕಾರಗಳನ್ನು ಈ ಸ್ವಾಯತ್ತ ಮಂಡಳಿಗಳಿಗೆ ನೀಡುವಂತೆ ಸಿಪಿಐ(ಎಂ) ಮತ್ತು ಉಪಜಾತಿ ಗಣಮುಕ್ತಿ ಪರಿಷತ್ ಈಗಲೂ ಒತ್ತಾಯಿಸುತ್ತಿದೆ. ಈ ಹಿನ್ನೆಲೆಯಲ್ಲಿ ಸ್ವತ: ಮುಖ್ಯ ಮಂತ್ರಿ ಮು ಜುಂದಾರ್ ಬಾಂಗ್ಲಾ ದೇಶದಿಂದ ಸಾವಿರಾರು ನಿರಾಶ್ರಿತರು ತಂಡತಂಡವಾಗಿ ಬರಲು ಪ್ರೋತ್ಸಾಹ ನೀಡುತ್ತಿದ್ದಾರೆ. ಈ ಮೂಲಕ ಈ ಸ್ವಾಯತ್ತ ಮಂಡಳಿ ಪ್ರದೇಶಗಳಲ್ಲಿ ಬುಡಕಟ್ಟು ಜನರ ಸಂಖ್ಯೆ ಕಡಿಮೆಯಾಗುವಂತೆ ಮಾಡಲಾಗುತ್ತಿದೆ. ಕಳೆದ ಎ.ಡಿ.ಸಿ. ಚುನಾವಣೆಗಳಲ್ಲಿ ಈ ವಿದೇಶೀ ನಿರಾಶ್ರಿತರಲ್ಲಿ ಬಹಳಷ್ಟು ಮಂದಿ ಕಾಂಗ್ರೆಗೆ ಮತ ನೀಡಿದರು. ತ್ರಿಪುರಾದ ಬುಡಕಟ್ಟೇತರ ಜನರು ಕೂಡಾ, ಈ ನಿರಾಶ್ರಿತರ ಪ್ರವಾಹವನ್ನು ಸ್ವಾಗತಿಸುತ್ತಿಲ್ಲ. ಕಾರಣ ಅವರ ಶೋಚನೀಯ ಆರ್ಥಿಕ ಸ್ಥಿತಿ. ಗಡಿಯಾಚೆಯಿಂದ ಬರುವವರಿಂದ ಈ ಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳ್ಳುತ್ತಿರುವುದನ್ನು ಅವರು ಅನುಭವಿಸುತ್ತಿದ್ದಾರೆ.

ರಾಜೀವ್ ಗಾಂಧಿಯ ಪಕ್ಷದ ನಿಜ ಬಣ್ಣ ತ್ರಿಪುರಾದಲ್ಲಿ ಪೂರ್ಣ ಬಯಲಾಗಿದೆ. ಕಾನೂನು ವ್ಯವಸ್ಥೆಯಂತೂ ಕುಸಿದೇ ಬಿದ್ದಿದೆ. ಆರ್ಥಿಕ ಸ್ಥಿತಿ ಕೂಡಾ ಹಿಂದೆಂದೂ ಕಾಣದ ಪ್ರಪಾತಕ್ಕೆ ಬಿದ್ದಿದೆ. ಮಂತ್ರಿಮಂಡಳವೇ ತನ್ನ ದಿವಾಳಿತನವನ್ನು ಒಪ್ಪಿಕೊಂಡಿದೆ. ರಿಝರ್ವ್ ಬ್ಯಾಂಕಿನಿಂದ ಸಾಲ ಪಡೆಯದೆ ತನ್ನ ನೌಕರರಿಗೂ ಸಂಬಳ ಕೊಡಲಾರದಂತಹ ಸ್ಥಿತಿ . ದುಂದು ವೆಚ್ಚ 200 ಕೋಟಿರೂ. ಮೀರಿದೆ. ರಾಜ್ಯವೀಗ ಕೆಲವೇ ಕಾಳಸಂತೆಕೋರರ, ಕಳ್ಳ ದಾಸ್ತಾನುಗಾರರ, ಲೇವಾದೇವಿಗಾರರ, ಮಧ್ಯವರ್ತಿಗಳ ಮರ್ಜಿಯ ಗುಲಾಮನಂತಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯ ಆಹಾರ ಧಾನ್ಯಗಳು ಕಾಳಸಂತೆಗೆ ಹೋಗುತ್ತಿವೆ. ಅತ್ತ ರಾಜ್ಯದ 80 ಶೇ. ಗಿರಿಜನ,ಹರಿಜನ ಹಾಗೂ ಹಿಂದುಳಿದ ಜನಗಳು ಬಡತನದ ರೇಖೆಯ ಕೆಳಗೆ ಜೀವಿಸುತ್ತಿದ್ದಾರೆ.

ಈ ಅಭೂತಪೂರ್ವ ಯೋಚಿಸಲೂ ಆಗದ ದೊಡ್ಡ ಬಿಕ್ಕಟ್ಟಿನಿಂದಾಗಿ ಕಾಂಗ್ರೆಸ್(ಐ) ಮುಖಂಡತ್ವದ ಒಂದು ವಿಭಾಗ ಕೂಡಾ ವಿಚಲಿತವಾಗಿದೆ. ಕೂಟ ಸರಕಾರದ ಇತ್ತೀಚಿನ ಬಿಕ್ಕಟ್ಟಿನಲ್ಲಿ ಇದು ಪ್ರತಿಫಲಿತವಾಗಿದೆ. ಈ ಕೂಟ ಸರಕಾರ ತನ್ನ ಧೋರಣೆಗಳಿಂದಾಗಿ ಜನರಿಂದ ದೂರ ಸರಿಯುತ್ತಿದೆ. ಆದ್ದರಿಂದಲೇ ಪೋಲೀಸರ, ತನ್ನದೇ ಸಶಸ್ತ್ರ ಗೂಂಡಾಗಳ ಮೇಲೆ ಹೆಚ್ಚೆಚ್ಚು ಅವಲಂಬಿಸುತ್ತಿದೆ. ಬಾಯಿತೆರೆಯಲು ಕೂಡಾ ಜನ ಹೆದರುವ ಪರಿಸ್ಥಿತಿಯಿದ್ದರೂ ಈ ಕೂಟ ಮಂತ್ರಿಮಂಡಳ ಹೋಗಬೇಕೆಂಬುದು ಬಹು-

ಬುಡಕಟ್ಟು ಜನರ	
ಎ.ಡಿ.ಸಿ. ಚುನಾವಣೆಯ ನಂತರ ... ಕಟ್ಟು ಜನರು ಮತ್ತು ಅವರ ಪ್ರಜಾಪ್ರ... ಒಂದು. ಕೆಲವು ಅಂಕೆ-ಸಂಖ್ಯೆಗಳು	
ಸಬ್ ಡಿವಿಜನ್‌ಗಳು	ಹಳ್ಳಿಗಳು
ಕೈಲಾಶಹರ್	37
ಸಬ್ರೂಮ್	20
ಖೊವ್ವಾ	19
ಸದರ್	15
ಕಮಲ್‌ಪುರ್	11
ಧರ್ಮನಗರ್	6
ಉದಯ್‌ಪುರ್	5
ಅಮರ್‌ಪುರ್	4
	117

ಕಾಂಗ್ರೆ ಅರೆ-ಫ್ಯಾಸಿಸ್ಟ್ ಭಯೋತ್ಪಾದನೆಯ ಹೊಸ ಘಟ್ಟ!

'ಶರಣಾಗು ಇಲ್ಲವೆ ಊರು ಬಿಡು'

ಸಬ್ರೂಮ್ ಸಬ್ ಡಿವಿಜನ್ನಿನ ಹರಿಣ ಎಂಬ ಊರು. ಆಗಸ್ಟ್ 6ರ ರಾತ್ರಿ 10 ಗಂಟೆ. ನಾಲ್ವರು ಕಾಂಗ್ರೆ ಕಾರ್ಯಕರ್ತರು ಶ್ರೀಯುತ ಶಾಂತಿ ಕರ್ಮಕಾರ್ ಮನೆಯ ಮೇಲೆ ದಾಳಿ ಮಾಡಿದರು. ಹಿಂದಿನ 3-4ರ ರಾತ್ರಿ ಕೂಡಾ ಇದೇ ರೀತಿ ದಾಳಿಮಾಡಿದ್ದರು. ಆತನನ್ನು ಮನೆಯಿಂದ ಓಡಿಸಿದರು. ತನ್ನ ಚಿಕ್ಕ ಮಕ್ಕಳೊಂದಿಗಿದ್ದ ಶಾಂತಿಯ ಪತ್ನಿ ಕಮಲಾ ಕರ್ಮಕಾರ್‌ಳನ್ನು ಮನೆಯ ಹೊರಗೆ ದರದರನೆ ಹೊರಗೆ ಎಳೆದೊಯ್ದರು- ಮಕ್ಕಳನ್ನು ಒಂದೆಡೆ ತಳ್ಳಿ ಬಿಟ್ಟು ಹೊರಗೆ ನಾಲ್ಕು ಮಂದಿ ಕಮಲಾಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದರು. ಕಮಲಾ ಈ ಘೋರ ಬೆಲೆ ತೆರಲು ಆಕೆ ಮಾಡಿದ್ದ ತಪ್ಪಾದರೂ ಏನು? ಆಗಸ್ಟ್ ಮೊದಲ ವಾರದಲ್ಲಿ ಬಂದಿದ್ದ ಶ್ರೀಯುತ ಯಶವಂತ ಸಿನ್ಹಾ ರವರ ರಾಷ್ಟ್ರೀಯ ರಂಗದ ನಿಯೋಗದೆದುರು ತನ್ನ ಪ್ರದೇಶದಲ್ಲಿ ಕಾಂಗ್ರೆಯನ್ನು ಭಯೋತ್ಪಾದಕ ಕೃತ್ಯಗಳ ಬಗ್ಗೆ ಸತ್ಯ ನುಡಿದಿದ್ದಳು ಆಕೆ! ಪತಿ ಶಾಂತಿ ಕರ್ಮಕಾರ್ ಮೇಲೆ ಹಲವಾರು ಸುಳ್ಳು ಆರೋಪಗಳನ್ನು ಹೊರಿಸಿ ಎರಡು ಬಾರಿ ಜೈಲಿಗೆ ಕಳಿಸಿದ್ದರು. ಆದರೆ ಆಗಸ್ಟ್ 6ರಂದು ಮಾತ್ರವಲ್ಲ ಇನ್ನೂ ಹಲವೆಡೆ ಈ ಸಾಮೂಹಿಕ ಅತ್ಯಾಚಾರ ನಡೆಸಿದ ಈ ಕಾಂಗ್ರೆ ಕಾರ್ಯಕರ್ತರಾದ ಕಾಲಾ ಚಂದ್ ದೇಬನಾಥ್, ಅಜಿತ್ ಚೌಧರಿ, ಮಾಖನ್ ದೇಬನಾಥ್ ಮತ್ತು ಸಾಧನ್ ರಾಯ್ ನಿರ್ಭೀಡೆಯಿಂದ ತಮ್ಮ ಘೋರ ಪಾತಕಗಳನ್ನು ಮತ್ತೆ ಮತ್ತೆ ನಡೆಸಲು ಅವಕಾಶ ಕೊಡಲಾಗಿದೆ.

ಇದು ಸಿಪಿಐ(ಎಂ), ಎಂ.ಎಲ್.ಎ.-ಗಳು , ಎ.ಡಿ.ಸಿ. ಸದಸ್ಯರು ಹಾಗೂ ಇತರ ಮುಖಂಡರಿದ್ದ ಅಧ್ಯಯನ ತಂಡವೊಂದು ಕಲೆಹಾಕಿದ ನೂರಾರು ದಾರುಣ ಘಟನೆಗಳಲ್ಲಿ ಒಂದಷ್ಟೆ. ರಾಷ್ಟ್ರೀಯ ರಂಗದ ನಿಯೋಗ ತ್ರಿಪುರಾಕ್ಕೆ ಭೇಟಿ ಕೊಟ್ಟು ಹೋದ ನಂತರ ವಿಪರೀತಗೊಂಡ ಅರೆ--ಫ್ಯಾಸಿಸ್ಟ್ ಹಿಂಸಾಚಾರದ ಬಗ್ಗೆ ಪೂರ್ಣ ಮಾಹಿತಿ ಕಲೆ ಹಾಕಲು ಈ ತಂಡ ಸಬ್ರೂಮ್ ಹಾಗೂ ಬೆಲೋನಿಯಾಕ್ಕೆ ಭೇಟಿ ನೀಡಿತ್ತು.

ಕಾಲಾ ದೇವಾ ಎಂಬ ಬುಡಕಟ್ಟು ಜನರೇ ಹೆಚ್ಚಾಗಿದ್ದ ಊರು. ತುಂಬು ಗರ್ಭಿಣಿ ಕಂಚನಾಸತಿ ತ್ರಿಪುರಾಳ ಎದೆಯ ಮೇಲೆ ಚಾಕುವನ್ನೊತ್ತಿ ಹಿಡಿದು ಹಲವಾರು ಕಾಂಗ್ರೆ ಕಾರ್ಯಕರ್ತರು ಸಾಮೂಹಿಕ ಅತ್ಯಾಚಾರ ನಡೆಸಿದರು. ಆಕೆ ಈ ಅತ್ಯಾಚಾರಿಗಳೆಲ್ಲರ ಪರಿಚಯವನ್ನು ಸಿಪಿಐ(ಎಂ) ತಂಡಕ್ಕೆ ನೀಡಿದಳು. ಅಮರ್ ಪಟ್ವಾರಿ ಹಾಗೂ ಸಮೀರನ್ ಬಿಸ್ವಾಸ್ ಈ ಅತ್ಯಾಚಾರಿಗಳಲ್ಲಿ ಪ್ರಮುಖರು. ಆಕೆಯ ಪತಿ ರಾಮ್ ಮೋಹನ್ ತ್ರಿಪುರಾ ಮೇಲೆ ತೀಕ್ಷ್ಣವಾದ ಈಟಿಯಿಂದ ಹಲ್ಲೆ ಮಾಡಿ ಮನೆಯಿಂದ ಹೊರಗೆಳೆದು ಹಾಕಿದ್ದರು. ಈ ಘಟನೆಯ ನಂತರ ಇಬ್ಬರೂ ಆತ್ಮಹತ್ಯೆಗೆ ಪ್ರಯತ್ನಿಸಿದ್ದರು. ಅವರ ಹಿತೈಷಿಗಳ ಪ್ರಯತ್ನದಿಂದಲಷ್ಟೆ ಅವರ ಪ್ರಾಣ ಉಳಿದದ್ದು.

ಇದೇ ಅಮರ್ ಪಟ್ವಾರಿ ತನ್ನ ಇತರ ಕಾಂಗ್ರೆ ಗೆಳೆಯರೊಂದಿಗೆ ಚಲಿತಚ್ಚಾರಿ ಎಂಬ ಹಳ್ಳಿಯಲ್ಲಿ ಪಟಾಕಿಗಳನ್ನು ಹಚ್ಚಿ ಹೆದರಿಸಿ ಪಂಚಲಕ್ಷ್ಮಿಯೆಂಬಾಕೆಯನ್ನು ಬಲಾತ್ಕಾರದಿಂದ ಅಂಗಾತ ಮಲಗಿಸಿ ಆಕೆಯ ಗುಪ್ತಾಂಗಗಳ ಮೇಲೆ ಬೊಂಬುಗಳನ್ನು ತುರುಕಿಸಿ 'ವಿಜಯೋತ್ಸವ' ನಡೆಸಿದ. ಶಾಂತಲಕ್ಷ್ಮಿ ತ್ರಿಪುರಾಳ ಮೇಲೆ ಆಕೆಯ 15 ವರ್ಷದ ಮಗಳು ನಯನಮಾಲಾಳೆದುರೇ ಸಾಮೂಹಿಕ ಅತ್ಯಾಚಾರ ನಡೆಸಿದ ದುರುಳರ ಮುಖಂಡ ಕೂಡಾ ಈತನೇ. ನಯನಮಾಲಾಳ ತಂದೆ- ಪುತ್ರಾ ತ್ರಿಪುರಾ ಮತ್ತು ತಮ್ಮನನ್ನು ಮೊದಲೇ ಮನೆಯಿಂದ ಓಡಿಸಿದ್ದ ಈ ಸಶಸ್ತ್ರ ಕಾಂಗ್ರೆ ಗೂಂಡಾಗಳು ನಂತರ ನಯನಮಾಲಾಳನ್ನು ಅಪಹರಿಸಿದ್ದರು. •

ಚಲಿತಚಾರಿ ಗ್ರಾಮ ಸಭೆಯ ಮಾಜಿ ಪ್ರಧಾನ ಹಾಗೂ ಆ ಊರಿನ ಅತ್ಯುತ್ತಮ ರೈತನೆನಿಸಿಕೊಂಡಿದ್ದ ಹರಿ ಮೋಹನ್ ದೇಬನಾಥ್ ಮನೆ, ಹಸು ಕರುಗಳು, ಭತ್ತ, ಕೃಷಿ ಸಲಕರಣೆಗಳು ಎಲ್ಲವನ್ನೂ ಲೂಟಿಮಾಡಿದರು. ಕಾಂಗ್ರೆ ದುರುಳರು ಆತನ ಮೀನಿನ ಕೊಳಕ್ಕೆ ವಿಷ ಹಾಕಿದರು. ಆತನ ಅಂಗಡಿಯ ಜಿಂಕ್ ಶೀಟ್‌ಗಳನ್ನು ಬಿಡಲಿಲ್ಲ. ಈ ಇಡೀ ಕುಟುಂಬ ಈಗ ಕ್ಯಾಂಪೊಂದರಲ್ಲಿ ಆಶ್ರಯ ಪಡೆದಿದೆ. ಈ ಕುಟುಂಬ ತನ್ನ ಗದ್ದೆಯಲ್ಲಿ ಏನನ್ನೂ ಬೆಳೆಯಲು ಈಬಾರಿ ಬಿಡಲಿಲ್ಲ. ಇನ್ನೊಬ್ಬ ರೈತ ಚುಂಗ್ ಕ್ರಿ ತ್ರಿಪುರಾನ ಗದ್ದೆಯು ಈಗ ಬಂಜರಾಗಿ ನಿಂತಿದೆ.

ಬಿಜೊಯ್ ನಗರ ಪಂಚಾಯಿತಿನ ಬೊಖೋಲಾ ಹರಿಜನರೇ ಇರುವ ಗ್ರಾಮ- ಇಲ್ಲಿಯ ಯಾವ ಮಹಿಳೆಯೂ ಈಗ ಹತ್ತಿರದ ಮಾರುಕಟ್ಟೆಗೆ ಹೋಗುವಂತಿಲ್ಲ. ಸಬ್ರೂಮಿಗೆ ಹೋಗುತ್ತಿದ್ದ ಅನಿಮಾ ಮಜುಂದಾರ್ ಎಂಬ ವಿದ್ಯಾರ್ಥಿನಿಯನ್ನು ಕಾಂಗ್ರೆ ರೌಡಿಗಳು ಹಿಂಬಾಲಿಸಿದರು. ಹೇಗೋ ಆಕೆ ಪಾರಾದಳು. ಈ ಗ್ರಾಮದಲ್ಲಿ ಭಯೋತ್ಪಾದನೆಯನ್ನು ಹರಡಿರುವ ಕಾಂಗ್ರೆ ರೌಡಿಗಳೆಂದರೆ ಕುಂಜರಾಲ್ ಮಜುಂದಾರ್, ಗೌರ್-ಹರಿ ಮಜುಂದಾರ್ ಮತ್ತು ಶಿಶುರಂಜನ್ ಮಜಂದಾರ್.

• ಕೃಷ್ಣನಗರದ ಮಾಜಿ ಸೈನಿಕ ಹಾಗೂ ಅಗ್ರಿ-ಫಾರ್ಮಿನ ಮಾಜಿ ನೌಕರ ನಂದಕಿಶೋರ್ ಬಿಸ್ವಾಸ್‌ಗೆ 5000ರೂ. ತೆರಬೇಕೆಂದು ಮನುಬರ್ಝಾರ್‌ನ ಕಾಂಗ್ರೆ ಕ್ಲಬ್ ಹಾಗೂ ಶ್ರೀನಗರದ ಸಮಾಜಘಾತಕರು 5000ರೂ.ತೆರಬೇಕೆಂದು ಪೀಡಿಸುತ್ತಿದ್ದಾರೆ ಎಂದು ಆತನ ಮಗ ರಾಹುಲ್

1. ಸಬ್ರೂಮ್, ಬೆಲೋನಿಯಾ ಸಬ್ ಡಿವಿಜನ್‌ಗಳಲ್ಲಿ ಕಾನೂನು ವ್ಯವಸ್ಥೆ ಸಂಪೂರ್ಣ ಕುಸಿದಿದೆ.
2. ಜನರ ಆಸ್ತಿ-ಪಾಸ್ತಿ, ಮಹಿಳೆಯರ ಮಾನ ಹಾಗೂ ಜೀವದ ಹಕ್ಕು-ಎಲ್ಲಾ ಕೆಲವು ಹಿಡಿಯಷ್ಟು ಕಾಂಗ್ರೆಸ್(ಐ) ರೌಡಿಗಳ ಮರ್ಜಿಯ ಮೇಲೆ ನಿಂತಿದೆ.
3. ಅರೆ-ಫ್ಯಾಸಿಸ್ಟ್ ಹಲ್ಲೆಗಳು ಅತ್ಯಂತ ಹೆಚ್ಚು ತಟ್ಟಿರುವುದು ಬುಡಕಟ್ಟೇತರ ಜನ ಹೆಚ್ಚಿರುವ ಪ್ರದೇಶಗಳ ಸಮೀಪವಿರುವ ಬುಡಕಟ್ಟು ಪ್ರದೇಶಗಳಲ್ಲಿ. ಈ ಎ.ಡಿ.ಸಿ. ಪ್ರದೇಶಗಳ ಬುಡಕಟ್ಟು ಜನ ತಮ್ಮ ಪ್ರದೇಶಗಳಲ್ಲೇ ಸೆರೆಯಾಳಾಗಿದ್ದಾರೆ.
4. ಅತ್ಯಾಚಾರಕ್ಕೊಳಗಾದ ಯಾರೂ ಪೋಲೀಸ್ ಸ್ಟೇಷನ್‌ಗಳಿಗೆ ಹೋಗುವಂತಿಲ್ಲ. ಹೋದರೂ ಯಾವ ಪೋಲೀಸ್ ಕ್ರಮಗಳೂ ಜರುಗುವುದಿಲ್ಲ.
5. ಬುಡಕಟ್ಟು ಜನಗಳ , ಮುಖ್ಯವಾಗಿ ರ್ಝೂಮಿಯಾಗಳ ಆರ್ಥಿಕ ಜೀವನ ಪೂರ್ಣವಾಗಿ ಕುಸಿದಿದೆ. ಕೆಲಸವಿಲ್ಲ, ಅಕ್ಕಿವಿಲ್ಲ, ಬೆಳೆದು ನಿಂತ ಬೆಳೆ ಕಟಾವು ಮಾಡಲೂ ಆಗುತ್ತಿಲ್ಲ. ಜನರಿಗೆ ಲೂಟಿಯ ಭಯ.
6. ವಿದ್ಯಾರ್ಥಿಗಳೂ ತೀವ್ರ ಹಲ್ಲೆಗೊಳಗಾದವರಲ್ಲಿ ಪ್ರಮುಖರು. ಹೆಚ್ಚಾಗಿ ಪಕ್ಕದ ನಗರ ಪ್ರದೇಶಗಳಲ್ಲಿರುವ ಶಾಲೆಗಳಿಗೆ ಅವರು ಹೋಗುವಂತೆಯೇ ಇಲ್ಲ.
7. ಹಲ್ಲೆಗೊಳಗಾದವರು ಆಸ್ಪತ್ರೆಗಳಿಗೂ ಹೋಗುವಂತಿಲ್ಲ.

ಜುಲೈ 8ರ ನಂತರ ಅರೆ-ಫ್ಯಾಸಿಸ್ಟ್ ಹಲ್ಲೆಗ

ಜುಲೈ 8ರಂದು ಎ.ಡಿ.ಸಿ. ಚುನಾವಣೆಯ ನಂತರ ಕಾಂಗ್ರೆ-ಟಿ.ಯು.ಜೆ.ಎಸ್. ದಬ್ಬಾಳಿಕೆಗಳ ಕೆಲವು ಅಂಕಿ ಅಂಶಗಳು ಇಲ್ಲಿವೆ.

ಸಬ್ ಡಿವಿಜನ್‌ಗಳು	ಕೊಲೆಯಾದ ಎಡರಂಗ ಕಾರ್ಯಕರ್ತರು, ಬೆಂಬಲಿಗರು	ಮಹಿಳೆಯರಮೇಲೆ ಅತ್ಯಾಚಾರ, ಗುಂಪು ಅತ್ಯಾಚಾರ	ಸುಟ್ಟ, ಆಕ್ರಮಿತ, ಲೂಟಿಯಾದ ಪಕ್ಷದ ಕಛೇರಿಗಳು
ಸದರ್	7	6	4
ಸಬ್ರೂಮ್	4	21	10
ಬೆಲೋನಿಯಾ	4	2	29
ಖೊವ್ವಾ	4		3
ಧರ್ಮನಗರ್	3	3	2
ಅಮರ್‌ಪುರ್	2	-	1
ಕೈಲಾಶಹರ್	1	4	17
ಕಮಲ್‌ಪುರ್		4	
ಉದಯ್‌ಪುರ್		1	5
ಸೋನಾಪುರ್	2	2	4
ಒಟ್ಟು	25	43	75

—ನೃಪೇನ್ ಚಕ್ರವರ್ತಿ

...ರೆ-ಫ್ಯಾಸಿಸ್ಟ್ ದಾಳಿ	
...ಪಿ.ಎಸ್. ಧಾಳಿಯ ಮೊದಲ ಗುರಿ ಬುಡ... ...ಗಳು. ಇದರಲ್ಲಿ ಆರ್ಥಿಕ ದಿಗ್ಬಂಧನವೂ	
...ರೆ ...ದ ಜನ	ಇವರಲ್ಲಿ ಬುಡಕಟ್ಟು ಜನರ ಸಂಖ್ಯೆ
...ಹೆಚ್ಚು	75000
	8000
...ಹೆಚ್ಚು	75000
	1500
	5000
	1500
	1500
	3000
	170500

...ಪಾಲು ಜನರ ಅಪೇಕ್ಷೆ. ರಾಜ್ಯಾದ್ಯಂತ ಸ್ವಯಂಸ್ಫೂರ್ತಿಯಾಗಿ ಅಸಂತೃಪ್ತಿ ಭುಗಿಲ್ಲೇಳುತ್ತಿದೆ. ಅಂತಿಮ ವಾಗಿ ಈ ಕೂಟ ಸರಕಾರದ ಪದಚ್ಯುತಿಯೊಂದಿಗೆ ಅದು ಕೊನೆಗೊಳ್ಳಬೇಕು.

ಬಿಸ್ವಾಸ್ ಸಿಪಿಐ(ಎಂ) ತಂಡಕ್ಕೆ ತಿಳಿಸಿದ. ಎಸ್.ಎಫ್.ಐ.ಕಾರ್ಯಕರ್ತನಾದ ರಾಹುಲ್ ಈ ಬಾರಿ ಮಾಧ್ಯಮಿಕ ಪರೀಕ್ಷೆ ಪಾಸಾಗಿದ್ದ. ಆದರೆ ಅಂಕ ಪಟ್ಟಿ ಪಡೆಯಲು ಶಾಲೆಗೆ ಹೋಗಲು ಕಾಂಗ್ರೆ ಗೂಂಡಾಗಳು ಬಿಡಲಿಲ್ಲ. ಒಬ್ಬ ಉಪಾಧ್ಯಾಯರ ಮೂಲಕ ಅದನ್ನು ಪಡೆದರೂ ರೌಡಿಗಳು ಅದನ್ನು ಕಿತ್ತು ಕೊಂಡು ನಾಶಮಾಡಿದರು. ಇನ್ನಿಬ್ಬರು ಹತ್ತನೇ ತರಗತಿ ವಿದ್ಯಾರ್ಥಿ ಉತ್ತಮ್ ದೇ ಮತ್ತು ನಾರಾಯಣ ದಾಸ್ ಮನೆ ಬಿಟ್ಟು ಹೋಗಬೇಕಾಗಿ ಬಂದಿದ್ದು ಟ್ರಾನ್ಸ್‌ಫರ್ ಸರ್ಟಿಫಿಕೇಟ್ ಸಿಗದೆ ಶಿಕ್ಷಣ ಅಸ್ತವ್ಯಸ್ತಗೊಂಡಿದೆ.

ಆಗಸ್ಟ್13,1990 . ಕರೀಮತಿಲ್ಲಾ ಹಳ್ಳಿ. ಆ ಪ್ರದೇಶದ ಪ್ರಮುಖ ಸಿಪಿಐ(ಎಂ) ಕಾರ್ಯಕರ್ತ ಹಲ್ದರ್ ಬಿಸ್ವಾಸ್‌ರ 14 ವರ್ಷದ ಮಗ ಜುಬರಾಜ್ ಬಿಸ್ವಾಸ್ ಎಂದಿನಂತೆ ತನ್ನ ಮನೆಯಿಂದ ಸ್ವಲ್ಪ ದೂರದಲ್ಲಿ ದನ ಮೇಯಿಸುತ್ತಿದ್ದ. ಇದ್ದಕ್ಕಿದ್ದಂತೆ ಕಾಣೆಯಾದ. ಸ್ವಲ್ಪ ಹೊತ್ತಿನಲ್ಲೇ ಆತನು ಕೊಲೆಯಾದ ಸುದ್ದಿತಿಳಿದ ಗ್ರಾಮಸ್ಥರೆಲ್ಲಾ ನೆರೆದರು. ಜುಬರಾಜ್‌ನ ಕಾಲುಗಳನ್ನುಹಗ್ಗದಿಂದ ಕಟ್ಟಲಾಗಿತ್ತು. ದೇಹ ಮರದಿಂದ ನೇತಾಡುವ ಸ್ಥಿತಿಯಲ್ಲಿತ್ತು. ಆದರೆ ಕಾಲುಗಳು ನೆಲದ ಮೇಲೇ ನಿಂತಿದ್ದವು. ನೇಣು ಕತ್ತನ್ನು ಬಿಗಿದ ಲಕ್ಷಣಗಳೂ ಇರಲಿಲ್ಲ. ಕುತ್ತಿಗೆಯಲ್ಲಿ ಗಾಯಗಳಾಗಿರಲಿಲ್ಲ. ಅವನನ್ನು ಕತ್ತು ಹಿಸುಕಿ ಕೊಲ್ಲಲಾಗಿತ್ತು. ಹಳ್ಳಿಗರೆಲ್ಲಾ ನೆರೆದಿರುದನ್ನು ಕಂಡ ಕೊಲೆಗಡುಕರು ತಕ್ಷಣ ಬಂದು ಮರಣೋತ್ತರ ಪರೀಕ್ಷೆ ಕೂಡಾ ನಡೆಸಲು ಬಿಡದೆ ಹೆಣವನ್ನು ಸುಟ್ಟು ಹಾಕಿದರು. ಹಲ್ದರ್ ಬಿಸ್ವಾಸ್‌ರ ಮನೆಗೂ ಒಯ್ಯ-

ಪುಟ 6 ಕ್ಕೆ

...ಂದು ಚಿತ್ರ	
...ಿದೆ. ಆ ನಂತರ ನಡೆದ ಘಟನೆ-	
...ತ	ಸುಟ್ಟ, ಲೂಟಿಯಾದ
...ದ	ಮನೆ- ಅಂಗಡಿಗಳು
	ಸಂಘಟನೆಗಳ ಕಛೇರಿ
	171
	67
	45
	83
	15
	37
	233
	64
	30
	25
	770

ರಾಷ್ಟ್ರೀಯ ಸಮಗ್ರತಾ ಮಂಡಳಿ ಕರೆ

ಅಯೋಧ್ಯಾ ವಿವಾದಕ್ಕೆ ಮಾತುಕತೆಯಿಂದ ಪರಿಹಾರ

ರಾಷ್ಟ್ರೀಯ ರಂಗ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಆರು ತಿಂಗಳ ಹಿಂದೆ ಪುನರ್ ರಚಿಲ್ಪಟ್ಟ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಎರಡನೇ ಸಭೆ ಮದ್ರಾಸಿನಲ್ಲಿ ಸೆಪ್ಟೆಂಬರ್ 22 ರಂದು ನಡೆಯಿತು. ಈ ಸಭೆಯ ಅಜೆಂಡಾ—(1) ಕಾನೂನು ವ್ಯವಸ್ಥೆಯ ಒಟ್ಟಾರೆ ಪರಾಮರ್ಶೆ. (2) ಜಾತ್ಯಾತೀತತೆ. (3) ರಾಮಜನ್ಮಭೂಮಿ ವಿವಾದ.

ರಾಮಜನ್ಮ ಭೂಮಿ ವಿವಾದದ ಬಗ್ಗೆ ಸೆಪ್ಟೆಂಬರ್ 18 ರಂದು ದೆಹಲಿಯಲ್ಲಿ ಸಭೆ ಸೇರಿದ್ದ ಕೋಮು ಸೌಹಾರ್ದ ಉಪಸಮಿತಿ ಮೂರು ಅಂಶಗಳ ಶಿಫಾರಸ್ಸನ್ನು ಮಂಡಳಿಯ ಸಭೆಗೆ ಸಲ್ಲಿಸಿತ್ತು. ಇದರ ಕೆಲವ ನ್ನು ವಿಕೃತಗೊಳಿಸಿ ಪತ್ರಿಕೆಗಳಿಗೆ ಸೋರಗೊಟ್ಟುದರಿಂದ ತನಗೆ ತೊಂದರೆಯಾಗಿದೆ ಎಂಬ ಕಾರಣ ಹೇಳಿ ಬಿಜೆಪಿ ಈ ಸಭೆಯಲ್ಲಿ ಭಾಗವಹಿಸಲಿಲ್ಲ. ಈ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಸಬೇಕೆಂದು ಹಲವು ಸದಸ್ಯರು ಒತ್ತಾಯಿಸಿದರು. ಈ ಸೋರಿಕೆ ದುರದೃಷ್ಟಕರ, ಇದರಿಂದ ಬಿಜೆಪಿಯೂ ಒಳಗೊಂಡಂತೆ ಒಂದು ಸರ್ವಸಮ್ಮತಿ ರೂಪಿಸುವುದಕ್ಕೆ ಅಡ್ಡಿ ಬಂದಿದೆ ಎಂದು ಹೆಚ್ಚಿನವರು ಅಭಿಪ್ರಾಯ ಪಟ್ಟರು. ಪ್ರಧಾನ ಮಂತ್ರಿಗಳು ಮತ್ತೊಮ್ಮೆ ಬಿಜೆಪಿ ಮುಖಂಡರನ್ನು ಸಂಪರ್ಕಿಸಿ, ಉಪಸಮಿತಿ ಶಿಫಾರಸಿನ ಸೋರಿಕೆ ಬಗ್ಗೆ ಮಂಡಲಿಯ ಖೇದ ವ್ಯಕ್ತ ಪಡಿಸಿ

> **ರಾಮಜನ್ಮ ಭೂಮಿ-ಬಾಬ್ರಿ ಮಸೀದಿ ಪರಿಹಾರಕ್ಕಾಗಿ ಮಾತುಕತೆಗಳ ಪ್ರಕ್ರಿಯೆಯನ್ನು ಮುಂದುವರೆಸಬೇಕೆಂಬ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸರ್ವಸಮ್ಮತ ನಿರ್ಣಯ ಈ ಸಭೆಯ ಪ್ರಮುಖ ಪರಿಣಾಮ. ಈ ನಿರ್ಣಯ ಈ ವಿವಾದ ಇತ್ಯರ್ಥ ಕಂಡು ಹುಡುಕುವ ಮಾತುಕತೆಯ ಪ್ರಕ್ರಿಯೆಯಲ್ಲಿ ಬಿಜೆಪಿಯನ್ನು ಒಳಗೊಳ್ಳಲು ನೆರವಾಗುತ್ತದೆ ಎಂಬ ಆಶಾಭಾವನೆಯನ್ನು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ವ್ಯಕ್ತಪಡಿಸಿದ್ದಾರೆ.**

ಸರ್ವಸಮ್ಮತಿ ರೂಪಿಸುವ ಉಪಸಮಿತಿಯು ಆರಂಭಿಸಿದ ಪ್ರಕ್ರಿಯೆಯನ್ನು ಮುಂದುವರಿಸಬೇಕೆಂದು ನಿರ್ಧರಿಸಲಾಯಿತು.

ಕೋಮು ಸೌಹಾರ್ದ ಉಪಸಮಿತಿಯ ಶಿಫಾರಸ್ಸುಗಳನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದ ಚಂದ್ರಶೇಖರ್ ಅದರ ಆಧಾರದ ಮೇಲೆ ಒಂದು ನಿರ್ಣಯವನ್ನು ಮಂಡಿಸಬೇಕೆಂದು ಕೇಳಿಕೊಳ್ಳಲಾಯಿತು. ನಿರ್ಣಯ ಕೆಲವು ತಿದ್ದುಪಡಿಗಳೊಂದಿಗೆ ಅಂಗೀಕಾರವಾಯಿತು.

(1) ಎಲ್ಲರಿಗೂ ಸ್ವೀಕಾರವಾಗಬಹುದಾದ್ದ ಪರಿಹಾರ ಕಂಡುಹಿಡಿಯುವ ಪ್ರಯತ್ನವನ್ನು ಮುಂದುವರಿಸಬೇಕು.

(2)ನ್ಯಾಯಾಲಯದ ತೀರ್ಪನ್ನು ತ್ವರಿತಗೊಳಿಸಬೇಕು ಹಾಗೂ ಅಂತಿಮ ತೀರ್ಪನ್ನು ಪ್ರತಿಯೊಬ್ಬರೂ ಗೌರವಿಸಬೇಕು.

(3) ಶಾಂತಿ ಮತ್ತು ಸೌಹಾರ್ದದ ವಾತಾವರಣ ಕಾದುಕೊಳ್ಳಲು ಪ್ರತಿಯೊಬ್ಬರೂ ಪ್ರಯತ್ನಿಸಬೇಕು.

ಇವು ಉಪಸಮಿತಿಯ ಶಿಫಾರಸಿನ ಹಾಗೂ ರಾಷ್ಟ್ರೀಯ ಸಮಗ್ರತಾ ಮಂಡಳಿಯ ನಿರ್ಣಯದ ಮುಖ್ಯ ಅಂಶ.

ಈ ಪ್ರಶ್ನೆಯ ಮೇಲೆ ಚರ್ಚೆಯೇ ಬಹಳ ಸಮಯ ತೆಗೆದುಕೊಂಡಿ. ಆದ್ದರಿಂದ ಸಭೆಯ ಅವಧಿಯನ್ನು ಎ... ಗಂಟೆ ವಿಸ್ತರಿಸಿದರೂ ಪಂಜಾಬ್ ವಿಷ... ಬಿಟ್ಟು ಅಜೆಂಡಾದ ಯಾವ ವಿಷ... ವನ್ನು ಚರ್ಚಿಸಲಾಗಲಿಲ್ಲ. ಆದ್ದರಿಂದ ತ್ರಿ... ರಾದ ಪರಿಸ್ಥಿತಿಯನ್ನು ಚರ್ಚಿಸಬೇಕೆ... ಸಿಪಿಐ(ಎಂ) ಸೂಚನೆ ಮಾತ್ರವಲ್ಲ ಕಾಶ್ಮಿ... , ಅಸ್ಸಾಂ, ಆಂಧ್ರಪ್ರದೇಶದ ಪರಿಸ್ಥಿತಿ ಕೂ... ಚರ್ಚೆಗೆ ಬರಲಿಲ್ಲ. ಪಂಜಾಬ್ ... ಸಿಪಿಐ(ಎಂ) ತನ್ನ ಅಭಿಪ್ರಾಯವನ್ನು ... ರುಚ್ಚರಿಸಿತು.

ರಾಮಜನ್ಮ ಭೂಮಿ-ಬಾಬ್ರಿ ಮ... ಪರಿಹಾರಕ್ಕಾಗಿ ಮಾತುಕತೆಗಳ ಪ್ರಕ್ರಿ... ಯನ್ನು ಮುಂದುವರೆಸಬೇಕೆಂಬ ರಾಷ್ಟ್ರೀ... ಸಮಗ್ರತಾ ಮಂಡಳಿಯ ಸರ್ವಸಮ... ನಿರ್ಣಯ ಈ ಸಭೆಯ ಪ್ರಮುಖ ಪ... ಣಾಮ. ಈ ನಿರ್ಣಯ ಈ ವಿವ... ಇತ್ಯರ್ಥ ಕಂಡು ಹುಡುಕುವ ಮಾತುಕತೆ... ಪ್ರಕ್ರಿಯೆಯಲ್ಲಿ ಬಿಜೆಪಿಯನ್ನು ಒಳ... ಳ್ಳಲು ನೆರವಾಗುತ್ತದೆ ಎಂಬ ಆಶಾಭಾ... ಯನ್ನು ಸಿಪಿಐ(ಎಂ) ಪ್ರಧಾನ ಕಾರ್ಯದ... ಇ.ಎಂ.ಎಸ್. ವ್ಯಕ್ತಪಡಿಸಿದ್ದಾರೆ.

'ಜಾತ್ಯಾತೀತತೆ, ಪ್ರಜಾಪ್ರಭುತ್ವ ರಕ್ಷಿಸಲು ರಾಷ್ಟ್ರೀಯ ಅಭಿಪ್ರಾಯ ರೂಪಿಸೋಣ

ಇದು ರಾಷ್ಟ್ರೀಯ ಸಮಗ್ರತಾ ಮಂಡಳಿಯ ಮದ್ರಾಸ್ ಸಭೆಗೆ ಸಿ.ಪಿ.ಐ(ಎಂ) ಸಲ್ಲಿಸಿದ ಟಿಪ್ಪಣಿಯ ತಿರುಳು

ಕಾಶ್ಮೀರ, ಪಂಜಾಬ್, ಅಸ್ಸಾಂ, ರಾಮಜನ್ಮ ಭೂಮಿ-ಬಾಬರಿ ಮಸೀದಿ, ಕೋಮುವಾದ ಹಾಗೂ ಜಾತ್ಯಾತೀತತೆ ಬಗ್ಗೆ ಪಕ್ಷದ ನಿಲುವನ್ನು ಈ ಟಿಪ್ಪಣಿ ವಿಶದಪಡಿಸಿತ್ತು.

ಕಾಶ್ಮೀರದಲ್ಲಿ ಪರಿಸ್ಥಿತಿ ಗಂಭೀರವಾಗಿದೆ. ಆದರೆ ಇನ್ನೂ ಅದನ್ನು ಉಳಿಸುವುದು ಅಸಾಧ್ಯವೇನಲ್ಲ. ಆದರೆ ಇದು ಸಾಧ್ಯವಾಗಬೇಕಾದರೆ ಜಾತ್ಯಾತೀತತೆಯ ನೀತಿಯನ್ನು ದೃಢವಾಗಿ ಪಾಲಿಸಬೇಕು. ಜಮಾತ್-ಎ-ಇಸ್ಲಾಮಿ ನೇತೃತ್ವದ ಮೂಲಭೂತವಾದಿಗಳ ಬಗ್ಗೆ ಕಠಿಣ ಕ್ರಮ ಕೈಗೊಳ್ಳಬೇಕು. ಆದರೆ ಜೆ.ಕೆ.ಎಲ್.ಎಫ್. ಮತ್ತು ಮುಸ್ಲಿಂ ಮೂಲಭೂತವಾದಿಗಳ ನಡುವೆ ಸ್ಪಷ್ಟ ವ್ಯತ್ಯಾಸ ಕಾಣಬೇಕು. ಜೆ.ಕೆ.ಎಲ್.ಎಫ್ ಬೆಂಬಲಿಗರಿಗೆ ಭಾರತೀಯ ಸಂವಿಧಾನದ ಚೌಕಟ್ಟಿನೊಳಗೆ ಅವರ ಸ್ವಂತಿಕೆಯನ್ನು ರಕ್ಷಿಸಲಾಗುವುದೆಂಬ ಭರವಸೆ ನೀಡುವ ಕಾಲವೀಗ ಬಂದಿದೆ ಎಂದು ಕಾಂ. ಸುರ್ಜೀತ್ ತಮ್ಮ ಟಿಪ್ಪಣಿಯಲ್ಲಿ ಹೇಳಿದ್ದರು.

ಪಂಜಾಬ್ ಪರಿಸ್ಥಿತಿ ಬಗ್ಗೆ ಹೇಳುತ್ತಾ ಇದು ಕಾಶ್ಮೀರಕ್ಕಿಂತ ಸಂಪೂರ್ಣ ಭಿನ್ನ, ಇಲ್ಲಿ ಉಗ್ರಗಾಮಿಗಳಿಗೆ 10 ಶೇಕಡಾ ಜನರ ಬೆಂಬಲವಿಲ್ಲ ಎಂಬ ಪ್ರಮುಖ ವ್ಯತ್ಯಾಸದತ್ತ ಗಮನಸೆಳೆಯುತ್ತಾ, ಈ ಸರಕಾರ ಅಧಿಕಾರಕ್ಕೆ ಬಂದಾಗ ಕೆಲವು ಕ್ರಮಗಳನ್ನು ಕೈಗೊಂಡಿತು, ಅದಕ್ಕೆ ಜನರಿಂದ ಒಳ್ಳೆಯ ಪ್ರತಿಕ್ರಿಯ ದೊರೆಯಿತು. ಆದರೆ ಅದನ್ನು ಮುಂದುವರೆಸಲಿಲ್ಲ ಎಂದು ಮತ್ತೆ ಹೇಳಿರುವ ಸಿಪಿಐ(ಎಂ) ಟಿಪ್ಪಣಿ 'ಆರು ತಿಂಗಳನ್ನು ಸುಮ್ಮನೆ ಕಳಕೊಂಡೆವು- ಸಾಮಾನ್ಯ ಪರಿಸ್ಥಿತಿ ನಿರ್ಮಿಸಿ ಚುನಾವಣೆ ನಡೆಸಬಹುದಾದಂತಹ ಪರಿಸ್ಥಿತಿ ನಿರ್ಮಿಸಲು ಪ್ರಯತ್ನಿಸಲಿಲ್ಲ' ಎಂದು ಅಭಿಪ್ರಾಯ ಪಟ್ಟಿತ್ತು. ಪಂಜಾಬಿನ ಬಹುಪಾಲು ಜನ ಪ್ರತ್ಯೇಕತಾವಾದ, ಭಯೋತ್ಪಾದಕತೆಯನ್ನು ವಿರೋಧಿಸುತ್ತಾರೆ. ಆದರೆ ಅವರು ಭಯದ ಮನೋದೆಸೆಯಲ್ಲಿದ್ದಾರೆ. ಅವರನ್ನು ಉಗ್ರಗಾಮಿಗಳ ಮರ್ಜಿಗೆ ಒಪ್ಪಿಸಬಾರದು. ಸರಕಾರ ವಾಸ್ತವತೆಯನ್ನು ಅರ್ಥಮಾಡಿಕೊಳ್ಳಬೇಕು, ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಬಾರದು ಎಂದು ಟಿಪ್ಪಣಿ ಹೇಳಿತ್ತು.

ಅಸ್ಸಾಂನ ಪರಿಸ್ಥಿತಿಯನ್ನು ಆರಾಮವಾಗಿ ಎದುರಿಸೋಣ ಎಂಬ ಮನೋಭಾವ ಸಲ್ಲ, ಜನರನ್ನು ಉಲ್ಬಾದಂತಹ ಪ್ರತ್ಯೇಕವಾದಿ ಚಟುವಟಿಕೆಗಳ ವಿರುದ್ಧ ಅಣಿನೆರಸಬೇಕು ಎಂದು ಕಾಂ. ಸುರ್ಜೀತ್ ತನ್ನ ಟಿಪ್ಪಣಿಯಲ್ಲಿ ಅಭಿಪ್ರಾಯ ಪಟ್ಟರು.

43 ವರ್ಷಗಳಿಂದಲೂ ಇನ್ನೂ ಉಳಿದಿರುವ ಬುಡಕಟ್ಟು ಸಮಸ್ಯೆಗಳ ಬಗ್ಗೆ ರಾಷ್ಟ್ರೀಯ ಸಮಗ್ರತಾ ಮಂಡಳಿ ಒಂದು ಸಮಿತಿ ನೇಮಿಸಬೇಕು, ಆಂಧ್ರಪ್ರದೇಶ, ಬಿಹಾರ, ಒರಿಸ್ಸಾ, ಮಧ್ಯಪ್ರದೇಶದಲ್ಲಿನ ಎಡ ಉಗ್ರಗಾಮಿಗಳ ಚಟುವಟಿಕೆಗಳನ್ನು ಎದುರಿಸಬೇಕಾದರೆ ಭೂಸುಧಾರಣೆ ಹಾಗೂ ಕೃಷಿ ಕಾರ್ಮಿಕರ ಕೂಲಿಯಪ್ರಶ್ನೆಗಳನ್ನು ತಕ್ಷಣ ಎತ್ತಿಕೊಳ್ಳಬೇಕು ಎಂದೂ ಟಿಪ್ಪಣಿ ಸಲಹೆ ನೀಡಿತ್ತು.

ರಾಮಜನ್ಮಭೂಮಿ-ಬಾಬ್ರಿ ಮಸೀದಿಯ ಪ್ರಶ್ನೆ ಕುರಿತು ಹೇಳುತ್ತಾ ಇದನ್ನು ಕೆಲವು ಮುಖಂಡರು ಶ್ರೀರಾಮದೇವರ ಮತ್ತು ಬಾಬರನೆಂಬ ದುರುಳನ ಪ್ರಶ್ನೆಎಂಬಂತೆ ಚಿತ್ರಿಸಲು ಪ್ರಯತ್ನಿಸುತ್ತಿದ್ದಾರೆ ಎಂಬ ಬಗ್ಗೆ ಖೇದ ವ್ಯಕ್ತ ಪಡಿಸುತ್ತಾ ರಾಷ್ಟ್ರೀಯ ಸಮಗ್ರತಾ ಮಂಡಳಿ ಪರಿಸ್ಥಿತಿಯನ್ನು ಉಲ್ಬಣಗೊಳಿಸದಂತೆ ತನ್ನ ಪ್ರಭಾವ ಬೀರಬೇಕೆಂದು ಸಿಪಿಐ(ಎಂ) ಟಿಪ್ಪಣಿ ಒತ್ತಾಯಿಸಿತ್ತು.

> **ಇಂತಹ ಪ್ರಶ್ನೆಗಳನ್ನು ಪಕ್ಷದ ಪ್ರಶ್ನೆಗಳಾಗಿ ಮಾಡದೆ ಇವನ್ನು ಎದು... ಸಲು ಸರ್ವಸಮ್ಮತಿಗೆ ಬರಲು ಪ್ರಯತ್ನಿಸಬೇಕು. ಏಕೆಂದರೆ ಅದು ಇ... ದೇಶದ, ಅದರ ಜಾತ್ಯಾತೀತ ಪ್ರಜಾಸತ್ತಾತ್ಮಕ ಸ್ವರೂಪದ ಭವಿಷ್ಯ ಪ್ರಶ್ನೆ ಕೇವಲ ಪಕ್ಷದ ದೃಷ್ಟಿಯಿಂ... ಇವನ್ನು ಬಳಸುವುದು ವಿನಾಶಕಾ... ಇದರಿಂದ ಯಾರಿಗೂ ಲಾಭವಿಲ್ಲ ಎಂದು ಸಿಪಿಐ(ಎಂ) ಆರಂಭದಿಂದಲೇ ಹೇಳುತ್ತಾ ಬಂದಿದೆ ಎಂದು ಸಿಪಿಐ(ಎಂ) ಪರವಾಗಿ ಮಂಡಿಸಿದ ಟಿಪ್ಪಣಿಯಲ್ಲಿ ಕಾಂ. ಹರಿಕಿಶನ್ ಸಿಂಗ್ ಸುರ್ಜೀತ್ ಹೇಳಿದ್ದರು.**

ವಿವಿಧ ಭಾಷೆ, ಧರ್ಮ, ಆಚಾರ-ವಿಚಾರಗಳ ಭಾರತದ ಐಕ್ಯತೆಯನ್ನು ಜಾತ್ಯಾತೀತತೆಯ ಆಧಾರದ ಮೇಲಷ್ಟೆ ರಕ್ಷಿಸಲು ಸಾಧ್ಯ ಎನ್ನುತ್ತಾ ಈಗ ಕೆಲವರು ಜಾತ್ಯಾತೀತತೆಯೆಂದರೇನು ಎಂದು ಕೇಳುವ ಮಟ್ಟಕ್ಕೂ ಹೋಗಿದ್ದಾರೆ ಎಂದು ಖೇದ ವ್ಯಕ್ತ ಪಡಿಸಿ, ಜಾತ್ಯಾತೀತತೆಯೆಂದರೆ ಧರ್ಮವನ್ನು ಪ್ರಭುತ್ವದಿಂದ, ರಾಜಕೀಯದಿಂದ ಬೇರ್ಪಡಿಸುವುದು ಎಂಬುದನ್ನು ಅಂತಹವರಿಗೆ ಮತ್ತೆ ಸ್ಪಷ್ಟಪಡಿಸಬೇಕು ಎಂದು ಸಿಪಿಐ(ಎಂ) ಟಿಪ್ಪಣಿಹೇಳಿತ್ತು.

ರಾಮ ಜನ್ಮ ಭೂಮಿ—ಬಾಬ್ರಿ ಮಸೀದಿ –ನಿಜ ಸಮಸ್ಯೆಯೇನು?

ರಾಮಜನ್ಮಭೂಮಿ- ಬಾಬ್ರಿ ಮಸೀದಿ ಪ್ರಶ್ನೆ ಬಹುಸಂಖ್ಯಾತರಾದ ಹಿಂದೂಗಳು ಹಾಗೂ ಅಲ್ಪ ಸಂಖ್ಯಾತರಾದ ಮುಸ್ಲೀಮರನಡುವೆ ವಿವಾದದ ಪ್ರಶ್ನೆಯಾಗಿಬಿಟ್ಟಿದೆ. ಎರಡೂ ಕೋಮುಗಳ ಧಾರ್ಮಿಕ ಭಾವನೆಗಳನ್ನು ತಟ್ಟುವಂತಹ ಪ್ರಶ್ನೆಯಿದು. ಕೆಲವು ಮುಖಂಡರು ಇದು ಶ್ರೀರಾಮ ದೇವರು ಹಾಗೂ ಬಾಬರನೆಂಬ ರಾಕ್ಷಸನ ನಡುವಿನ ಪ್ರಶ್ನೆ ಎಂಬಂತೆ ಚಿತ್ರಿಸಲು ಪ್ರಯತ್ನಿಸುತ್ತಿದ್ದಾರೆ. ಇದು ನಿಜ ಪ್ರಶ್ನೆಯನ್ನು ಮರೆಮಾಚುವ ಪ್ರಯತ್ನವಲ್ಲದೆ ಮತ್ತೇನೂ ಅಲ್ಲ. ಇಲ್ಲಿರುವ ಪ್ರಶ್ನೆ-500 ವರ್ಷಗಳಿಂದ ಅಲ್ಲೊಂದು ಮಸೀದಿಯಿದೆ : ಯಾರು ಅದನ್ನು ಕಟ್ಟಿದರೋ ಗೊತ್ತಿಲ್ಲ; ಆಮಸೀದಿಯನ್ನು ಕೆಡವಿ ದೇವಸ್ಥಾನ ಕಟ್ಟಬೇಕೆನ್ನಲಾಗುತ್ತಿದೆ. ಶ್ರೀ ರಾಮನ ಸ್ಮರಣೆಗ ದೇವಸ್ಥಾನ ಕಟ್ಟುವುದನ್ನು ದೇಶದಲ್ಲಿ ಯಾರೂ ವಿರೋಧಿಸಲು ಸಾಧ್ಯವಿಲ್ಲ. ಆದರೆ ವಿರೋಧ ಬರುವುದು ಮಸೀದಿಯನ್ನು ಕೆಡವಿ ಅದನ್ನು ಕಟ್ಟಬೇಕು ಎಂಬ ನಿಲುವು ತಳೆದಾಗ. ವಾಸ್ತವ ಸಂಗತಿಗಳನ್ನು ನಾವು ಗಮನದಲ್ಲಿಡಬೇಕು. ಈ ಮೂಲಕ ಅಥ ವ ಒಂದು ನ್ಯಾಯಾಲಯದ ತೀರ್ಪಿನ ಮೂಲಕ ಮಾತ್ರ ಸಾಧ್ಯ . ದೇಶದ ಹೆಚ್ಚಿನ ರಾಜಕೀಯ ಪಕ್ಷಗಳು ಇದೇ ನಿಲುವು ತಳೆದಿವೆ. ಸರಕಾರ ಈ ದಿಶೆಯಲ್ಲಿ ಒಂದು ಪರಿಹಾರ ಕಂಡುಹಿಡಿಯಲು ಸರ್ವ ಪ್ರಯತ್ನ ನಡೆಸುತ್ತಿದೆ. ಮಂಡಳಿ ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣ-

ಸಮಸ್ಯೆಗೆ ಪರಿಹಾರ ಮಾತುಕತೆ ಮೂಲಕ ಎರಡೂ ಕೋಮುಗಳ ಭಾವನೆಗಳನ್ನು ತೃಪ್ತಿಪಡಿಸುವ, ಒಂದು ಇತ್ಯರ್ಥದ ಗೊಳಿಸುವುದನ್ನು ನಿಲ್ಲಿಸಲು ತನ್ನ ಪ್ರಭಾವ ಬೀರಬೇಕು. ಅರಿಸಿದ ಜಾಗದಲ್ಲೇ ರಾಮ ದೇವಸ್ಥಾನ ಕಟ್ಟುತ್ತೇವೆ ಎನ್ನುವವರನ್ನು ಅವರಾಗಲೇ ನಿರ್ಧರಿಸಿದಂತೆ ಅಕ್ಟೋಬರ್ 30 ರಂದು ಕೆಲಸ ಆರಂಭಿಸಬೇಡಿ ಎಂದು ಒತ್ತಾಯಿಸಬೇಕು. ನಮ್ಮ ದೇಶದ ಶತ್ರುಗಳು ಭಾರತವನ್ನು ಅಸ್ಥಿರಗೊಳಿಸಲು ಉತ್ಸುಕತೆಯಿಂದ ಕಾದಿದ್ದಾರೆ.

ಅದ್ವಾನಿ ಕನಸನ್ನು ಮೊಳಕೆಯಲ್ಲೇ ಚಿವುಟಬೇಕು.........

ಅದ್ವಾನಿಯವರ ಅನರ್ಥಕಾರಿ ರಾಮರಥ ಯಾತ್ರೆಯ ಆರಂಭ ಮತ್ತು ಮಂಡಲ್ ಆಯೋಗದ ಶಿಫಾರಸ್ಸುಗಳ ಜಾರಿಯ ವಿರುದ್ಧದ ಚಳವಳಿ ದೇಶದ ರಾಜಕೀಯ ರಂಗದಲ್ಲಿನ ಚಟುವಟಿಕೆಗಳಲ್ಲಿ ಸೇರಿಕೊಂಡಿದೆ. ಮಂಡಲ್ ವಿರುದ್ಧ ಅಕ್ಟೋಬರ್ 2 ರಂದು ದಿಲ್ಲಿಯಲ್ಲಿ ರ್‍ಯಾಲಿ. ಶಿಫಾರಸ್ಸುಗಳ ಜಾರಿಗೆ ಇನ್ನಷ್ಟು ಕ್ರಮ ಕೈಗೊಳ್ಳದಂತೆ ಸುಪ್ರಿಂ ಕೋರ್ಟ್ ತಡೆ. ದೇವೀಲಾಲ್ ರಾಜೀನಾಮೆ. ಸಂಸತ್ತಿನ ಸಂಕ್ಷಿಪ್ತಾವಧಿ ಅಧಿವೇಶನ- ಅದರಲ್ಲಿ ಪಂಜಾಬ್ ಕುರಿತ ಮಸೂದೆ ಸೋತಿರುವುದು ಕೆಲವು ಮುಖ್ಯ ಅಂಶಗಳು.

ಭಾರತೀಯ ಜನತಾ ಪಕ್ಷದ (ಬಿ.ಜೆ.ಪಿ.) ಅಧ್ಯಕ್ಷ ಎಲ್.ಕೆ.ಅದ್ವಾನಿ ಇತಿಹಾಸದ ಕಾಲಚಕ್ರವನ್ನು ಹಿಂದೆ ತಿರುಗಿಸಲು ಪ್ರಾಚೀನ ಮಾನವನ ಅತ್ಯುತ್ಕೃಷ್ಟ ಶೋಧನೆಯಾದ ಗಾಲಿಯನ್ನೇ ಎನ್ನುವುದು ಮಾತ್ರ ವಿಪರ್ಯಾಸಕರ! ಅವರು ಅಯೋಧ್ಯೆಯ ಶ್ರೀ ರಾಮ ಮಂದಿರ ನಿರ್ಮಾಣ ಪೂರ್ವ 'ಜನ ಜಾಗೃತಿಗಾಗಿ' ರಥಯಾತ್ರೆಯೊಂದನ್ನು ಕೈಗೊಂಡಿದ್ದಾರೆ. ಗುಜರಾತ್ ರಾಜ್ಯದ ಸೋಮನಾಥ ಪುರದಿಂದ ಅವರು ಸೆಪ್ಟೆಂಬರ್ 25 ರಂದು ಅದನ್ನು ಆರಂಭಿಸಿದ್ದಾರೆ. 10,000ಕಿ.ಮಿ. ಕ್ರಮಿಸಿ ಅಕ್ಟೋಬರ್ 29 ಕ್ಕೆ ಅಂದರೆ ಯೋಜಿತ 'ಕರಸೇವೆ'ಗೆ ಒಂದು ದಿನ ಮುನ್ನ ಅಯೋಧ್ಯೆ ಮುಟ್ಟುವುದು ಅವರ ಗುರಿ. ಶೌಚಾಲಯದಿಂದ ಹಿಡಿದು ಎಲ್ಲಾ ಸೌಲಭ್ಯಗಳು ಈ ರಥದಲ್ಲಿ ಇದೆ. ಆಧುನಿಕ ವಿಜ್ಞಾನ ತಂತ್ರಜ್ಞಾನದ ಪ್ರಗತಿಯನ್ನು ಸಮಾಜದ ವಿಗತಿಗೆ ಹೇಗೆ ಬಳಸಲಾಗುತ್ತದೆನ್ನುವುದಕ್ಕೆ ಇದೊಂದು ಉದಾಹರಣೆ. ಅದಿರಲಿ ಅದ್ವಾನಿಯವರ ಈ ರಥಯಾತ್ರೆ ಮಾತ್ರ ಸರ್ವಸಾಮಾನ್ಯವಾಗಿ ಎಲ್ಲಾ ಕಡೆಗಳಿಂದ ತೀವ್ರ ಟೀಕೆಗೆ ಒಳಗಾಗಿದೆ. ಸ್ವತಃ ಕೆಲವು ಹಿಂದೂ ಧಾರ್ಮಿಕ ಮುಖಂಡರೇ ಅದನ್ನು ಟೀಕಿಸಿದ್ದಾರೆ. (ಉದಾಹರಣೆಗೆ ಪುರಿಶಂಕರಾಚಾರ್ಯರ ಟೀಕೆಯನ್ನು ಬಾಕ್ಸ್‌ನಲ್ಲಿ ನೋಡಿ) ರಾಮಜನ್ಮಭೂಮಿ - ಬಾಬರಿ ಮಸೀದಿ ವಿವಾದ ನ್ಯಾಯಾಲಯದಲ್ಲಿರುವಾಗ, ಅದರ ತೀರ್ಪಿಗೆ ಕಾಯದೆ ಈ ರೀತಿಯ ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಪ್ರಚೋದನಕಾರಿ ಕ್ರಮಕ್ಕೆ ಬಿ.ಜೆ.ಪಿ. ತೊಡಗಿರುವುದು ಅದರ ಹತಾಶೆಯ ಸಂಕೇತವಾಗಿದೆ. ಸೋಮನಾಥಪುರದಲ್ಲಿ ಸೆ. 25 ರಂದು ಮೊಳಗಿದ ಕಹಳೆ ಮುಂದಿನ ಚುನಾವಣೆಯಲ್ಲಿ ದೆಹಲಿ ದರ್ಬಾರು ತನ್ನ ವಶವಾಗುವುದರ ಮಂಗಳಗೀತೆ ಎಂದು ಅದ್ವಾನಿ, ಬಿ.ಜೆ.ಪಿ. ಭಾವಿಸಿರಬಹುದು. ಆದರೆ ಅದು ಅದರ ಚರಮಗೀತೆಯನ್ನಾಗಿ ಮಾಡುವ ಸವಾಲನ್ನು ಜಾತ್ಯತೀತ, ಪ್ರಜಾಸತ್ತಾತ್ಮಕ ಶಕ್ತಿಗಳು ಸ್ವೀಕರಿಸಬೇಕು. ಜನ್ಮ ಭೂಮಿ -ಮಸೀದಿ ವಿವಾದದ ಕೇಂದ್ರ ಬಿಂದು ಆಗಿರುವ ಉತ್ತರ ಪ್ರದೇಶದಲ್ಲಿ ಅದರ ಪ್ರಯೋಗ ಈಗಾಗಲೇ ಆರಂಭವಾಗಿರುವುದನ್ನು ನೀವೆಲ್ಲಾ ಓದಿರುವಿರಿ. (ಐಕ್ಯರಂಗ 23ಸೆ) ಅದ್ವಾನಿಯವರ ರಥ ಕರ್ನಾಟಕವನ್ನು ಹಾದುಹೋಗುವ ಕಾರ್ಯಕ್ರಮವಿದೆ.

ಒಟ್ಟಿನಲ್ಲಿ, ಅದ್ವಾನಿ ರಥಯಾತ್ರೆಯ ಆರಂಭದ ಮೂಲಕ ಭಾರತದಲ್ಲಿ ಧರ್ಮ ಮತ್ತು ರಾಜಕೀಯ ಮಿಶ್ರಣದ ಇನ್ನೊಂದು ಹೇಯ ಅಧ್ಯಾಯ ಸೇರಿಕೊಂಡಂತಾಗಿದೆ.

★ ★ ★ ★

ಆತ್ಮಾಹುತಿಗಳು

ಮಂಡಲ್ ಆಯೋಗದ ಶಿಫಾರಸ್ಸು ಜಾರಿಯ ಹಿನ್ನೆಲೆಯಲ್ಲಿ ಹಾದಿ ತಪ್ಪಿದ ಯುವಜನರು ಭಾವೋದ್ವೇಗದಿಂದ ಆತ್ಮಾಹುತಿಯಂಥ 'ಆತ್ಮಾದರ್ಶ'ದ ಅವಿವೇಕದ ಕೃತ್ಯಗಳಿಗೆ ಬಳಸುತ್ತಿರುವ ಬಗ್ಗೆ ಹಿಂದಿನ ಸಂಚಿಕೆಯಲ್ಲಿ ಬರೆಯಲಾಗಿತ್ತು. ಅದು ಮುದ್ರಣಕ್ಕೆ ಹೋಗುವ ವೇಳೆ ಒಬ್ಬ ವಿದ್ಯಾರ್ಥಿಯಷ್ಟೇ ಸತ್ತ ವರದಿ ಬಂದಿತ್ತು. ಆದರೆ ಆ ನಂತರದ ಅವಧಿಯಲ್ಲಿ, ಮುಖ್ಯವಾಗಿ ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಅನೇಕ ಯುವಕರು ಮತ್ತು ಯುವತಿಯರು ಬೆಂಕಿ ಹಚ್ಚಿಕೊಂಡು ಮತ್ತು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ವರದಿಗಳು ಪ್ರಕಟವಾಗಿವೆ.

ಕರ್ನಾಟಕದಲ್ಲಿ ಕೂಡ ಇಂಥ ಅಹಿತಕರವಾದ ಒಂದು ಘಟನೆ ನಡೆದಿದೆ. ಧಾರವಾಡ ಜೆ.ಎಸ್.ಎಸ್. ಕಾಲೇಜಿನ ಪಿ.ಯು.ಸಿ. ವಿದ್ಯಾರ್ಥಿನಿ ಅನ್ನಪೂರ್ಣ ಶಿರಕೋಳ್ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ಒಂದು ಕಡೆ ಯುವತಿಯೊಬ್ಬಳು ಆತ್ಮಾಹುತಿಗೆ ಪ್ರಯತ್ನ ನಡೆಸಿ ಆಸ್ಪತ್ರೆಗೆ ದಾಖಲಾಗಿದ್ದಾಳೆ. 'ನನ್ನ ಉದ್ಯೋಗದ ಎಲ್ಲಾ ಭರವಸೆಗಳು ಕಮರಿಹೋಗಿದೆ. ಎಂದು ಆಕೆ ಪೋಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದಾಳೆ. ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯ ಒದಗಿಸಿಕೊಡಬಹುದಾದಂಥ ಸಣ್ಣ ಪ್ರಯತ್ನವಾದ ಮೀಸಲಾತಿ ಬಗ್ಗೆ ವಿರೋಧಿಗಳು ಎಂಥ ಭಾವನೆಗಳನ್ನು ಹುಟ್ಟಿಸಿದ್ದಾರೆನ್ನುವ ಬಗೆಗೆ ಇದೊಂದು ಪುಟ್ಟ ಉದಾಹರಣೆ. ಸರ್ವರಿಗೂ ಶಿಕ್ಷಣ - ಸರ್ವರಿಗೂ ಉದ್ಯೋಗ ಒದಗಿಸುವ ಬೇಡಿಕೆ ಆಧಾರದಲ್ಲಿ ಯುವಜನರನ್ನು ವ್ಯಾಪಕ ಪ್ರಮಾಣದಲ್ಲಿ ಸಂಘಟಿಸಬೇಕಾಗಿರುವುದು ತುಂಬಾ ಅವಶ್ಯವಾಗಿದೆ.

ದೊಣ್ಣೆ, ಸರಳು, ಹಾಕಿ ಸ್ಟಿಕ್..........

ಮಂಡಲ್ ಆಯೋಗದ ಶಿಫಾರಸುಗಳ ಜಾರಿಯನ್ನು ವಿರೋಧಿಸಲು ರಾಜಧಾನಿ ಹೊಸದಿಲ್ಲಿಯಲ್ಲಿ ಮಹಾತ್ಮಾಗಾಂಧಿ ಹಾಗೂ ಲಾಲ್ ಬಹಾದೂರ್ ಶಾಸ್ತ್ರಿ ಅವರ ಜನ್ಮದಿನವಾದ ಅಕ್ಟೋಬರ್ ಎರಡರಂದು ದೊಡ್ಡ ರ್‍ಯಾಲಿಯೊಂದು ನಡೆಯಿತು. ಈ ರ್‍ಯಾಲಿಯಲ್ಲಿ ಭಾಗವಹಿಸಿದವರು ಭಾರಿ ದೊಂಬಿ, ಲೂಟಿಯಲ್ಲಿ ತೊಡಗಿದ್ದರಿಂದ ಪೋಲೀಸರು ನಡೆಸಿದ ಗೋಲಿಬಾರ್‌ನಲ್ಲಿ ಇಬ್ಬರು ಮೃತಪಟ್ಟಿರುವುದು ಈ ಲೇಖನ ಬರೆಯುವವರೆಗೆ ಬಂದ ವರದಿಗಳಿಂದ ತಿಳಿದು ಬಂದಿದೆ. ಅಲ್ಲದೆ ಘರ್ಷಣೆಗಳಲ್ಲಿ, ಒಬ್ಬ ಪೋಲೀಸ್ ಕೂಡ ಮೃತರಾಗಿದ್ದಾರೆ.

ಈ ಮೀಸಲಾತಿ ವಿರೋಧಿ ಚಳುವಳಿಗಾರರ ನಡುವೆ ದೊಣ್ಣೆ, ಸರಳುಗಳು, ಹಾಕಿ ಸ್ಟಿಕ್ ಮುಂತಾಗಿ ಮಾರಕ ಆಯುಧಗಳನ್ನು ಹಿಡಿದಿದ್ದ ಸಮಾಜವಿರೋಧಿ ಶಕ್ತಿಗಳು ಇದ್ದದ್ದು ಸ್ಪಷ್ಟವಾಗಿ ಕಂಡು ಬರುತ್ತಿತ್ತು. ಮಂಡಲ್ ಆಯೋಗ ವಿರೋಧಿ ಸಮಿತಿ ಏರ್ಪಡಿಸಿದ್ದ ರ್‍ಯಾಲಿಗೆ ಮಹೇಂದ್ರಸಿಂಗ್ ಟಿಕಾಯತ್ ನಾಯಕತ್ವದ ಭಾರತೀಯ ಕಿಸಾನ್ ಯೂನಿಯನ್ ಪ್ರಮುಖ ಬೆಂಬಲ ನೀಡಿತ್ತು

'ಇಂತ ಕೆಟ್ಟ ಗುಂಪನ್ನು ನಾನೆಂದೂ ಕಂಡಿರಲಿಲ್ಲ' ಎಂದು ಹೊಸದಿಲ್ಲಿ ಪೋಲೀಸ್ ಜಿಲ್ಲಾ ಮುಖ್ಯಸ್ಥರಾದ ಶ್ರೀಮತಿ ಕನ್ವಲ್‌ಜಿತ್ ದೇವಲ್ ಹೇಳಿದ್ದಾರೆ.

ಈ ರ್‍ಯಾಲಿ ನಡೆಯುವ ಒಂದು ದಿನ ಮುಂಚೆಯಷ್ಟೆ (ಅಕ್ಟೋಬರ್1), ಮಂಡಲ್ ಆಯೋಗದ ಶಿಫಾರಸು ಜಾರಿಗೆ ಇನ್ನಾವುದೇ ಕ್ರಮ ಕೈಗೊಳ್ಳಬಾರದೆಂದು ಸುಪ್ರೀಂಕೋರ್ಟ್ ತೀರ್ಪು ನೀಡಿತ್ತು. ಹಾಗಿದ್ದಾಗ್ಯೂ ವಿರೋಧಿಗಳು ಈ ರೀತಿ ದುಷ್ಕೃತ್ಯಗಳಲ್ಲಿ ತೊಡಗಿರುವುದು ಅದರ ಹಿಂದಿನ ಶಕ್ತಿಗಳ ಬಣ್ಣವನ್ನು ಬಯಲು ಮಾಡಿದೆ. ನ್ಯಾ/ ರಂಗನಾಥ ಮಿಶ್ರಾ ನೇತೃತ್ವದ ಐವರು ನ್ಯಾಯಾಧೀಶರ ನ್ಯಾಯಪೀಠ ಮೀಸಲಾತಿ ಆಜ್ಞೆ ಜಾರಿಗೆ ತಡೆ ನೀಡಿದೆ. ಆದರೆ ಜಾತಿಗಳನ್ನು ಗುರುತಿಸುವ ಪ್ರಕ್ರಿಯೆ ಮುಂದುವರಿಸಲು ಸರಕಾರಕ್ಕೆ ಅದು ಅನುಮತಿ ಕೊಟ್ಟಿತು. ಮಂಡಲ್ ಆಯೋಗದ ವರದಿ ಅನುಷ್ಠಾನ ನಿರ್ಣಯವನ್ನು ಪ್ರಶ್ನಿಸಿದ ಮುಖ್ಯ ಅರ್ಜಿಯ ವಿಚಾರಣೆಯನ್ನು ನವೆಂಬರ್ 6 ರ ಬದಲು ಅಕ್ಟೋಬರ್ 25 ರಂದೇ ಕೈಗೆತ್ತಿಕೊಳ್ಳಲು ಕೋರ್ಟ್ ಆದೇಶ ನೀಡಿತು.

ದೇಶದೊಳಗೆ

ದೇವೀಲಾಲ್ ರಾಜಿನಾಮೆ

ಈ ಮಧ್ಯೆ ಮಂಡಲ್ ವರದಿಯನ್ನು 'ಅನುಷ್ಠಾನಗೊಳಿಸಿದ ರೀತಿ" ಪ್ರತಿಭಟಿಸಿ ಮಾಜಿ ಉಪಪ್ರಧಾನಿ ದೇವೀಲಾಲರು ಲೋಕಸಭಾ ಸ್ಥಾನಕ್ಕೆ ಸೆಪ್ಟೆಂಬರ್ 30 ರಂದು ರಾಜಿನಾಮೆ ಸಲ್ಲಿಸಿದರು. ಅಂದು ನಡೆಯುತ್ತಿದ್ದ ರಾಷ್ಟ್ರೀಯರಂಗದ ಸಂಸದೀಯ ಪಕ್ಷದ ಸಭೆಯಲ್ಲಿ ಅವರು ರಾಜಿನಾಮೆ ಪತ್ರವನ್ನು ಪ್ರಧಾನಿ ವಿ.ಪಿ.ಸಿಂಗ್‌ರಿಗೆ ಒಪ್ಪಿಸಿದರು.

ರಾಷ್ಟ್ರೀಯ ರಂಗ ಸರಕಾರ ಎಲ್ಲ ವಿಚಾರಗಳಲ್ಲೂ ವಿಫಲವಾಗಿದೆ ಮತ್ತು ರಾಷ್ಟ್ರವನ್ನು ಜಾತೀಯ ಸಮರದತ್ತ ಕೊಂಡೊಯ್ಯುತ್ತಿದೆ ಎಂದು ಆಪಾದಿಸಿ ಜನತಾದಳದ ಕೆಲವು ಸಂಸತ್ ಸದಸ್ಯರು ಪ್ರಧಾನಿ ವಿ.ಪಿ.ರಾಜಿನಾಮೆಗೆ ಒತ್ತಾಯಿಸುವ ಪ್ರಚಾರವೊಂದನ್ನು ಕೈಗೊಂಡಿದ್ದಾರೆ.

ಅಂದರೆ, ಸರಕಾರಕ್ಕೆ ಇನ್ನೊಂದು ತಲೆನೋವು ಆರಂಭವಾಗಿದೆ. ದೇವೀಲಾಲರ ರಾಜಿನಾಮೆ, ದಳ ಸಾಂಸದಿಕರ ಈ ಚಟುವಟಿಕೆಗಳಿಂದ ಮತ್ತೆ ಉಂಟಾಗುವ ಬಿಕ್ಕಟ್ಟನ್ನು ರಾಷ್ಟ್ರೀಯರಂಗ ನಿವಾರಿಸಿಕೊಂಡು ಬಕಪಕ್ಷಿಯಂತೆ ಕಾದು ಕುಳಿತಿರುವ ಕಾಂಗ್ರೆಸ್(ಐ) ನಿರೀಕ್ಷೆಯನ್ನು. ಪುನ್ನಾರವನ್ನು ವಿಫಲಗೊಳಿಸಬೇಕಾಗಿದೆ.

ಕಾಂಗ್ರೆ ಆಟಃ ಪಂಜಾಬ್ ಮಸೂದೆಗೆ ಸೋಲು

ಪಂಜಾಬ್‌ನಲ್ಲಿ ರಾಷ್ಟ್ರಪತಿ ಆಡಳಿತದ ಪ್ರಸಕ್ತ ಅವಧಿ ನವೆಂಬರ್‌ನಲ್ಲಿ ಮುಗಿಯಲಿದೆ. ಆದರೆ ಅದು ಮುಗಿದಾಕ್ಷಣ ಚುನಾವಣೆಗಳನ್ನು ನಡೆಸಲು ಬೇಕಾದಂಥ ವಾತಾವರಣ ಅಲ್ಲಿನ್ನೂ ಸೃಷ್ಟಿಯಾಗಿಲ್ಲ. ಈ ಹಿನ್ನೆಲೆಯಲ್ಲಿ ರಾಷ್ಟ್ರಪತಿ ಆಡಳಿತ ಮುಂದುವರಿಸುವುದು ಅನಿವಾರ್ಯ. ಈಗಾಗಲೇ ಹಲವು ಬಾರಿ ವಿಸ್ತರಿಸಿರುವುದರಿಂದ ಮಾಮೂಲಿ ಆಜ್ಞೆ ಯಿಂದ ಆ ಕ್ರಮವನ್ನು ಕೈಗೊಳ್ಳಲು ಬರುವುದಿಲ್ಲ. ಅದಕ್ಕೆ ಸಂವಿಧಾನ ತಿದ್ದುಪಡಿಯೇ ಉಳಿದಿರುವ ಮಾರ್ಗ.

ಅದಕ್ಕಾಗಿ ಸಂಸತ್ತಿನ ವಿಶೇಷ ಸಂಕ್ಷಿಪ್ತ ಅಧಿವೇಶನ ಅಕ್ಟೋಬರ್ ಒಂದ ರಂದು ಆರಂಭವಾಯಿತು.(ಇದನ್ನು ಮುಂಗಾರು ಅಧಿವೇಶನದ ಮುಂದುವರಿದ ಭಾಗವೆಂದು ಪರಿಗಣಿಸಲಾಗಿದೆ)

ಪಂಜಾಬ್‌ನಲ್ಲಿ ರಾಷ್ಟ್ರಪತಿ ಆಡಳಿತ ಮುಂದುವರಿಸುವುದಕ್ಕೆ ಸಂಬಂಧಿಸಿದ ಸಂವಿಧಾನ ತಿದ್ದುಪಡಿ ಪರಿಶೀಲನಾ ಹಂತದಲ್ಲಿಯೇ ಮತಕ್ಕೆ ಹಾಕಿದಾಗ ಅದು ಬಹುಮತ ಸಿಗದೆ ಬಿದ್ದು ಹೋಯಿತು. ಪರಿಶೀಲನಾ ಹಂತದಲ್ಲಿ ಸದಸ್ಯರ ಬಲದ ಅರ್ಧದಷ್ಟು ಬೆಂಬಲ (ಅಂದರೆ ಸರಳ ಬಹುಮತ) ಬೇಕಾಗುತ್ತದೆ. ಅಂದರೆ 263 ಸದಸ್ಯರ ಬೆಂಬಲ ಬೇಕಾಗಿತ್ತು. ಆದರೆ ಕೇವಲ 249 ಸದಸ್ಯರು ಪರವಾಗಿಯೂ 3 ಮಂದಿ ವಿರೋಧವಾಗಿಯೂ ಮತ ಚಲಾಯಿಸಿದರು.

ಕಾಂಗ್ರೆಸ್ (ಐ) ನವರು ತಮ್ಮ ಮೊದಲಿನ ಧೋರಣೆಯಿಂದ ಹಿಂದೆ ಸರಿದು ಸುಮ್ಮನೆ ಕೂತಿದ್ದರಿಂದ ಮಸೂದೆ ಸೋಲುವಂತಾಯಿತು. ಸರಳ ಬಹುಮತ ಸಾಧಿಸುವುದು ತನ್ನ ಕೆಲಸವಲ್ಲ. ಮಸೂದೆ ಪಾಸಾಗಲು ಬೇಕಾಗುವ ಸ್ಪಷ್ಟ ಮೂರನೇ ಎರಡು ಬಹುಮತ ಸಾಧಿತವಾಗಲು ಸಹಕರಿಸುವುದೆಂದು ಕಾಂಗ್ರೆ ನಾಯಕರು ಹೇಳಿದರು.

ಏನೇ ಇರಲಿ. ಪಂಜಾಬ್‌ನಂಥ ಸೂಕ್ಷ್ಮ ಪರಿಸ್ಥಿತಿಯ ವಿಚಾರದಲ್ಲಿ ಕಾಂಗ್ರೆಸ್(ಐ) ಪಕ್ಷ ಜನತಾದಳ ಸದಸ್ಯರು ಸದನದಲ್ಲಿ ಆಕ್ರೋಶ ವ್ಯಕ್ತಪಡಿಸಿರುವಂತೆ 'ದ್ರೋಹ ಬಗೆದಿದ್ದಾರೆ. ಮಸೂದೆ ಅಂಗೀಕಾರವಾಗುವಂತೆ ಮತ್ತೆ ಪ್ರಯತ್ನ ನಡೆದಿದೆ.

'ಸಾಕ್ಷರತಾ ಆಂದೋಲನ- ದಲ್ಲಿ ಪಾಲ್ಗೊಳ್ಳಿ'

ಎಸ್‌ಎಫ್‌ಐ ಕುಂದಾಪುರ ತಾಲೂಕು ಸಮಿತಿ ಆಗಸ್ಟ್ 18ರಂದು ತಾಲೂಕು ಮಟ್ಟದ ಶಿಕ್ಷಣ ಸಮಾವೇಶವೊಂದನ್ನು ಏರ್ಪಡಿಸಿತ್ತು. ಅಸಮಾನತೆಯ ಸಮಾಜವ್ಯವಸ್ಥೆಯಲ್ಲಿ ಶಿಕ್ಷಣ ಕೂಡಾ ವಿದ್ಯಾರ್ಥಿಗಳಿಗೆ ಅಸಮಾನವಾಗಿ ದೊರಕುತ್ತಿದೆ ಎಂದು ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಕಾಂ. ರಾಜೇಂದ್ರ ಹೇಳಿದರು. ಸಮಾಜ ಶಿಕ್ಷಣದ ಅಗತ್ಯವನ್ನು ಕಾಂ.ಕೆ.ಪಿ.ವಿವರಿಸಿದರು. [illegible] ಸಮಿತಿ ಅಧ್ಯಕ್ಷ ಶ್ರೀಧರ ಪಡುಕೋಣೆ ಅಧ್ಯಕ್ಷತೆ ವಹಿಸಿದ್ದರು. ರಾಜೀವ್ ಹೆಜ್ಮಾಡಿ ಸ್ವಾಗತಿಸಿದರು. ಸುಬ್ರಮಣ್ಯ ಪಡುಕೋಣೆ ವಂದಿಸಿದರು. ಸೆಪ್ಟೆಂಬರ್ 1ರ 'ವಿಧಾನ ಸೌಧ ಚಲೋ'ಕ್ಕೆ ಪೂರ್ವಭಾವಿಯಾಗಿ ಸಮಾವೇಶ ನಡೆದಿದ್ದು ಜಿಲ್ಲಾಧ್ಯಕ್ಷ ಚಂದ್ರಶೇಖರ್ ಅದರ ಬಗ್ಗೆ ವಿವರಿಸಿದರು. ಸಂಪೂರ್ಣ ಸಾಕ್ಷರತಾ ಆಂದೋಲನದಲ್ಲಿ ಸಕ್ರಿಯರಾಗಿ ಪಾಲ್ಗೊಳ್ಳಲು ಸಮಾವೇಶ ವಿದ್ಯಾರ್ಥಿಗಳಿಗೆ ಕರೆನೀಡಿತು.

ಶರಣಾಗು ಇಲ್ಲವೆ .... ಪುಟ 5 ರಿಂದ

ಕೋಮುವಾದ ಮತ್ತು ಜಾತೀಯತೆ

ನಮ್ಮದು ವಿವಿಧ ಭಾಷಾ ಗುಂಪುಗಳು, ವಿವಿಧ ಭಾಷೆ. ಆಚಾರ-ವಿಚಾರಗಳ ದೇಶ, ವಿವಿಧತೆಯಲ್ಲಿ ಐಕ್ಯತೆಯಿರುವ ದೇಶ ಎಂದು ನಮ್ಮ ಸಂವಿಧಾನಕರ್ತರು ಸರಿಯಾಗಿಯೇ ಕಂಡಿದ್ದರು. ಜಾತ್ಯಾತೀತತೆಯ ಆಧಾರದ ಮೇಲಷ್ಟೆ ಅದರ ಐಕ್ಯತೆ ಕಾಪಾಡಲು ಸಾಧ್ಯ. ಜನರ ನಡುವೆ ಕೋಮು ಭಾವನೆ ಉದ್ರೇಕಿಸಲು ಸಾಮ್ರಾಜ್ಯಶಾಹಿ ಸಕಲ ಪ್ರಯತ್ನ ನಡೆಸಿತು. ಆದರೆ ಶಕ್ತಿಶಾಲಿ ರಾಷ್ಟ್ರೀಯ ಆಂದೋಲನ ಅದನ್ನು ಎದುರಿಸಲು, ಇಡೀ ದೇಶದ ಜನರನ್ನು ಒಂದಾಗಿಸಲು ಶಕ್ತವಾಯಿತು. ಆದರೂ ದೇಶದ ಇಬ್ಭಾಗದ ಸೋಲನ್ನು ನಾವು ಉಣ್ಣಬೇಕಾಯಿತು. ಈ ಅನುಭವದಿಂದ ನಾವೊಂದು ಪಾಠ ಕಲಿಯಬೇಕು.

ಇಂದು ಕೆಲವು ಜನ ಜಾತ್ಯಾತೀತತೆ ಎಂದರೇನು ಎಂದು ಕೇಳುವ ಮಟ್ಟದವರೆಗೂ ಹೋಗಿದ್ದಾರೆ. ಅಲ್ಪಸಂಖ್ಯಾತರ ಕೋಮಿನ ಜನಗಳನ್ನು ಸುಪ್ರೀತಗೊಳಿಸಲು ಅದನ್ನು ಬಳಸಲಾಗುತ್ತಿದೆ ಎಂದು ಕೆಲವರು ಹೇಳುತ್ತಾರೆ. ಜಾತ್ಯಾತೀತತೆಯ ಅರ್ಥ ನಮ್ಮ ದೇಶದಲ್ಲಿ ಯೂರೋಪಿನಲ್ಲಿ ಇದ್ದುದಕ್ಕಿಂತ ಭಿನ್ನವಾಗಿದೆ ಎಂದು ಕೆಲವರು ಹೇಳುತ್ತಾರೆ. ಜಾತ್ಯಾತೀತತೆಯೆಂದರೆ ಧರ್ಮವನ್ನು ಪ್ರಭುತ್ವದಿಂದ, ಸರಕಾರದಿಂದ ರಾಜಕೀಯದಿಂದ ಪ್ರತ್ಯೇಕಿಸುವುದು ಎಂದರ್ಥ ಎಂದು ಅವರಿಗೆ ಸ್ಪಷ್ಟಪಡಿಸಬೇಕು.

ಸಂಕ್ಷಿಪ್ತ ಸುದ್ದಿಗಳು

ಹಿಮಾಚಲ ಪ್ರದೇಶ ಕಾಲೇಜ್ ಚುನಾವಣೆಗಳಲ್ಲಿ ಎಸ್‌ಎಫ್‌ಐ ಜಯಭೇರಿ

ಹಿಮಾಚಲ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತವಾಗಿರುವ ಕಾಲೇಜ್‌ಗಳ ವಿದ್ಯಾರ್ಥಿ ಸಂಘಗಳಿಗೆ ನಡೆದ ಚುನಾವಣೆಗಳಲ್ಲಿ ಎಸ್ ಎಫ್.ಐ. ಭಾರಿ ವಿಜಯವನ್ನು ಸಂಪಾದಿಸಿದೆ. ತನ್ಮೂಲಕ ಅದು ತನ್ನ ಜನಪ್ರಿಯತೆಯನ್ನು ರಾಜ್ಯದಲ್ಲಿ ಇನ್ನೊಮ್ಮೆ ಸಾಬೀತುಗೊಳಿಸಿದೆ. ಹಿಮಾಚಲಪ್ರದೇಶದಲ್ಲಿ ಬಿ.ಜೆ.ಪಿ. ಸರಕಾರವಿದ್ದಾಗ್ಯೂ ಎಸ್‌ಎಫ್‌ಐ ಗಳಿಸಿರುವ ಈ ಜಯ ಗಮನಾರ್ಹವಾದುದು.

ಈ ಎಲ್ಲಾ ಕಾಲೇಜ್‌ಗಳ ಒಟ್ಟು 117 ಪದಾಧಿಕಾರಿಗಳಲ್ಲಿ 65 ಸ್ಥಾನಗಳು ಎಸ್ ಎಫ್‌ಐ ಸಂಗಾತಿಗಳ ಪಾಲಾದವು. 31 ಸ್ಥಾನಗಳಿಸಿದ ಎ.ಬಿ.ವಿ.ಪಿ.ಯಲ್ಲದೆ ಎನ್.ಎಸ್.ಯು. ಐ(ಐ) ಮತ್ತಿತರ ಸಂಘಟನೆಗಳು ಹಿಂದೆ ಬಿದ್ದವು.

'ಉದ್ಯೋಗ ಹಕ್ಕು' ಸಮಾವೇಶ

★ ಬಿಹಾರ ರಾಜಧಾನಿ ಪಾಟ್ನಾದಲ್ಲಿ ಆಗಸ್ಟ್ 25 ರಂದು ಉದ್ಯೋಗದ ಹಕ್ಕು ಕುರಿತಂತೆ ರಾಜ್ಯ ಸಮಾವೇಶ ನಡೆಯಿತು. ಡಿ.ವೈ.ಎಫ್.ಐ. ಎಸ್.ಎಫ್.ಐ. ಎ.ಐ.ವೈ.ಎಫ್. ಎಐ.ಎಸ್.ಎಫ್ ಯುವ ಜನತಾದಳ ಮತ್ತು ವಿದ್ಯಾರ್ಥಿ ಜನತಾದಳ ಸಂಯುಕ್ತವಾಗಿ ಇದನ್ನು ಏರ್ಪಡಿಸಿದ್ದವು.

ಬಿಹಾರ ಮುಖ್ಯಮಂತ್ರಿ ಲಲ್ಲೂ ಪ್ರಸಾದ್ ಯಾದವ್ ಸಮಾವೇಶವನ್ನು ಉದ್ಘಾಟಿಸಿದರು. ಡಿವೈಎಫ್‌ಐ ಸಹಕಾರ್ಯದರ್ಶಿ ಮಹಮದ್ ಸಲಿಮ್, ಎಸ್.ಎಫ್‌ಐ. ಪ್ರಧಾನ ಕಾರ್ಯದರ್ಶಿ ನೀಲೋತ್ಪಲ್ ಬಸು ಮೊದಲಾದವರು ಭಾಷಣಕಾರರಾಗಿದ್ದರು.

ಅಮೇರಿಕ ವಿರೋಧಿ ಪ್ರದರ್ಶನ

ಕೊಲ್ಲಿ ಬಿಕ್ಕಟ್ಟಿನಲ್ಲಿ ಅಮೆರಿಕದ ಪಾತ್ರ ಮತ್ತು ಕೊಲ್ಲಿಯಲ್ಲಿ ಸಿಲುಕಿರುವ ಸುಮಾರು ಒಂದು ಲಕ್ಷ ಭಾರತೀಯರಿಗೆ ಆಹಾರ ಮತ್ತು ವೈದ್ಯಕೀಯ ಸಾಮಗ್ರಿ ಸರಬರಾಜಿಗೆ ಅದು ಅಮಾನವೀಯ ರೀತಿಯಲ್ಲಿ ತಡೆಯೊಡ್ಡಿದ್ದನ್ನು ಪ್ರತಿಭಟಿಸಿ ಸಿ.ಪಿ.ಐ(ಎಂ) ದಿಲ್ಲಿ ರಾಜ್ಯಸಮಿತಿ ಸೆಪ್ಟೆಂಬರ್ 12 ರಂದು ರಾಜಧಾನಿಯಲ್ಲಿರುವ ಅಮೆರಿಕದ ವಾರ್ತಾಸೇವಾ ಕೇಂದ್ರದ ಎದುರು ಮತಪ್ರದರ್ಶನ ನಡೆಸಿತು.

ನೂರಾರು ಪುರುಷರು ಮತ್ತು ಮಹಿಳೆಯರು ಇದರಲ್ಲಿ ಪಾಲ್ಗೊಂಡಿದ್ದರು. ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯ ಸೀತಾರಾಮ ಯೆಚುರಿ, ದಿಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯೆ ಬೃಂದಾ ಕಾರಟ್ ಪ್ರತಿಭಟನಕಾರರನ್ನುದ್ದೇಶಿಸಿ ಮಾತನಾಡಿದರು.

ಮುಖ್ಯ ನ್ಯಾಯಾಧೀಶರ ನಿಧನ

ಭಾರತದ ಸುಪ್ರಿಂಕೋರ್ಟ್‌ನ ಮುಖ್ಯ ನ್ಯಾಯಾಧಿಶ ನ್ಯಾ/ ಸವ್ಯಸಾಚಿ ಮುಖರ್ಜಿ ಅವರು ಸೆಪ್ಟೆಂಬರ್ 25 ರಂದು ಲಂಡನ್‌ನಲ್ಲಿ ನಿಧನರಾದರು. ಸೆ. 20 ರಂದು ಹೃದಯಾಘಾತವಾದ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು.

ಸವ್ಯಸಾಚಿ ನಿಧನದಿಂದ ತೆರವಾದ ಸ್ಥಾನಕ್ಕೆ ನ್ಯಾ/ ರಂಗನಾಥ ಮಿಶ್ರಾ ಅವರನ್ನು ಭಾರತದ ಸರ್ವೋಚ್ಚ ನ್ಯಾಯಾಧೀಶರನ್ನಾಗಿ ನೇಮಕ ಮಾಡಲಾಗಿದೆ.

ಲೋಕಸಂಚಾರ

‘ಈ ಶತಮಾನದ ದೊಡ್ಡ ಹಗರಣ’ದಲ್ಲಿ ಬುಶ್ ಮಗ

ಅಮೇರಿಕದ ಅಧ್ಯಕ್ಷ ಬುಶ್ ಮಗ ನೀಲ್ ಬುಶ್ ‘ಈ ಶತಮಾನದ ದುಬಾರಿ ಅವ್ಯವಹಾರದ ದೊಡ್ಡ ಹಗರಣ’ದಲ್ಲಿ ಆಪಾದಿತರಾಗಿದ್ದಾರೆ. ಈ ಹಗರಣ ಅವರನ್ನು ತಟ್ಟಿದ್ದು ಮಾತ್ರವಲ್ಲ, S and L (Savings and Loans, ಉಳಿತಾಯ ಮತ್ತು ಸಾಲದ ಕಂಪನಿಗಳು) ಕಂಪನಿಗಳಿಗೆಲ್ಲಾ ಸಂಬಂಧಿಸಿದ್ದು. ಇದರಲ್ಲಿ ಅಧ್ಯಕ್ಷ ಬುಶ್‌ರವರ ಪಾತ್ರವಿದೆ. ಅಮೇರಿಕಾದ ಬೇಹುಗಾರಿಕೆ CIAಯ ರಕ್ತಸಿಕ್ತ ಕೈಗಳೂ ಇವೆ. ಕೊಲ್ಲಿ ಬಿಕ್ಕಟ್ಟು ಅಲ್ಲದಿದ್ದರೆ, ಬುಶ್ ಅಧ್ಯಕ್ಷಗಿರಿಗೆ ಸವಾಲು ಎಸೆಯಬಹುದಾಗಿದ್ದ ರಾಜಕೀಯ ಬಿಕ್ಕಟ್ಟು ಸೃಷ್ಟಿಸುವಷ್ಟು ಗಂಭೀರವಾದ ಹಗರಣ.

S and L ಕಂಪನಿಗಳು ಅಮೇರಿಕದಲ್ಲಿ ಸಣ್ಣ ಉಳಿತಾಯ ಮಾಡುವ ಕಡಿಮೆ ಸಂಬಳದ ಜನ ಮತ್ತು ಪಿಂಚಣಿದಾರರು ಹಣ ಇಡುವ ಸಂಸ್ಥೆಗಳು. ಇವು ಬ್ಯಾಂಕುಗಳಿಗಿಂತ ಸ್ವಲ್ಪ ಹೆಚ್ಚಿನ ಬಡ್ಡಿ ನೀಡಬಹುದು. ಹೆಚ್ಚಾಗಿ ಇದರಿಂದ ಮನೆಗಾಗಿ ಸಾಲವನ್ನು ಪಡೆಯುತ್ತಾರೆ. ಈ S and L ಕಂಪನಿಗಳು ಆರಂಭವಾದದ್ದು ಅಧ್ಯಕ್ಷ ರೂಸ್‌ವೆಲ್ಟರ ಕಾಲದಲ್ಲಿ . ಕಂಪನಿಗಳ ವಿಶಿಷ್ಟ ಪ್ರಕೃತಿಯಿಂದ ಇದರಲ್ಲಿ ಇಟ್ಟ ಹಣಕ್ಕೆ ಅಮೇರಿಕದ ಫೆಡರಲ್ ಸರಕಾರದ ಗ್ಯಾರಂಟಿ ಇರುತ್ತದೆ. S and L ಕಂಪನಿಗಳ ಮಾಲೀಕರು ಈ ಸೌಲಭ್ಯವನ್ನು ಉಪಯೋಗಿಸಿಕೊಂಡೇ ‘ಗೋಲ್‌ಮಾಲ್’ ಮಾಡಿರುವುದು.

ನೀಲ್ ಬುಶ್ ಡೈರಕ್ಟರ್ ಆಗಿರುವ S and L ‘ಸಿಲ್ವರಾಡೊ’ಅವರ ‘ಗೋಲ್‌ಮಾಲ್’ ಅವ್ಯವಹಾರಗಳಿಂದ ದಿವಾಳಿ ಎದ್ದಿದ್ದು, ಫೆಡರಲ್ ಸರಕಾರ ಅಲ್ಲಿನ ಗ್ರಾಹಕರ ಉಳಿತಾಯ ಹಿಂದಿರುಗಿಸಬೇಕಾದರೆ ಒಂದು ಶತಕೋಟಿ ಡಾಲರುಗಳನ್ನು ಖರ್ಚುಮಾಡಬೇಕು. ಇದು ಎಲ್ಲಿಂದ ಬರಬೇಕು? ತೆರಿಗೆಗಳಿಂದಲೇ ಅಂದರೆ ನೀಲ್ ಬುಶ್‌ರವರು ಅಮೇರಿಕದ ತೆರಿಗೆದಾರರ ಜೇಬುಗಳಿಂದ ಒಂದು ಶತಕೋಟಿ ಡಾಲರುಗಳಷ್ಟು ‘ಪಿಕ್ ಪಾಕೆಟ್’ ಮಾಡಿದ್ದಾರೆ. ಶತಕೋಟಿ ಡಾಲರುಗಳ ಈ ನಷ್ಟ ಚರಿತ್ರೆಯಲ್ಲೇ ಯಾವುದೇ ಕಂಪನಿ ಅನುಭವಿಸಿರುವ ಅತ್ಯಂತ ದೊಡ್ಡ ನಷ್ಟ ಎನ್ನಲಾಗಿದೆ. ‘ಸಿಲ್ವರಾಡೊ’ದಿವಾಳಿ ಎದ್ದದ್ದಾದರೂ ಹೇಗೆ? ಸಿಲ್ವರಾಡೊ ಸಾಲ ಕೊಟ್ಟ ಇಬ್ಬರು (ಗುಡ್ ಮತ್ತು ವಾಲ್ಟರ್ಸ್) ಅದನ್ನು ಹಿಂದಿರುಗಿಸಲಿಲ್ಲ. ಈ ಇಬ್ಬರ ಜತೆ ನೀಲ್ ಬುಶ್‌ಗೆ ವ್ಯಾಪಾರ ಸಂಬಂಧ ಇದ್ದಿದ್ದನ್ನು, ಉಳಿದ ಡೈರೆಕ್ಟರ್‌ಗಳಿಗೆ ಹೇಳದ್ದು ‘ಅತ್ಯಂತ ಹೇಯ ಆರ್ಥಿಕ ಅಪರಾಧ’ ಎಂದು ಹೇಳಲಾಗಿದೆ. ಅಲ್ಲದೆ ನೀಲ್ ಬುಶ್ ಈ ಇಬ್ಬರಿಗೆ ಕೊಡಿಸಿದ ಸಾಲದ ಒಂದು ಭಾಗವನ್ನು ಅವರು ನೀಲ್ ಬುಶ್‌ರ ಇನ್ನೊಂದು ಕಂಪನಿ(ತೈಲ ಅನ್ವೇಷಣೆ ಕಂಪನಿ) J.N.B.ಎಕ್ಸ್‌ಪ್ಲೊರೇಷನ್‌ನಲ್ಲಿ ತೊಡಗಿಸಿದರೆ, ಉಳಿದದ್ದನ್ನು ಬುಶ್ ಕೈಗಡವಾಗಿ ಕೊಟ್ಟರು. ಇದನ್ನು ಹಿಂದಿರುಗಿಸಬೇಕಾಗಿಲ್ಲ ಎಂಬ ಷರತ್ತಿನ ಮೇಲೆ!

ನೀಲ್ ಬುಶ್‌ರ ಕಂಪನಿಯದ್ದೊಂದೇ ಈ ಹಗರಣವಲ್ಲ. ಇಂತಹ ಹಗರಣಗಳಲ್ಲೇ! ಅತ್ಯಂತ ದೊಡ್ಡದು. ಈ S and L ಕಂಪನಿಗಳಲ್ಲಿ ಹಗರಣಗಳು ಇತ್ತೀಚೆಗೆ ಅತ್ಯಂತ ಸಾಮಾನ್ಯವಾಗಿದೆ. ಇಲ್ಲಿನ ಉಳಿತಾಯಗಳಿಗೆ ಫೆಡರಲ್ ಸರಕಾರದ ಗ್ಯಾರಂಟಿ,ಮತ್ತಿತರ ಹಲವು ಕಾನೂನಿನ ನ್ಯೂನತೆಗಳು, ದುರುಪಯೋಗಪಡಿಸಬಹುದಾದ ಲೋಪದೋಷಗಳನ್ನು ಉಪಯೋಗಿಸುವುದರಿಂದ S and L ಕಂಪನಿಗಳು ‘ಗೋಲ್‌ಮಾಲ್’ಗಳಿಗೆ ತವರುಮನೆಯಾಗಿವೆ. ಈ ಬಿಕ್ಕಟ್ಟು ಬಗೆಹರಿಸಲು ಅಮೇರಿಕನ್ ಫೆಡರಲ್ ಸರಕಾರ ಐದು ಸಾವಿರ ಶತಕೋಟಿ ಡಾಲರುಗಳಿಗಿಂತಲೂ ಹೆಚ್ಚು ಹಣವನ್ನು ಮುಂದಿನ ಮೂವತ್ತು ವರ್ಷಗಳಲ್ಲಿ ಸುರಿಯಬೇಕಾಗುತ್ತದೆ. ಮುಂದಿನ ಹತ್ತು ವರ್ಷಗಳಲ್ಲೇ , ಸುಮಾರು 500 ಶತಕೋಟಿ ಡಾಲರುಗಳ ಅಗತ್ಯ ಇದೆ ಎಂದು ಬುಶ್ ಸರಕಾರವೇ ಒಪ್ಪಿಕೊಂಡಿದೆ. ಈಗಾಗಲೇ ಹೇಳಿದ ಹಾಗೆ ಇದು ತೆರಿಗೆದಾರರ ಜೇಬಿನಿಂದಲೇ ಬರಬೇಕು. ಇದು ಬಜೆಟ್ ಕೊರತೆಯ ದೊಡ್ಡ ಕಾರಣವಾಗಬಲ್ಲುದು. ಅಮೇರಿಕದ ಆರ್ಥಿಕ ಕುಸಿತಕ್ಕೆ ಹೆದ್ದಾರಿಯಾಗಬಹುದು.

ಈ S and L ಕಂಪನಿಗಳ, ಸಿಲ್ವರಾಡೊ ಕಥೆ ಇಲ್ಲಿಗೆ ಮುಗಿಯಲಿಲ್ಲ. ಅದು ಇನ್ನೂ ನಿಗೂಢವಾಗಿದೆ. ಸಿಐಎ ಅದರ ಕಾನೂನುಬಾಹಿರ ಚಟುವಟಿಕೆಗಳಲ್ಲಿ ಬರುವ ‘ಕಪ್ಪು’ಹಣವನ್ನು ಇಂತಹ ಎಸ್ ಅಂಡ್ ಎಲ್ ಕಂಪನಿಗಳನ್ನು ಉಪಯೋಗಿಸಿ ‘ಬಿಳಿ’ ಮಾಡುತ್ತವೆ ಎಂದು ಇರಾನ್-ಕಾಂಟ್ರಾ ತನಿಖೆಗಳಿಂದ ತಿಳಿದಿತ್ತು. ಇಂತಹ ಚಟುವಟಿಕೆಗಳಲ್ಲಿ ತೊಡಗಿದ್ದ 22 ಎಸ್ ಅಂಡ್ ಎಲ್ ಕಂಪನಿಗಳಲ್ಲಿ ‘ಸಿಲ್ವರಾಡೊ’ಸಹ ಒಂದು. ‘ಸಿಲ್ವರಾಡೊ’ ಮೇಲೆ ತನಿಖೆ ನಡೆಯುತ್ತಿದ್ದು ಫೆಡರಲ್ ಅಧಿಕಾರಿಗಳು ಅದನ್ನು ಮುಚ್ಚುವ ನಿರ್ಧಾರ ಮಾಡಿದ್ದರು. ಆದರೆ ಈ ನಿರ್ಧಾರದ ಸಮಯ ಬಹಳ ನಿಗೂಢವಾದದ್ದು. ಈ ನಿರ್ಧಾರಕ್ಕೆ ಫೆಡರಲ್ ಅಧಿಕಾರಿಗಳು ಮೊದಲೇ ಬಂದಿದ್ದರೂ, ಅಧ್ಯಕ್ಷೀಯ ಚುನಾವಣೆ ನಡೆದು ಒಂದು ತಿಂಗಳವರೆಗೆ ಇದನ್ನು ತಡೆಹಿಡಿಯಲಾಗಿದೆ ಎಂದೂ ಈಗ ಬೆಳಕಿಗೆ ಬಂದಿದೆ. ಈ ಸಂಗತಿ ಅಧ್ಯಕ್ಷೀಯ ಚುನಾವಣೆ ಸಮಯದಲ್ಲಿ ಬೆಳಕಿಗೆ ಬಂದಿದ್ದರೆ ಬುಶ್ ಚುನಾವಣೆಯಲ್ಲಿ ಸೋಲುತ್ತಿದ್ದುದು ಗ್ಯಾರಂಟಿ

ಈ ‘ಗೋಲ್‌ಮಾಲ್’ಗಳ ಸರಪಳಿ ಇಲ್ಲಿಗೆ ಮುಗಿಯಲಿಲ್ಲ. ನೀಲ್ ಬುಶ್ , ಇತರ ಕಂಪನಿಗಳು , ಸಿಐಎ ಅಲ್ಲದೆ ಇದರ ಕದಂಭ ಬಾಹುಗಳು ಅಧ್ಯಕ್ಷ ಬುಶ್‌ರತ್ತ ಚಾಚಿದೆ. ಸಿಐಎ ಈ ಗೋಲ್‌ಮಾಲ್‌ಗಳಲ್ಲಿ ತೊಡಗಿರುವಾಗ ಅವರು ಸಿಐಎ ಮುಖ್ಯಸ್ಥರಾಗಿದ್ದು ಮಾತ್ರವಲ್ಲ, ಅವರು ಉಪಾಧ್ಯಕ್ಷರಾಗಿ ಇರಾನ್ ಗೇಟ್ ಹಗರಣದಲ್ಲಿ ನೇರಪಾತ್ರ ವಹಿಸಿದ್ದು ಎಲ್ಲರಿಗೂ ಗೊತ್ತಿದ್ದದ್ದೇ. ಅವರ ಅಧ್ಯಕ್ಷೀಯ ಚುನಾವಣೆಯಲ್ಲಿ ಒಂದು ಲಕ್ಷ ಡಾಲರುಗಳು, 6 ಕಾಣಿಕೆಗಳು ಎಸ್ ಅಂಡ್ ಎಲ್ ಕಂಪನಿಗಳಿಂದ ಬಂದಿದ್ದು ಈಗ ಬೆಳಕಿಗೆ ಬಂದಿದೆ. ಅಧ್ಯಕ್ಷ ಬುಶ್‌ರಿಗೂ ಈ ಎಸ್ ಅಂಡ್ ಎಲ್ ಕಂಪನಿಗಳಿಗೂ ಸಂಬಂಧ ಇಷ್ಟೂ ಹಳೆಯದು. 1981ರಲ್ಲಿ ಅಧ್ಯಕ್ಷ ರೇಗನ್ ಎಸ್ ಅಂಡ್ ಎಲ್ ಕಂಪನಿಗಳ ಬಗ್ಗೆ ಕಾನೂನು ತಿದ್ದುಪಡಿ ಮಾಡಲು ನೇಮಿಸಿದ ಸಮಿತಿಯ ಅಧ್ಯಕ್ಷರಾಗಿ ನೇಮಿಸಿದ್ದು ಜಾರ್ಜ್ ಬುಶ್‌ರನ್ನೇ. ಈ ಸಮಿತಿ ಮಾಡಿದ ಶಿಫಾರಸ್ಸುಗಳ ಆಧಾರದ ಮೇಲೆ ಮಾಡಿದ ಕಾನೂನು ತಿದ್ದುಪಡಿಗಳೇ ಈ ಎಲ್ಲ ‘ಗೋಲ್‌ಮಾಲ್’ಗಳಿಗೆ ಎಡೆಮಾಡಿಕೊಟ್ಟಿದೆ ಎಂದು ಬಲವಾಗಿ ಪ್ರತಿಪಾದಿಸಲಾಗಿದೆ. ಎಸ್ ಅಂಡ್ ಎಲ್ ಕಂಪನಿಗಳಲ್ಲಿ ಈವರೆಗೆ ಸುಮಾರು 18 ಸಾವಿರ ಗೋಲ್‌ಮಾಲ್ ಕೇಸ್‌ಗಳು ದಾಖಲೆಯಾಗಿವೆ. ಇದಲ್ಲದೆ ಸೆನೆಟ್ ಸಮಿತಿ ನಡೆಸಿದ ತನಿಖೆಗಳ ಪ್ರಕಾರ ಜೇಮ್ಸ್‌ಫೈಲ್ ಇಂತಹ ಗೋಲಮಾಲ್‌ಗಳಿಂದ ತೆಗೆದ10 ಶತಕೋಟಿ ಡಾಲರುಗಳನ್ನು ಅಧ್ಯಕ್ಷ ಬುಶ್‌ರ ಚುನಾವಣಾ ಪ್ರಚಾರಕ್ಕೆ ಕೊಟ್ಟಿರುವ ಸಾಧ್ಯತೆ ಇದೆ.

ನೀಲ್ ಬುಶ್‌ರವರ ವಿರುದ್ಧ ಬಹಿರಂಗ ತನಿಖೆ ಈಗಾಗಲೇ ಆರಂಭವಾಗಿದ್ದು, ಆಪಾದಿತರು ಅವರು ಮಾತ್ರವಲ್ಲ - ಅಧ್ಯಕ್ಷ ಬುಶ್, ಸಿಐಎ, ಅಮೇರಿಕಾದ ಭ್ರಷ್ಟ ರಾಜಕೀಯ-ಆರ್ಥಿಕ ವ್ಯವಸ್ಥೆ ಎಂದರೆ ತಪ್ಪಾಗಲಾರದು. ಅಮೇರಿಕದ ಸಾಮಾನ್ಯ ಜನತೆ ಇದನ್ನು ಬಂಡವಾಳಶಾಹಿಯ ಇನ್ನೊಂದು ‘ಹಗರಣ’ವೆಂದುಕೊಂಡು ತೆಪ್ಪಗೆ ಕೂತಿರಲಾರರು. ಇದರ ಪರಿಣಾಮ ಅಮೇರಿಕದ ರಾಜಕಾರಣ ಆರ್ಥಿಕತೆಗೆ ಇನ್ನೂ ಗಂಭೀರ ರೂಪದ್ದಾಗಿರುತ್ತದೆ ಎಂಬ ಅನ್ನಿಸಿಕೆ ಬಲವಾಗಿದೆ.

ಪಾಕಿಸ್ತಾನದಲ್ಲಿ ಮುಕ್ತ ನ್ಯಾಯಬದ್ಧ ಚುನಾವಣೆ ನಡೆಯುವುದೇ

ಪಾಕಿಸ್ತಾನದಲ್ಲಿ ಬೆನಜಿರ್ ಸರಕಾರದ ವಜಾ ನಂತರ ನಡೆಯುತ್ತಿರುವ ವಿದ್ಯಮಾನಗಳನ್ನು ಅವಲೋಕಿಸಿದರೆ ಈ ಪ್ರಶ್ನೆ ಪಾಕಿಸ್ತಾನದ ಜನತೆಗೆ ಮಾತ್ರವಲ್ಲ ದಕ್ಷಿಣ ಏಷ್ಯಾ ಮತ್ತು ಕೊಲ್ಲಿ ದೇಶಗಳ ರಾಜಕೀಯ ದೃಷ್ಟಿಯಿಂದಲೂ ಮುಖ್ಯ ಪ್ರಶ್ನೆಯಾಗುತ್ತದೆ. ಬೆನಜಿರ್ ಸರಕಾರದ ವಜಾದಲ್ಲಿ ಅಮೇರಿಕದ ಪಾತ್ರವನ್ನು ಮುಚ್ಚಿಕೊಳ್ಳಲು ಎಷ್ಟೇ ಪ್ರಯತ್ನ ಮಾಡಿದರು, ಅದು ಜಗಜ್ಜಾಹೀರಾಗಿದ್ದು. ಹಾಗೇನೇ ವಜಾಕ್ಕೂ ಕೊಲ್ಲಿಯಲ್ಲಿನ ಬಿಕ್ಕಟ್ಟಿಗೂ ಇರುವ ಸಂಬಂಧ ಅಷ್ಟೆ ನೇರವಾದದ್ದು ಸ್ಪಷ್ಟವಾಗಿದೆ. ಬೆನಜಿರ್ ಅಧಿಕಾರಕ್ಕೆ ಬಂದದ್ದು ಅಮೇರಿಕನ್ ಸರಕಾರದ ಜತೆ ‘ಒಪ್ಪಂದ’ದ ಆಧಾರದ ಮೇಲೆ. ಅಮೇರಿಕನ್ ಹಿತಾಸಕ್ತಿಗಳಿಗೆ ಧಕ್ಕೆಯಾಗುವ ಯಾವ ಕ್ರಮ ಕೈಗೊಳ್ಳುವುದಿಲ್ಲ ಎಂಬ ಆಧಾರದ ಮೇಲೇಯೇ. ಬೆನಜಿರ್ ಅಧಿಕಾರಕ್ಕೆ ಬಂದ ಮೇಲೆ ತನ್ನ ಮೇಲೆ ತಿರುಗಿ ಬೀಳದಂತೆ ‘ಸುರಕ್ಷತೆ ಕ್ರಮ’ಗಳನ್ನು ಆಕೆಯ ಮೇಲೆ ಹೇರಿತ್ತು. ಇವುಗಳಲ್ಲಿ ಮುಖ್ಯವಾದದ್ದು- ಅಮೇರಿಕಕ್ಕೆ ಒಪ್ಪಿಗೆಯಾಗಿರುವ ಅಧ್ಯಕ್ಷರನ್ನು ಸ್ವೀಕರಿಸಬೇಕು, ಹಿಂದಿನ(ಅಂದರೆ ಸೋತ ಮಾಜಿ ಆಳುವ ಪಕ್ಷದ ಸದಸ್ಯ) ವಿದೇಶಿ ಮಂತ್ರಿಯನ್ನು ಮುಂದುವರೆಯಲು ಬಿಡಬೇಕು, ಸೈನ್ಯ ಮತ್ತು ಅದರಲ್ಲೂ ಬೇಹುಗಾರಿಕೆ ಸಂಸ್ಥೆ ಐಎಸ್‌ಐ ಚಟುವಟಿಕೆಗಳಲ್ಲಿ ಸರಕಾರ ಹಸ್ತಕ್ಷೇಪ ಮಾಡಬಾರದು.ಕೊನೆಯ ಷರತ್ತಿನ ವಿರುದ್ಧ ಬೆನಜಿರ್ ತಿರುಗಿ ಬಿದ್ದಿದ್ದರು (ಸ್ವಲ್ಪ ಮಟ್ಟಿಗೆ ಅಷ್ಟೆ), ಬೆನಜಿರ್ ದಕ್ಷಿಣ ಏಷ್ಯಾ, ಕೊಲ್ಲಿಯಲ್ಲಿ ಅಮೇರಿಕನ್ ಹಿತಾಸಕ್ತಿಗೆ ಅನುಗುಣವಾಗಿಯೇ ತಮ್ಮ ವಿದೇಶಿ ನೀತಿಯನ್ನು ತೊಡಗಿದ್ದರು. ‘ಕಾಶ್ಮೀರ ಸಮಸ್ಯೆಯ ಬಗ್ಗೆ ಅವರ ಕೂಗಾಟ ಅಮೇರಿಕ ಇದನ್ನು ಮಧ್ಯಸ್ಥಿಕೆ ಮಾಡುವುದಕ್ಕಾಗಿಯೇ ಇತ್ತು ಎಂಬುದು ಎಲ್ಲರಿಗೂ ಗೊತ್ತಿದ್ದದ್ದು. ಹಾಗೇ ಕೊಲ್ಲಿಯಲ್ಲಿ ಅಮೇರಿಕನ್ ನೀತಿಗೆ ಪೂರ್ಣ ಬೆಂಬಲ. ಆದರೂ ಅಮೇರಿಕಕ್ಕೆ ಬೇಕಾಗಿದ್ದದ್ದು-ಸಂಪೂರ್ಣ ಅಧೀನವಾದ ಆಡಳಿತ ಪಾಕಿಸ್ತಾನದಲ್ಲಿ ಎಂಬುದೂ ಈಗ ಸ್ಪಷ್ಟ. ಅಮೇರಿಕ ವಿಧಿಸಿರುವ ಅಧ್ಯಕ್ಷರನ್ನು ಉಪಯೋಗಿಸಿಯೇ ಸರಕಾರದ ವಜಾ ನಡೆದದ್ದು. ಇದಕ್ಕೆ ಮೊದಲು ಬೆನಜಿರ್ ಸರಕಾರದ ಹೊರತು ಕಾನೂನುಗಳು ಬಿರಿದಾರು, ಅಧ್ಯಕ್ಷರು, ವಿರೋಧ ಪಕ್ಷಗಳು ಕೂಡ ಸೃಷ್ಟಿಸಿ ಮಾಡಿದ್ದರಲ್ಲೂ ಅಮೇರಿಕದ ಸಂಘಟಿತರ ಬಲದ ಕೈ ಇದೆ. ಈ ಶರತ್ತು ಇಲ್ಲದಿದ್ದರೆ ಬಹುಶ: ಅಮೇರಿಕಕ್ಕೆ ತನಗೆ ಬೇಕಾದ ಸರಕಾರವನ್ನು ತಡೆಯಲು ಸಾಧ್ಯವಿರಲಿಲ್ಲ. ಈ ಪ್ರದೇಶದಲ್ಲಿ ‘ಅಮೇರಿಕನ್ ಸ್ವಾಮಿಭಕ್ತ ಪೋಲೀಸ್’ಆಗಿ ಪಾಕಿಸ್ತಾನದ ಅಗತ್ಯ ಅಮೇರಿಕಕ್ಕೆ ಹಿಂದಿಗಿಂತಲೂ ಈಗ ಇದೆ.

ಬೆನಜಿರ್ ಮೇಲೆ ಭ್ರಷ್ಟಾಚಾರ ಆಪಾದನೆ ತನಿಖೆ ನಡೆಸಲು ವಿಶೇಷ ಕೋರ್ಟು, ಟ್ರಿಬ್ಯುನಲ್‌ಗಳು ಆಕೆಯನ್ನು ರಾಜಕೀಯವಾಗಿ ಮುಗಿಸುವ ಪ್ರಯತ್ನ, ಈ ಯಾವುದೇ ಆಪಾದನೆ ನಿಜವೆಂದು ಸಿದ್ಧವಾದರೆ ಬೆನಜಿರ್ ಆಗ ಚುನಾವಣೆಗೆ ನಿಲ್ಲುವಂತಿಲ್ಲ. ಆದರೂ ತಾತ್ಕಾಲಿಕ ಸರಕಾರದ ಆ ಪ್ರಯತ್ನಗಳು ಫಲಕೊಡುವಂತೆ ಕಾಣುತ್ತಿಲ್ಲ. ರಾಜಕೀಯವಾಗಿಯೂ ಆಕೆಯನ್ನು ಹಿಮ್ಮೆಟ್ಟಿಸಲು ಈವರೆಗೆ ಸಾಧ್ಯವಾಗಿಲ್ಲ. ಬೆನಜಿರ್ ಆಗಲೇ 4 ಪಕ್ಷಗಳ ಮೈತ್ರಿಕೂಟ ಸ್ಥಾಪಿಸಿದ್ದು ಚುನಾವಣಾ ಪ್ರಚಾರಕ್ಕೆ ಧುಮುಕಿದ್ದಾರೆ. ಇದೆಲ್ಲದರಿಂದ ಪಾಕಿಸ್ತಾನದ ಮಿಲಿಟರಿ ನ್ಯಾಯಬದ್ಧ ಚುನಾವಣೆ ಎಡೆಮಾಡಿಕೊಡುತ್ತದೇಯೋ ಅಥವಾ ಚುನಾವಣೆಗಳನ್ನೇ ಮುಂದೂಡಲಾಗುತ್ತದೆಯೇ ಎಂಬ ಸಂಶಯ ಬಲವಾಗಿದೆ.

ಅಮೇರಿಕದ ದೃಷ್ಟಿಯಿಂದ ಚುನಾವಣೆಯೂ ನಡೆಯಬೇಕು, ಇಸ್ಲಾಮಿಕ್ ಪಕ್ಷಗಳು ಅಧಿಕಾರಕ್ಕೆ ಬರಬೇಕು. ಇದಕ್ಕಾಗಿ ಅಮೇರಿಕ ಏನನ್ನು ಮಾಡಲು ಹೇಸುವುದಿಲ್ಲ. ಇದು ಸಾಧ್ಯವಾಗದಿದ್ದರೆ ಮಿಲಿಟರಿ ವಾಪಸು ಬರುತ್ತದೆ ಎಂಬುದು ಪಾಕಿಸ್ತಾನದ ಜನತೆಗೆ ಗೊತ್ತು,

ಆದರೂ ಸಾಮ್ರಾಜ್ಯಶಾಹಿಮಾಧ್ಯಮ ಅಮೇರಿಕಾದ ‘ಒತ್ತಡ’ದಿಂದ ಪಾಕಿಸ್ತಾನದಲ್ಲಿ ಚುನಾವಣೆನಡೆಯುತ್ತಿವೆ. ಬೆನಜಿರ್ ಸರಕಾರದ ವಜಾ ಅದರ ತಪ್ಪುಗಳ ಫಲ. ಅಮೇರಿಕಾದ್ದು ಇದರಲ್ಲಿ ಯಾವ ಕೈವಾಡವೂ ಇಲ್ಲ-ಎಂದು ಬಿಂಬಿಸಲು ಪ್ರಯತ್ನಿಸುತ್ತಿದೆ.

ಅಕ್ಟೋಬರ್ 24ರ ಚುನಾವಣೆಗಳು ನಡೆಯುತ್ತವೆಯೇ, ನ್ಯಾಯಯುತವಾಗಿ ನಡೆಯುತ್ತವೆಯೇ, ನಡೆದರೆ ಅದರ ಫಲಿತಾಂಶ ಏನು ಎನ್ನುವುದರ ಪರಿಣಾಮ ಈ ಪ್ರದೇಶದ ರಾಜಕೀಯದ ಮೇಲೆ ಮಹತ್ವದ ಪರಿಣಾಮಗಳನ್ನು ಬೀರಲಿದೆ.

‘ಮಕ್ಕಳಿಗಾಗಿ ವಿಶ್ವ ಶೃಂಗ ಸಭೆ’

ಜಗತ್ತಿನ 72 ದೇಶಗಳ ಮುಖ್ಯಸ್ಥರು ಭಾಗವಹಿಸಿದ ಪ್ರಥಮ 2 ದಿನಗಳ ‘ಮಕ್ಕಳಿಗಾಗಿ ವಿಶ್ವ ಶೃಂಗ ಸಭೆ’ ನ್ಯೂಯಾರ್ಕಿನಲ್ಲಿ ಸೆಪ್ಟೆಂಬರ್ 29, ಅಕ್ಟೋಬರ್ 1 ರಂದು ನಡೆಯಿತು. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ(ಮುಖ್ಯವಾಗಿ) ಸುಲಭವಾಗಿ ತಡೆಯಬಹುದಾದ ಪೌಷ್ಟಿಕ ಆಹಾರದ ಅಭಾವ ಮತ್ತು ಬೆರಳೆಣಿಕೆಯ ರೋಗಗಳಿಂದ ಸಾಯುತ್ತಿರುವ ಮಕ್ಕಳನ್ನು ಉಳಿಸಲು ಅಗತ್ಯವಾದ ಕ್ರಮಗಳನ್ನು ಸರಕಾರಗಳು ಕೈಗೊಳ್ಳಲು ಬೇಕಾದ ‘ರಾಜಕೀಯ ಇಚ್ಛೆ’ ತಯಾರು ಮಾಡುವ ಉದ್ದೇಶವನ್ನು ಈ ಶೃಂಗ ಸಭೆ ಹೊಂದಿದೆ. ಈ ಶೃಂಗ ಸಭೆಯ ಮುಂದೆ ಕೆಲವು ಬೆಚ್ಚಿಬೀಳಿಸುವ ಅಂಕಿ ಸಂಖ್ಯೆಗಳನ್ನು ಇಡಲಾಯಿತು.

ಪ್ರತಿದಿನ 40 ಸಾವಿರ ಮಕ್ಕಳು ಆಹಾರದ ಅಭಾವ ಮತ್ತು ರೋಗಗಳಿಂದ ಸಾಯುತ್ತಾರೆ. ಪ್ರತಿ ವರ್ಷ ಈ ಸಂಖ್ಯೆ ಸರಾಸರಿ ಒಂದೂವರೆ ಕೋಟಿಗೇರುತ್ತದೆ. ಈ ಮಕ್ಕಳನ್ನು ಉಳಿಸಲು ಬೇಕಾದ ಸಂಪನ್ಮೂಲಗಳನ್ನು ಜಗತ್ತಿನ ಮಿಲಿಟರಿ ವೆಚ್ಚದ ಕೇವಲ ಶೇಕಡಾ 2. ಆದರೆ ಇದೂ ಹೆಚ್ಚಿನ ದೇಶಗಳಲ್ಲಿ ದೊರೆಯುತ್ತಿಲ್ಲ.

ಶೃಂಗ ಸಭೆ ಮುಂದಿನ ಹತ್ತು ವರ್ಷಗಳಿಗೆ ಈ ಪರಿಸ್ಥಿತಿಯನ್ನು ಬದಲಾಯಿಸಲು ಕ್ರಮಗಳನ್ನೊಳಗೊಂಡ ಹೇಳಿಕೆಯೊಂದನ್ನು ಅಂಗೀಕರಿಸಿತು. ಈ ಕಾರ್ಯಕ್ರಮದ ಮುಖ್ಯ ಗುರಿಗಳಲ್ಲಿ – ಮಕ್ಕಳ ಸಾಯುವ ದರವನ್ನು ಮೂರನೇ ಒಂದು ಭಾಗದಷ್ಟು ಕಡಿಮೆ ಮಾಡುವುದು, ಹೆರಿಗೆಯಲ್ಲಿ ತಾಯಿಯ ಸಾವಿನ ದರವನ್ನು ಅರ್ಧದಷ್ಟು ಕಡಿಮೆ ಮಾಡುವುದು, ಶೇಕಡಾ 80 ರಷ್ಟಾದರೂ ಮಕ್ಕಳು ಪ್ರಾಥಮಿಕ ಶಿಕ್ಷಣ ಮುಗಿಸುವಂತೆ ಮಾಡುವುದು, ವಯಸ್ಕರ ಅನಕ್ಷರತೆಯನ್ನು ಅರ್ಧದಷ್ಟು ಕಡಿಮೆ ಮಾಡುವುದು ಇತ್ಯಾದಿ ಸೇರಿದೆ..

ಇದು 1989 ಡಿಸೆಂಬರ್‌ನಲ್ಲಿ ನಡೆದ ‘ಮಕ್ಕಳ ಹಕ್ಕುಗಳ ವಿಶ್ವ ಸಂಸ್ಥೆ ಸಮಾವೇಶ’ದ ಮುಂದಿನ ಕಾರ್ಯಕ್ರಮ. ಈ ಹೇಳಿಕೆಯನ್ನು ಭಾರತ ಇನ್ನೂ ಅಧಿಕೃತವಾಗಿ ಅಂಗೀಕರಿಸಿಲ್ಲ

ಶ್ರೀಲಂಕಾದಲ್ಲಿ ‘ಮೊಸ್ಸಾದ್‌ನ’ ‘ಡಬ್ಬಲ್ ಆಕ್ಟಿಂಗ್’ ಬಯಲಿಗೆ

ಶ್ರೀಲಂಕಾದಲ್ಲಿ ಅಮೇರಿಕ, ಇಸ್ರೇಲು, ಪಾಕಿಸ್ತಾನದ ಬೇಹುಗಾರಿಕೆ ಸಂಸ್ಥೆಗಳು ಶ್ರೀಲಂಕಾ-ತಮಿಳು ಸಮಸ್ಯೆ ಉರಿಯುತ್ತಿರುವಂತೆ ನೋಡಿಕೊಳ್ಳಲು ಎಲ್ಲಾ ಚಟುವಟಿಕೆಗಳನ್ನು ನಡೆಸುತ್ತಿವೆ ಎಂಬುದು ಭಾರಿ ಹೊಸ ಸುದ್ದಿಯೇನಲ್ಲ. ಇಸ್ರೇಲಿನ ಬೇಹುಗಾರಿಕೆ ಸಂಸ್ಥೆ‘ಮೊಸ್ಸಾದ್’ ಇಂತಹ ಡಬ್ಬಲ್ ಆಕ್ಟಿಂಗ್‌ನಲ್ಲಿ ತೊಡಗಿತ್ತು ಎಂದು ಇದೇ ಸಂಸ್ಥೆಯ ಮಾಜಿ ಅಧಿಕಾರಿಯೊಬ್ಬರು ನಿರಾಕರಿಸಲಾಗದ ಎಲ್ಲಾ ವಿವರಗಳ ಜತೆ ಬಯಲಿಗೆಳೆದಿದ್ದಾರೆ. ಒಂದೇ ಸಮಯದಲ್ಲಿ ಇಸ್ರೇಲಿನ ನೌಕಾ ನೆಲೆಯೊಂದರಲ್ಲಿ ‘ಮೊಸ್ಸಾದ್’ ಶ್ರೀಲಂಕಾ ಸರ್ಕಾರಿ ಪಡೆಗಳಿಗೂ , ತಮಿಳು ಉಗ್ರಗಾಮಿಗಳಿಗೂ ಗೆರಿಲ್ಲಾ ಹೋರಾಟದಲ್ಲಿ ತರಬೇತಿ ನೀಡುತ್ತಿತ್ತು. ಮೊಸ್ಸಾದ ಮಾಜಿ ಅಧಿಕಾರಿ ವಿಕ್ಟರ್ ಒಸ್ಟ್ರೋವ್‌ಸ್ಕಿ ಇತ್ತೀಚೆಗೆ ಮೊಸ್ಸಾದ್ ಬಗ್ಗೆ ಬರೆದಿರುವ ದೀರ್ಘ ಪುಸ್ತಕದಲ್ಲಿ ಪ್ರಸ್ತಾಪಿಸಿದ್ದು, ತಾನು ಸ್ವತ: ಈ ತರಬೇತಿಯಲ್ಲಿ ಭಾಗವಹಿಸಿದ್ದೇನೆ ಎಂದಿದ್ದಾರೆ. 1980ರಲ್ಲಿ ನಡೆದ ಈ ತರಬೇತಿಯಲ್ಲಿ ಈ ಎರಡು ‘ಪಾರ್ಟಿ’ಗಳಿಗೆ ಒಬ್ಬರಿಗೆ ಇನ್ನೊಬ್ಬರ ಅಸ್ತಿತ್ವದ ಬಗ್ಗೆ ಗೊತ್ತಾಗದಂತೆ ನೋಡಿಕೊಳ್ಳುವುದು ಭಾರಿ ತಲೆನೋವಿನ ಕೆಲಸವಾಗಿತ್ತು ಎಂದು ಅವರು ಹೇಳಿದ್ದಾರೆ.

ಶ್ರೀಲಂಕಾದಲ್ಲಿ ‘ಮೊಸ್ಸಾದ್’ನ ಭಾನಗಡಿ ಇಷ್ಟಕ್ಕೆ ಮುಗಿಯಲಿಲ್ಲ. ಶ್ರೀಲಂಕಾದಲ್ಲಿ ವಿಶ್ವಬ್ಯಾಂಕ್‌ನ ಆರ್ಥಿಕ ಸಹಾಯದಿಂದ ನಡೆಯುತ್ತಿರುವ ‘ಮಹಾವೇಲಿ ಬೆಳವಣಿಗೆ ಪ್ರಾಜೆಕ್ಟ್’ನ ಹಣವನ್ನು ಇಸ್ರೇಲಿನಿಂದ ಮಿಲಿಟರಿ ಉಪಕರಣಗಳನ್ನು ಖರೀದಿಗೆ ದುರುಪಯೋಗಪಡಿಸಿದ್ದನ್ನು ಮುಚ್ಚುಹಾಕಲು ಮೊಸ್ಸಾದ್ ಉದಾರಸಹಾಯ ! ನೀಡಿತ್ತು. ವಿಶ್ವಬ್ಯಾಂಕ್‌ನ ಅಧಿಕಾರಿಗಳು ಯೋಜನೆಯ ನಿರೀಕ್ಷಣೆಗೆ ಬಂದಾಗ, ಅವರ ಕಣ್ಣಿಗೆ ಮಣ್ಣೆರಚಲು ‘ಮೊಸ್ಸಾದ್’ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಿತ್ತು.

ಮಾಜಿ ಅಧಿಕಾರಿ ಬರೆದ ಪುಸ್ತಕ ‘ಮೊಸ್ಸಾದ್, ಅಧಿಕಾರಿಯೊಬ್ಬ ಆದ ಮತ್ತು ಹೋದ ಬಗೆ’ ಅವರು ಮೊಸ್ಸಾದ ಸಂಘಟನೆ, ಚಟುವಟಿಕೆಗಳು ಕ್ರಮಗಳು ಎಲ್ಲವನ್ನು ವಿವರವಾಗಿ ಬಯಲಿಗೆಳೆದಿದ್ದಾರೆ.

ಅವರು ಹೊರಗೆಡವಿರುವ ಇನ್ನೂ ಕೆಲವು ಹಗರಣದಲ್ಲಿ ‘ಮೊಸ್ಸಾದ್’ 1980ರ ಆದಿಭಾಗದಲ್ಲಿ ಪಿಎಲ್‌ಓ ನಾಯಕ ಯಾಸೆರ್ ಅರಾಫತ್‌ರ ಖಾಸಗಿ ಕಾವಲು ಪಡೆಯ ಒಬ್ಬನನ್ನು ‘ವರದಿಗಾರ’ನಾಗಿ ನೇಮಿಸಿದ್ದೂ ಸೇರಿದೆ. ಈತ ಪಿಎಲ್‌ಓ ಮುಖ್ಯ ಕಛೇರಿ ಬೈರೂತ್‌ನಿಂದ ನೇರವಾಗಿ ‘ಮೊಸ್ಸಾದ್’ಗೆ ರೇಡಿಯೋ ಮೂಲಕ ವರದಿ ಕಳುಹಿಸುತ್ತಿದ್ದ. ಪ್ರತಿ ವರದಿಗೆ ಎರಡು ಸಾವಿರ ಡಾಲರು ‘ಸಂಭಾವನೆ’ ಪಡೆಯುತ್ತಿದ್ದ.

ಈ ಪುಸ್ತಕ ಇಸ್ರೇಲು ಮತ್ತು ಅಮೇರಿಕದಲ್ಲಿ ಭಾರಿ ಆಸಕ್ತಿ ಕೆರಳಿಸಿದ್ದು, ಅಮೇರಿಕದಲ್ಲಿ ಇದನ್ನು ನಿಷೇಧಿಸುವ ಇಸ್ರೇಲು ಸರಕಾರದಪ್ರಯತ್ನ ವಿಫಲವಾಗಿದೆ. ಇಸ್ರೇಲಿನ ರಾಜಕೀಯ ನಾಯಕರು, ‘ಮೊಸ್ಸಾದ್’ ಅಧಿಕಾರಿಗಳು ಅಮೇರಿಕ ಮತ್ತು ಅಂತರರಾಷ್ಟ್ರೀಯ ಜನಾಭಿಪ್ರಾಯದ ಮೇಲೆ ಅದು ಬೀರುವ ಪರಿಣಾಮದ ಬಗ್ಗೆ ಆತಂಕಿತರಾಗಿ ಕೈಕೈ ಹಿಸುಕುತ್ತಿದ್ದಾರೆ.

ಬೇಡಿಕೆಗಳಿಗಾಗಿ ರೈತರ ಒತ್ತಾಯ

ಶಿರಸಿ ತಾಲೂಕು ರೈತ ಸಂಘದ ರೈತರು 14-9-90 ರಂದು ಮೆರವಣಿಗೆಯಲ್ಲಿ ತೆರಳಿ ಬೇಡಿಕೆಗಳುಳ್ಳ ಮನವಿಯನ್ನು ತಹಶೀಲ್ದಾರರ ಮುಖಾಂತರ ಮುಖ್ಯ ಮಂತ್ರಿಗಳಿಗೆ ಸಲ್ಲಿಸಿದರು.

ರೈತರ 10 ಸಾವಿರ ರೂ. ವರೆಗಿನ ಸಾಲಮನ್ನಾ, ಅತಿಕ್ರಮಣದಾರರಿಗೆ ಪಟ್ಟಾ ಮಂಜೂರಿ, ವಸತಿಹೀನರಿಗೆ ವಸತಿ ನೀಡಿಕೆ, ಬಡವರಿಗೆ ಹಸಿರು ಕಾರ್ಡ ವಿತರಣೆ ಹಾಗೂ ಏರಿದ ವಿದ್ಯುತ್ ದರವನ್ನು ಇಳಿಸಬೇಕೆಂಬ ಬೇಡಿಕೆಗಳಿಗಾಗಿ ಒತ್ತಾಯಿಸಿದರು. ಪ್ರಾಂತ ರೈತ ಸಂಘ ಪತ್ರಿಕಾ ಹೇಳಿಕೆಯಲ್ಲಿ ಮಂಡಲ್ ವರದಿಗೆ ಬೆಂಬಲ ವ್ಯಕ್ತಪಡಿಸಿ ಶತಮಾನಗಳ ಕಾಲದಿಂದ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಜನರಿಗೆ ಮೀಸಲಾತಿ ಅವಶ್ಯಕವಾಗಿದೆ. ಆದರೆ ಕೋಮುವಾದಿ , ಸಂಘಟನೆಗಳು ವಿದ್ಯಾರ್ಥಿ ಯುವಜನರನ್ನು ಎತ್ತಿ ಕಟ್ಟುವ ಕೆಲಸವನ್ನು ಮಾಡುತ್ತಿವೆ. ವಿದ್ಯಾರ್ಥಿಗಳು ಉದ್ಯೋಗದ ಮೂಲಭೂತ ಹಕ್ಕಿಗಾಗಿ ಹೋರಾಡಿದರೆ ಅದೊಂದು ಪ್ರಜಾಸತ್ತಾತ್ಮಕ ಚಳುವಳಿಯಾಗುತ್ತಿತ್ತು ಎಂದು ತಿಳಿಸಿದೆ.

K R N M/ BGW - 293 MAG (2) PRB DECR 319 - 78/79

ವಿಳಾಸ:

ಸಂಯುಕ್ತ ಕಾರ್ಯಕ್ರಮ

ಇದಕ್ಕಾಗಿ ಆ ಎರಡು ಕಾರ್ಯಕ್ರಮಗಳನ್ನು ಪಕ್ಷದ ರಾಜ್ಯ ಸಮಿತಿ ರೂಪಿಸಿದೆ.

(1) ಜಿಲ್ಲಾ ಪರಿಷತ್ ವ್ಯವಸ್ಥೆಯನ್ನು ಬುಡಮೇಲು ಮಾಡುವ ಪ್ರಯತ್ನದ ವಿರುದ್ಧ, ವಿದ್ಯುತ್ ದರ ಏರಿಕೆಯ ವಿರುದ್ಧ, ಬರ ನೆರೆ ಪರಿಹಾರ ಕಾರ್ಯಕ್ರಮಗಳಿಗಾಗಿ- ಜನತಾದಳ, ಜನತಾಪಕ್ಷ, ಸಿಪಿಐ ಗಳೊಡನೆ ಸೇರಿ ಸಂಯುಕ್ತ ಕಾರ್ಯಕ್ರಮಗಳನ್ನು ರೂಪಿಸಲು ಪ್ರಯತ್ನ ನಡೆದಿದೆ.

ರಾಜಕೀಯ ಸಮಾವೇಶ

(2) ರಾಷ್ಟ್ರೀಯ ರಾಜಕೀಯ- ಆರ್ಥಿಕ ನೀತಿಗಳ ಬಗ್ಗೆ, ಕೋಮುವಾದ, ವಿಪ ಪ್ಯಾಲಿ ಸುರದುವುದನ್ನು ತಡೆಯುವುದಕ್ಕಾಗಿ, ಮಂಡಲ ವರದಿಯ ಬಗ್ಗೆ ಪಕ್ಷದ ಅಭಿಪ್ರಾಯವನ್ನು ಜನರ ಮುಂದಿಡಲು ಕಾಂಗ್ರೆ ಆಡಳಿತವನ್ನು ಬಯಲಿಗೆಳೆಯಲು ಪ್ರತಿ ತಾಲೂಕು ಕೇಂದ್ರ ನಗರಗಳಲ್ಲಿಯೂ ರಾಜಕೀಯ ಸಮಾವೇಶಗಳನ್ನು ನಡೆಸಲು ರಾಜ್ಯ ಸಮಿತಿ ತೀರ್ಮಾನಿಸಿದೆ.

ಕಾಂಗ್ರೆಸ್ ಸರ್ಕಾರದ---

ಪುಟ 1 ರಿಂದ

ವುದರ ಬದಲಾಗಿ ಸಂಪನ್ಮೂಲ ಸಂಗ್ರಹಣೆಗಾಗಿ ರಾಜ್ಯದ ಜನರಿಗೆ ನೀಡಿದ್ದ ಪರಿಹಾರಗಳನ್ನೂ ಕಿತ್ತುಕೊಳ್ಳುವುದು ಅವರ ಮೇಲೆ ಅಧಿಕ ಹೊರೆ ಹೊರಿಸುವುದನ್ನು ತೀವ್ರಗೊಳಿಸಿದೆ.

ಜನತೆಗೆ ನೀಡಿದ್ದ ಪರಿಹಾರಗಳ ವಂಚನೆ:

ಹಿಂದಿನ ಜನತಾ-ಜನತಾದಳ ಸರಕಾರಗಳು ಜನರ ಸಮಸ್ಯೆಗಳಿಗೆ ನೀಡಿದ್ದ ಅಲ್ಪ ಪರಿಹಾರಗಳನ್ನು ಈ ಸರಕಾರ ಪೂರ್ಣವಾಗಿ ನಾಶ ಮಾಡಹೊರಟಿದೆ. ಅಗ್ಗದ ದರದಲ್ಲಿ ಹೆಚ್ಚು ಪ್ರಮಾಣದಲ್ಲಿ ನೀಡಲಾಗುತ್ತಿದ್ದ ಸಾರ್ವಜನಿಕ ಬಳಕೆ ವಸ್ತುಗಳನ್ನು ಕುಂಠಿತಗೊಳಿಸಿರುವುದು ಹಾಗೂ ಮತ್ತಷ್ಟು ಕುಂಠಿತಗೊಳಿಸಲು ಪ್ರಯತ್ನ ನಡೆಸುತ್ತಿರುವುದು, ಮಕ್ಕಳ ಪುಸ್ತಕ, ಸಮವಸ್ತ್ರ ನೀಡಿಕೆಯಲ್ಲಿ ಕಡಿತದ ನಿರ್ಧಾರ, ಅಗ್ಗದ ದರದಲ್ಲಿ ಬಟ್ಟೆ ನೀಡಿಕೆಯ ಕಡಿತ ವಿದ್ಯಾರ್ಥಿಗಳಿಗೆ ಬಸ್ ಪಾಸ್ ಕಡಿತದ ಪ್ರಯತ್ನ, ಇವು ಜನರ ಸಂಕಷ್ಟಗಳಿಗೆ ಸ್ಪಂದಿಸದೆ ಅವನ್ನು ಕಾಲ ಕೆಳಗೆ ತುಳಿಯುವ ಮನೋಭಾವವನ್ನು ಎತ್ತಿ ತೋರಿಸುತ್ತದೆ.

ಜನರ ಮೇಲೆ ಹೊರಿಸಿದ ಭಾರ :

ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಜನರ ಸಂಕಷ್ಟಕ್ಕೆ ಪರಿಹಾರ ನೀಡುವ ಬದಲು ಬೆಲೆ ಏರಿಕೆಗೆ ಕಾರಣವಾದ ನೀತಿಗಳ ವಿರುದ್ಧ ಜನರ ಜೊತೆ ನಿಂತು ಪ್ರತಿಭಟಿಸಿ ಅವರ ಭಾವನೆಗಳಿಗೆ ಬಾಯಿ ಕೊಡುವುದರ ಬದಲು ವಿಶ್ವ ಬ್ಯಾಂಕ್ ಸಾಲಕ್ಕಾಗಿ ಅವರ ಷರತ್ತುಗಳಿಗೆ ಬಲಿ ಬಿದ್ದು ಬಸ್ ದರವನ್ನು ಏರಿಸಿತು. ಇದಕ್ಕೆ ಜನರ ಪ್ರತಿಭಟನೆ ಮಾಡಿದ್ದನ್ನು ಲೆಕ್ಕಿಸದೆ ವಿದ್ಯುತ್ ದರಗಳನ್ನು ಶೇಕಡಾ 32 ರಷ್ಟು ಏರಿಸಿತು. ಮತ್ತು ಹಾಲಿನ ದರಗಳನ್ನು ಏರಿಸುವ ಪ್ರಯತ್ನದಲ್ಲಿದೆ. ವಿಶ್ವವಿದ್ಯಾನಿಲಯಗಳು, ಶಿಕ್ಷಣ ಸಂಸ್ಥೆಗಳು ತಮ್ಮ ಪರೀಕ್ಷಾ ದರಗಳನ್ನು ಏರಿಸಿವೆ. ಹೀಗೆ ಒಂದರ ಮೇಲೊಂದರಂತೆ ಜನರ ಮೇಲೆ ಭಾರ ಏರಿ ಕುಳಿತಿದೆ. ಇದೇ ಸಂಪನ್ಮೂಲ ಸಂಗ್ರಹಣೆಯ ನೆಪದಲ್ಲಿ ಸಾರಾಯಿ ಗುತ್ತಿಗೆದಾರರಿಗೆ ವಿಶ್ವಾಮಿ ದೊರಕಿಸುವ, ಸೇಂದಿ ಉದ್ಯಮವನ್ನು ನಂಬಿಕೊಂಡಿದ್ದ ಲಕ್ಷಾಂತರ ಮೂರ್ತೇದಾರರನ್ನು ಬೀದಿಪಾಲು ಮಾಡುವ, ಅದರ ಉಪಯೋಗದಾರರಿಗೆ ಮದ್ಯವನ್ನು ತುಟ್ಟಿ ಮಾಡುವ ಕೆಲಸ ಮಾಡಿದೆ.

ಇದಲ್ಲದೆ ರೋಗಗ್ರಸ್ತ ಕೈಗಾರಿಕೆಗಳನ್ನು ಖಾಸಗಿಯವರಿಗೊಪ್ಪಿಸುವ, ಅಸಂಘಟಿತ ಕಾರ್ಮಿಕರ ಕೂಲಿಯನ್ನು ಹೆಚ್ಚಿಸಲು ಜನತಾದಳ ಸರಕಾರ ಮಾಡಿದ್ದ ಪ್ರಾಮಾಣಿಕ ಪ್ರಯತ್ನಕ್ಕೆ ಕಲ್ಲು ಹಾಕುವ ಕೆಲಸವನ್ನು ಮಾಡುತ್ತಿದೆ. ಬಗರ್ ಹುಕುಂ ಸಾಗುವಳಿದಾರರಿಗೆ ಭೂಮಿ ನೀಡುವ ಹೆಸರಿನಲ್ಲಿ ಲಕ್ಷಾಂತರ ಭೂಹೀನರನ್ನು ಅವರು ಸಾಗುವಳಿ ಮಾಡುತ್ತಿರುವ ಭೂಮಿಯಿಂದ ವಂಚಿಸುವ, ನೀತಿಯನ್ನು ಘೋಷಿಸಿದೆ. ಹರಿಜನರಿಗೆ ಭೂಮಿ ಕೊಡುತ್ತೇವೆಂದು ಹೇಳುತ್ತಲೇ ಭೂ ಕಂದಾಯದ 500 ಪಟ್ಟು ವಸೂಲಿ ಮಾಡುವ ಕ್ರಮ ಕೈಗೊಂಡು ಅವರಿಗೆ ಭೂಮಿಯನ್ನು ಮಾರುವ ದಲ್ಲಾಳಿಯಂತೆ ಸರಕಾರ ವರ್ತಿಸುತ್ತಿದೆ. ಇದೇ ಕ್ರಮವನ್ನು ನಗರಗಳ ಹೊರವಲಯದಲ್ಲಿರುವ ರೆವಿನ್ಯೂ ನಿವೇಶನದಾರರ ವಿಷಯದಲ್ಲೂ ಅನುಸರಿಸುತ್ತಿದೆ.

ರಾಜ್ಯದ ಎರಡು ಜಿಲ್ಲೆಗಳಲ್ಲಿ ಅತಿವೃಷ್ಟಿ. 15-20 ಸಾವಿರ ಜನರನ್ನು ವಸತಿಹೀನರನ್ನಾಗಿ ಮಾಡಿ ನೂರಾರು ಕೋಟಿ ರೂ,ಗಳ ನಾಶ ಮಾಡಿರುವಾಗಲೂ, ಉಳಿದ ಜಿಲ್ಲೆಗಳಲ್ಲಿ ಅನಾವೃಷ್ಟಿ, ಕೃಷಿ ಕಾರ್ಮಿಕರ, ರೈತರ ಜೀವನಕ್ಕೆ ಧಕ್ಕೆ ತಂದಿರುವಾಗಲೂ ಯಾವುದೇ ಪರಿಹಾರ ಕ್ರಮಗಳನ್ನು ಕೈಗೊಳ್ಳದೆ ಇದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರಕಾರಕ್ಕೆ ಸೂಕ್ತ ಮನವಿಯನ್ನೂ ಸಲ್ಲಿಸದೆ ನಿರ್ಲಕ್ಷ್ಯ ಮಾಡಿದೆ. ಇಷ್ಟೆಲ್ಲಾ ಸಂಪನ್ಮೂಲ ಸಂಗ್ರಹ ಕ್ರಮ ಕೈಗೊಂಡಿರುವಾಗಲೂ ಇರುವ ನೀರಾವರಿ ಯೋಜನೆಗಳನ್ನು ತೀವ್ರವಾಗಿ ಮುಗಿಸುವ, ಹೊಸ ನೀರಾವರಿ ಯೋಜನೆಗಳನ್ನು ಕೈಗೊಳ್ಳುವ ಪ್ರಯತ್ನವಿಲ್ಲ. ರಾಜ್ಯ ಅಭಿವೃದ್ಧಿಗಾಗಿ ಹೊಸ ಯೋಜನೆಯ ದೃಷ್ಟಿ ಇಲ್ಲ.

ಪುಟ 1 ರಿಂದ

★ ಭಾರತೀಯ ಜನತಾಪಕ್ಷದ ಅಧ್ಯಕ್ಷ ಎಲ್.ಕೆ. ಅದ್ವಾನಿಯವರ ವಿವಿಧ ರಾಜ್ಯಗಳ ಮೂಲಕ ಹಾದು ಹೋಗುವ 10,000 ಕಿ.ಮೀ.ಗಳ ಪ್ರಯಾಣ ಅವರು ಹೇಳಿಕೊಳ್ಳುವಂತೆ ರಾಷ್ಟ್ರೀಯತೆಯನ್ನು ಉದ್ದೀಪಿಸುವುದಿಲ್ಲ ಮತ್ತು ಭಾರತದ ಐಕ್ಯತೆಯನ್ನು ಬಲಪಡಿಸುವುದಿಲ್ಲ. ರಾಮ ದೇವನ ಸಾಮ್ರಾಜ್ಯದ ಐತಿಹಾಸಿಕ ರಾಜಧಾನಿ ಅಯೋಧ್ಯೆ ನಗರ ಅವರ ಗುರಿಯಾದರೂ ಅವರು ಆಯ್ದುಕೊಂಡಿರುವ ದಾರಿ ದೇಶವನ್ನು ಅನಾಹುತದತ್ತ ಕೊಂಡೊಯ್ಯಬಹುದಷ್ಟೆ. ಮಹಾಭಾರತ ಮಾದರಿಯ ರಥ ಬಳಕೆ, ಯಾತ್ರೆಯ ಆರಂಭಸ್ಥಳವನ್ನಾಗಿ ಸೋಮನಾಥವನ್ನು ಆಯ್ದುಕೊಂಡಿರುವುದು ಮತ್ತು ಶಿವ ದೇವಾಲಯದಲ್ಲಿ ಪ್ರಾರ್ಥನೆ ಮತ್ತು ದೇವಾಲಯದ ವಿಜಯ ದ್ವಾರದಲ್ಲಿ ಯಜ್ಞ ಕಾರ್ಯಕ್ರಮ ಇವೇ ಮೊದಲಾದವು ಹಿಂದೂಗಳ ಧಾರ್ಮಿಕ ಭಾವನೆಗಳನ್ನು ಕೆರಳಿಸಲು ಹಾಕಿದ ಲೆಕ್ಕಾಚಾರದ ಯೋಜನೆಗಳಾಗಿವೆ.

'ಡೆಕ್ಕನ್ ಹೆರಾಲ್ಡ್' ಸಂಪಾದಕೀಯ

ಸೆ 27.

ಈ ವಾರ

* ಭೂಪಾಲ್ ಅನಿಲ ದುರಂತ ಸಂತ್ರಸ್ತರಿಗೆ ಪ್ರತಿ ತಿಂಗಳು ಪರಿಹಾರ ಭತ್ಯೆ ನೀಡಲಿಕ್ಕಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ 310ಕೋಟಿ ರೂ. ಠೇವಣಿ ಇಟ್ಟಿರುವ ಕೇಂದ್ರ ಸರಕಾರ, ಅವರ ಭವಿಷ್ಯದ ವಿಚಾರದಲ್ಲಿ ತೀರಾ ಕಡಿಮೆ ಆಸಕ್ತಿ ತೋರುತ್ತಿದೆ. ಮಾಸಿಕ 200 ರೂ. ತುಂಬಾ ಕಡಿಮೆ ಮೊತ್ತ. ಮಾತ್ರವಲ್ಲ, ಅದನ್ನು ವಿತರಿಸುತ್ತಿರುವ ರೀತಿಯಂತೂ ಅನಪೇಕ್ಷಿತ. ಮಾಮೂಲಿನಂತೆ ಅಧಿಕಾರಶಾಹಿ ಅಲಕ್ಷ್ಯವಲ್ಲದೆ ಮಧ್ಯವರ್ತಿಗಳು ಮತ್ತು ಬ್ರೋಕರ್‌ಗಳು ಕೂಡ(ಹಾಗೆಂದು ಕರೆಯುವುದಾದಲ್ಲಿ) ಈ ಸಂತ್ರಸ್ತರ ದುಸ್ಥಿತಿಯನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎನ್ನಲಾಗಿದೆ.

—ದಿ ಇಕನಾಮಿಕ್ ಟೈಮ್ಸ್, ಸೆ. 25

* ಸಾರ್ವಜನಿಕ ರಂಗದ ಕೆಲವು ರೋಗಗ್ರಸ್ತ ಉದ್ಯಮಗಳನ್ನು ಖಾಸಗಿಯವರಿಗೆ ವಹಿಸಿಕೊಡುವ ಬಗ್ಗೆ ಕೇಂದ್ರಸರಕಾರ ಪರಿಶೀಲನೆ ನಡೆಸುತ್ತಿದೆ. ಸಾರ್ವಜನಿಕ ರಂಗದ ಉದ್ಯಮಗಳ ಕಾರ್ಯದರ್ಶಿಗಳು ಮತ್ತು ಮುಖ್ಯಕಾರ್ಯನಿರ್ವಾಹಕರ ಸ್ಥಾಯಿ ಸಮಿತಿ ಇತ್ತೀಚೆಗೆ ಈ ನಿರ್ಣಯ ಕೈಗೊಂಡಿತು.

—ಇಕನಾಮಿಕ್ ಟೈಮ್ಸ್‌ನಲ್ಲಿ ಸುದ್ದಿ, ಸೆ.24

* ರಾಷ್ಟ್ರೀಯ ಔಷಧಿಕ ನೀತಿಯ ಬಗ್ಗೆ ಹೆಚ್ಚು ಒತ್ತು ನೀಡುವ ಅವಶ್ಯಕತೆ ಇಲ್ಲವಾದರೂ, ಆ ಕುರಿತು ಕರಡು ಹೇಳಿಕೆ ಮಾಮೂಲು ಬಾಯುಪಚಾರಗಳ ಮಾತಿನ ಮಟ್ಟಗಳಲ್ಲಿಯೇ ಇದೆ.......

—ದಿ ಇಕನಾಮಿಕ್ ಟೈಮ್ಸ್, ಸೆ.27

* ಜಲಾಶಯಗಳ ನೀರಿನ ಮಟ್ಟ ಏರುತ್ತಿರುವ ಹಾಗೇ ರಾಜ್ಯ ಬೊಕ್ಕಸದಲ್ಲಿ ಹಣಕಾಸಿನ ಮಟ್ಟವೂ ಇತ್ತೀಚಿನ ದಿನಗಳಲ್ಲಿ ಏರುತ್ತಿದೆಯೆಂದು ಪಾಟೀಲರ ಸಂಪುಟದ ಸಚಿವರು ಒಬ್ಬರಾದ ಮೇಲೆ ಒಬ್ಬರು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದಾರೆ.......

.........ಬೊಕ್ಕಸಕ್ಕೆ ಹಣ ತುಂಬಿಸಿಟ್ಟ ಮಾತ್ರಕ್ಕೆ ಶ್ರೀಸಾಮಾನ್ಯನ ಮೇಲೆ ಇತ್ತೀಚೆಗೆ ಹೇರಿಟ್ಟ ಹೊರೆಗಳು ಹಗುರವಾಗುವುದಿಲ್ಲ. ಬಡ ದೋರೆಗೌಡನ ಕಂದಾಯ ಬಾಕಿಯನ್ನು ಹಿಂದಿನಷ್ಟೇ ನಿರ್ದಾಕ್ಷಿಣ್ಯವಾಗಿ ದೊಡ್ಡ ಕುಳಗಳ ವಿದ್ಯುತ್ ಬಾಕಿ, ನೀರಿನ ಬಾಕಿ, ಅಬಕಾರಿ ಸುಂಕ ಬಾಕಿ, ಮಾರಾಟ ತೆರಿಗೆ - ವರಮಾನ ತೆರಿಗೆ ಬಾಕಿಗಳನ್ನು ವಸೂಲು ಮಾಡುತ್ತಾರೆಯೇ ಎಂದು ಆತ ಪ್ರಶ್ನಿಸುತ್ತಾನೆ. ಸಾರಿಗೆ, ಆರೋಗ್ಯ, ಪಡಿತರ ಸರಬರಾಜು ಬಾಬ್ತಿನಲ್ಲಿ ನಡೆಯುತ್ತಿರುವ ಸೋರಿಕೆ ತಡೆಗಟ್ಟಲು ಸಾಧ್ಯವೇ ಎಂದು ಕೇಳುತ್ತಾನೆ. ಹಣಕಾಸಿನ ಅಭಾವದಿಂದಾಗಿ ಕುಂಠಿತವಾಗಿದ್ದ ಅಭಿವೃದ್ಧಿ ಕೆಲಸಗಳೆಲ್ಲ ಮತ್ತೆ ಚುರುಕಾಗುವುದನ್ನು , ಖಾಲಿ ಬಿದ್ದ ಹುದ್ದೆಗಳು ಭರ್ತಿಯಾಗಿ ಸರಕಾರಿ ಇಲಾಖೆಗಳು ಮತ್ತೆ ಚಲನಶೀಲವಾಗುವುದನ್ನು ಆತ ಎದುರು ನೋಡುತ್ತಾನೆ.

—'ಪ್ರಜಾವಾಣಿ' ಸಂಪಾದಕೀಯ, ಸೆ. 26

* ಭಾರತದ ದೀರ್ಘಾವಧಿ ವಿದೇಶಿ ಸಾಲ 1990ರ ಮಾರ್ಚ್ ಕೊನೆ ಹೊತ್ತಿಗೆ 81,168 ಕೋಟಿ ಆಗಿತ್ತು. 1989ರ ಇದೇ ಅವಧಿಯಲ್ಲಿ ಈ ಮೊತ್ತ 69,681ಕೋಟಿ ರೂ. ರಷ್ಟಿನಲ್ಲಿ ಹೆಚ್ಚಳವಾಗಿದ್ದರೂ ಪಾವತಿ ಸಮತೋಲನದ ಪರಿಸ್ಥಿತಿ ಅಪಾಯಕರವಾಗಿಯೇ ಇದೆ. ಆಮದು ಬಿಲ್ಲಿನ ಏರಿಕೆ ಮಾತ್ರವಲ್ಲದೆ ಐ.ಎಂ.ಎಫ್. ಗೆ ಭಾರಿ ಪ್ರಮಾಣದ ಮರುಪಾವತಿಯೂ ಇದಕ್ಕೆ ಕಾರಣ.

—ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆಗಳ ಚೆಂಬರ್‌ಗಳ ಫೆಡರೇಷನ್‌ನ 73 ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಅಧ್ಯಕ್ಷರ ಭಾಷಣದಲ್ಲಿ

* ಬಳಕೆದಾರರ ವಿವಿಧ ವಿಭಾಗಗಳಿಗೆ ಕೆ.ಇ.ಬಿ. ವಿದ್ಯುತ್ ದರವನ್ನು ಸರಾಸರಿ 45 ಶೇಕಡ ಏರಿಸಿದೆ. ಕೆಲವು ವಲಯಗಳಿಗೆ ಅದು ಇನ್ನೂ ಹೆಚ್ಚಾಗಿದೆ. ಈ ಹೆಚ್ಚಳ ತೀರಾ ಅಸಮರ್ಥನೀಯವಾದುದು. ಯಾಕೆಂದರೆ ನಮ್ಮ ಜಲವಿದ್ಯುತ್ ಅಣೆಕಟ್ಟುಗಳಲ್ಲಿ ಪರಿಸ್ಥಿತಿ ಉತ್ತಮವಾಗಿದೆ. ಹೆಚ್ಚು ವಿದ್ಯುತ್ ಉತ್ಪಾದನೆಯಾಗಿ ಆದಾಯವೂ ಹೆಚ್ಚಿದೆ. ಅಲ್ಲದೆ ಆಮದಿನ ಮೇಲೆ ಅವಲಂಬಿಸಬೇಕಾಗಿಲ್ಲ. ಅದಕ್ಷತೆ, ಸರಬರಾಜು ಮತ್ತು ವಿತರಣೆಯಲ್ಲಿನ ತೀವ್ರ ನಷ್ಟ ಮೊದಲಾದುವುಗಳ ಹೊರೆಯನ್ನು ಬಳಕೆದಾರರ ಮೇಲೆ ಹೊರಿಸಲಾಗಿದೆ.

—ಎಫ್.ಕೆ.ಸಿ.ಸಿ.ಐ. ಅಧ್ಯಕ್ಷರು

* ತಮಿಳುನಾಡಿನಲ್ಲಿ ಈಗ ಕೋಮುಗಲಭೆಗಳು ತಲೆ ಎತ್ತುತ್ತಿವೆ. ರಾಜ್ಯದ ಕಳೆದ ಹಲವು ವರ್ಷಗಳ ಇತಿಹಾಸದಲ್ಲಿ ಕೋಮುಗಲಭೆಗಳು ನಡೆದಿರಲಿಲ್ಲ. ಅಂತಹದರಲ್ಲಿ ಮದರಾಸಿನ ಹೊರವಲಯದ ಟ್ರಿಪ್ಲಿಕೇನ್‌ನಲ್ಲಿ ಸೆಪ್ಟೆಂಬರ್ 2 ರಂದು ಕೋಮುಗಲಭೆ ನಡೆದು ಹೋಯಿತು. ಹಿಂಸಾಚಾರದಲ್ಲಿ ಮೂವರು ಪ್ರಾಣ ಬಿಟ್ಟರು.

............ಕೋಮುಗಲಭೆಯು 'ಯೋಜಿತ'ಹಾಗೂ 'ಸಂಘಟಿತವಾಗಿ' ನಡೆಯು ತ್ತಿರುವುದು ತಮಿಳುನಾಡಿನಲ್ಲಿ ಬಿ.ಜೆ.ಪಿ. ಚಿಗುರೊಡೆಯುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಭಾರತೀಯ ಜನತಾ ಪಕ್ಷ ಪರಿಸ್ಥಿತಿ ಲಾಭ ಪಡೆಯಲು ಈಗ ತಮಿಳುನಾಡಿನಲ್ಲಿ ಹಗಲಿರುಳು ಶ್ರಮಿಸುತ್ತಿದೆ.

—'ಸಂಯುಕ್ತ ಕರ್ನಾಟಕ' ಲೇಖನದಲ್ಲಿ, ಸೆ.30

* ಆಗಸ್ಟ 31 ರಂದು ಪೇಷಾವರ್ ಪೋಲೀಸರು 22 ವರ್ಷದ ಶಬ್ಬೀರ್ ಮೊಹಮ್ಮದ್ ಎಂಬ ಇಲೆಕ್ಟ್ರಿಷಿಯನ್‌ನನ್ನು ಬಂದಿಸಿದ್ದರು. ಆತನ ಬಳಿ ಎರಡು ಗ್ರೆನೇಡ್‌ಗಳಿದ್ದವು. ದೆನಜೀರ್ ದೇಶದಲ್ಲಿ 'ಇಸ್ಲಾಮನ್ನು' ಜಾರಿಗೊಳಿಸಲು ವಿಫಲವಾಗಿದ್ದರಿಂದ ಅವರನ್ನು ಕೊಲ್ಲಲು ತಾನು ಯೋಜಿಸಿದ್ದಾಗಿ ಮೊಹಮ್ಮದ್ 'ತಪ್ಪೊಪ್ಪಿಕೊಂಡಿದ್ದಾನೆ' ಎಂದು ಪೋಲೀಸರು ತಿಳಿಸಿದ್ದಾರೆ.

— ಎ.ಎಫ್.ಪಿ. ವರದಿ

ಬಾಲಂಗೋಚಿ

ರಾಜ್ಯದಲ್ಲಿ ಬರವಿದೆ. ರಾಷ್ಟ್ರದಲ್ಲಿ ಬಿಕ್ಕಟ್ಟಿದೆ. ಅದ್ದೂರಿ ದಸರಾ ದೇಕ.

— ಮಾಜಿ ಮು.ಮ. ಆರ್.ಗುಂಡೂರಾವ್

ನೀವು ಗದೆ ಸನ್ಮಾನ ಪಡೆಯುತ್ತಿದ್ದಾಗ ನಾವೆಲ್ಲಾ ಹಾಲಲ್ಲೇ ಕೈ ತೊಳೀತಿದ್ವಿ ಕಣೋ ಗುಂಡಪ್ಪಾ ಎಂದು ನರಗುಂದ-ನವಲಗುಂದ ರೈತ್ರು ನೆನೆಸ್ಕೊಂಡು ಕಣ್ಣೀರ್ ಸುರಿದ್ರಂತೆ.

ಅಕ್ಟೋಬರ್ 24 ರಿಂದ 30ರವರೆಗೆ ಜಂಟಿ ಮತ ಪ್ರದರ್ಶನ ರ‍್ಯಾಲಿಗಳನ್ನು ನಡೆಸಿರಿ

ದಿಲ್ಲಿಯಲ್ಲಿ ನಡೆದ ಮತೀಯ ವಿರೋಧಿ ಸಮಾವೇಶದ ಕರೆ

ಮತೀಯ ಮತ್ತಿತರ ಛಿದ್ರಕಾರಿ ಶಕ್ತಿಗಳ ವಿರುದ್ಧ ಅಕ್ಟೋಬರ್ 24ರಿಂದ 30 ರವರೆಗೆ ದೇಶದ ವಿವಿದೆಡೆಗಳಲ್ಲಿರುವ ಕೈಗಾರಿಕಾಕೇಂದ್ರಗಳಲ್ಲಿಯೂ ಕಾರ್ಮಿಕ ವರ್ಗ ಮತ್ತು ಕಾರ್ಮಿಕ ಸಂಘಗಳು ಪರಿಣಾಮಕಾರಿಯಾದ ಮತ ಪ್ರದರ್ಶನ, ರಾಲಿಗಳನ್ನು ನಡೆಸಿ ದೇಶದ ಜಾತ್ಯಾತೀತ ಗುಣಮಟ್ಟವನ್ನು ಮತ್ತು ಸಮಗ್ರತೆಯನ್ನು ರಕ್ಷಿಸಲು ಪರಿಣಾಮಕಾರಿಯಾದ ರೀತಿಯಲ್ಲಿ ತಮ್ಮ ಐಕ್ಯತೆಯನ್ನು ಪ್ರದರ್ಶಿಸಬೇಕೆಂದು ಸೆಪ್ಟೆಂಬರ್ 19 ರಂದು ದಿಲ್ಲಿಯಲ್ಲಿ ಸೇರಿದ್ದ ಕೇಂದ್ರೀಯ ಕಾರ್ಮಿಕ ಸಂಘಗಳ ಜಂಟಿ ಸಮಾವೇಶ ಕರೆಕೊಟ್ಟಿದೆ.

ರಾಮಜನ್ಮಭೂಮಿ-ಬಾಬ್ರಿ ಮಸೀದಿ ಪ್ರಶ್ನೆ, ಜಮ್ಮು-ಕಾಶ್ಮೀರ, ಪಂಜಾಬ್, ಅಸ್ಸಾಮ್ ಮೊದಲಾದ ಸಮಸ್ಯೆಗಳು, ಶಿವಸೇನೆಯಂತ ಪ್ರಾದೇಶಿಕ ಪ್ರಶ್ನೆಗಳು ಕಾರ್ಮಿಕ ವರ್ಗದಲ್ಲಿ ಒಡಕನ್ನುಂಟುಮಾಡಿ ದೇಶಕ್ಕೂ, ಕಾರ್ಮಿಕ ವರ್ಗಕ್ಕೂ ಅಪಾಯವನ್ನುಂಟುಮಾಡುತ್ತಿವೆ. ಅಂಥಹ ಶಕ್ತಿಗಳ ವಿರುದ್ಧ ಹೋರಾಡಬೇಕೆಂದು ದೇಶದ ಕಾರ್ಮಿಕ ವರ್ಗಕ್ಕೆ ಕರೆ ಕೊಟ್ಟು ದೇಶಾದ್ಯಂತ ಪರಿಣಾಮಕಾರಿ ಚಳುವಳಿ ಹುಟ್ಟುಹಾಕಲು ಸಿಐಟಿಯು, ಎಐಟಿಯುಸಿ, ಐಎನ್‌ಟಿಯುಸಿ, ಯುಟಿಯುಸಿ(ಲೆನಿನ್ ಸರಣಿ), ಟಿಯುಸಿಸಿ, ಮತ್ತು ಎನ್‌ಎಲ್‌ಓ, ಸಂಘಟನೆಗಳು ತಮ್ಮ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಸೆಪ್ಟೆಂಬರ್ 19 ರಂದು ದಿಲ್ಲಿಯಲ್ಲಿ ಮತೀಯ ವಿರೋಧಿ ಸಮಾವೇಶ ನಡೆಸಿದರು. ದೇಶದ ನಾನಾ ರಾಜ್ಯಗಳಿಂದ ಹದಿನೈದು ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಬಂದಿದ್ದು ಮತೀಯ ಮತ್ತು ಛಿದ್ರಕಾರಿ ಶಕ್ತಿಗಳಿಂದ ದೇಶವನ್ನು ರಕ್ಷಿಸುತ್ತೇವೆ, ಕಾರ್ಮಿಕರ ಐಕ್ಯತೆಯನ್ನು ಕಾಪಾಡುತ್ತೇವೆಂಬ ಪ್ರತಿಜ್ಞೆ ಮಾಡಿದರು.

ಕರ್ನಾಟಕದಿಂದ ಸಿಐಟಿಯು ಅಧ್ಯಕ್ಷರಾದ ಎಸ್. ಸೂರ್ಯನಾರಾಯಣರಾವ್ ಅವರು ಭಾಷಣ ಮಾಡುತ್ತಾ ಮಹಾತ್ಮಾ ಗಾಂಧಿಯವರನ್ನು ಕೊಂದ ಆರ್.ಎಸ್.ಎಸ್., ನಂತಹ ಮತೀಯ ಶಕ್ತಿಗಳು, ವಿಶ್ವ ಹಿಂದೂ ಪರಿಷತ್ ಮುಂತಾದ ಜಾತೀಯವಾದಿಗಳೊಡನೆ ಸೇರಿಕೊಂಡು ಮತೀಯ ಗಲಭೆಗಳಿಗೆ ಅವಕಾಶ ಮಾಡಿಕೊಟ್ಟು ದೇಶವನ್ನು ಅಭದ್ರಗೊಳಿಸುತ್ತಿವೆ. ಬ್ರಿಟೀಶರ ವಿರುದ್ಧ ನಡೆಸಿದ ಸ್ವಾತಂತ್ರ ಸಂಗ್ರಾಮದಲ್ಲಿ ಕೂಡ ಬ್ರಿಟೀಷರು ಸ್ವಾತಂತ್ರ ಸಂಗ್ರಾಮವನ್ನು ಮೊಟಕುಗೊಳಿಸುವ ದುರುದ್ದೇಶದಿಂದ ಮುಸ್ಲಿಂ ಲೀಗಿಗೆ ಪ್ರೋತ್ಸಾಹ ನೀಡುತ್ತಾ ಮತೀಯ ಗಲಭೆಗಳನ್ನು ಪ್ರಚೋದಿಸುತ್ತಿದ್ದಾಗ, ದೇಶದ ಕಾರ್ಮಿಕ ವರ್ಗ ಹಿಂದೂ- ಮುಸ್ಲಿಂ ಭಾಯಿ-ಭಾಯಿ ಎಂಬ ಘೋಷಣೆಯೊಂದಿಗೆ ಐಕ್ಯತೆ ಸಾಧಿಸುವುದರಲ್ಲಿ ಜೀವದ ಹಂಗು ಬಿಟ್ಟು ಹೋರಾಡಿತ್ತು. ಆ ಪರಂಪರೆಯನ್ನೇ ಎತ್ತಿ ಹಿಡಿಯಬೇಕು , ಛಿದ್ರಕಾರಿ ಶಕ್ತಿಗಳಿಂದ, ಮತೀಯವಾದಿಗಳಿಂದ ಕಾರ್ಮಿಕರ ಐಕ್ಯತೆಗೆ, ಭಾರತದೇಶಕ್ಕೆ ಉಂಟಾಗಿರುವ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಬೇರೆ ಬೇರೆ ರಾಜಕೀಯ ಸಿದ್ಧಾಂತಗಳಿಗೆ ಹೊಂದಿಕೊಂಡಿರುವ ನಾವೆಲ್ಲರೂ ಕಾರ್ಮಿಕರ ಐಕ್ಯತೆಯನ್ನು ಮುಂದಿಟ್ಟುಕೊಂಡು ಕೋಮುವಾದಿ- ಛಿದ್ರಕಾರಿ ಶಕ್ತಿಗಳನ್ನೆಲ್ಲಾ ನಾಶಮಾಡಿ ದೇಶದ ಐಕ್ಯತೆ-ಸಮಗ್ರತೆಯನ್ನು ಉಳಿಸುತ್ತೇವೆಂಬ ಪ್ರತಿಜ್ಞೆ ಮಾಡುವುದು ಮಾತ್ರವಲ್ಲ ನಾವು ಇರುವ , ನಾವುಕೆಲಸ ಮಾಡುವ ಸ್ಥಳಗಳಲ್ಲೆಲ್ಲಾ ಜಾತೀಯ ಸೌಹಾರ್ದತೆ. ಪ್ರಚಾರ ಕೈಗೊಳ್ಳಬೇಕೆಂದು ಕರೆ ನೀಡಿದರು.

ಸಿಐಟಿಯು ಕೇಂದ್ರದ ಪರವಾಗಿ ಮಾತಾಡಿದ ಮಹಮ್ಮದ್ ಅಮಾನ ಅವರು , ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿಯವರಾದ ಇ.ಎಂ.ಎಸ್.ನಂಬೂದರಿಪಾಡ್ ಅವರು ರಾಮಜನ್ಮಭೂಮಿ--ಬಾಬ್ರಿ ಮಸೀದಿ ಸಮಸ್ಯೆಯ ಪರಿಹಾರಕ್ಕಾಗಿ ಸೂಚಿಸಿದ ಮೂರು ಸೂತ್ರಗಳನ್ನು ತಿಳಿಸಿದರು. 1.ಎಲ್ಲರೂ ಕೋರ್ಟಿನ ನಿರ್ಣಯವನ್ನು ಒಪ್ಪಿಕೊಳ್ಳುವುದು. 2.ಬಾಬ್ರಿ ಮಸೀದಿಗೆ ಆತಂಕ ಆಗದ ರೀತಿಯಲ್ಲಿ ರಾಮ ದೇಗುಲ ನಿರ್ಮಿಸುವುದು. 3. ಅವೆರಡೂ ಒಪ್ಪಿಗೆಯಾಗದಿದ್ದರೆ ಇಡೀ ಪ್ರದೇಶವನ್ನು ಆರ್ಕಿಯಾಲಾಜಿಕಲ್ ಡಿಪಾರ್ಟ್‌ಮೆಂಟ್‌ಗೆ ವಹಿಸಿ, ಅದನ್ನು ಪ್ರೇಕ್ಷಣೀಯ ಸ್ಥಳವನ್ನಾಗಿ ಮಾರ್ಪಡಿಸುವುದು ಎಂದು ವಿವರಿಸಿದಾಗ ಜನ ಸಮೂಹ ಕರತಾಡನಗಳ ಮೂಲಕ ಆ ಸೂತ್ರವನ್ನು ಸ್ವಾಗತಿಸಿದರು.

ರಾಮಜನ್ಮಭೂಮಿ -ಬಾಬ್ರಿ ಮಸೀದಿ ಸಮಸ್ಯೆಯನ್ನು ವಿವರವಾಗಿ ವಿಶ್ಲೇಷಿಸಿದ ಮಹಮ್ಮದ ಅಮಾನ ಶತಶತಮಾನಗಳಿಂದ ಈ ಸಮಸ್ಯೆಯತ್ತ ಗಮನವನ್ನೇ ಹರಿಸದ ಈ ಜಾತೀಯ ಸಂಘಟನೆಗಳು ಈಗ ಎರಡು ವರ್ಷಗಳಿಂದ ಅದನ್ನು ಜೀವನ್ಮರಣದ ಪ್ರಶ್ನೆಯನ್ನಾಗಿ ಯಾಕೆ ಎತ್ತಿಕೊಂಡಿವೆ ಎಂಬುದನ್ನು ವಿವರಿಸಿ, ಆ ವಿಷ ಜಂತುಗಳನ್ನು ನಿರ್ನಾಮ ಮಾಡುವುದು ಕಾರ್ಮಿಕ ವರ್ಗದ ಕರ್ತವ್ಯಪೂರೈಸುವಂಥ ನಿರ್ಣಯವನ್ನು ಈ ಸಮ್ಮೇಳನ ಕೈಗೊಳ್ಳುತ್ತಿರುವುದರಿಂದ, ಕಾರ್ಮಿಕ ವರ್ಗ ಅದರ ಕುರಿತು ಪ್ರಚಾರ ಪ್ರಕ್ಷೋಭೆ ನಡೆಸಿ ದೇಶದ ಐಕ್ಯತೆ-ಸಮಗ್ರತೆ ಕಾಪಾಡುತ್ತಾರೆಂಬ ಆಶಯ ವ್ಯಕ್ತಪಡಿಸಿದರು.

ಪುಟ 4 ರಿಂದ

ಲಿಲ್ಲ. ಯಾವುದೋ ಖಾಯಿಲೆಯಿಂದ ಸತ್ತ ಎಂಬ ಕಥೆ ಹರಡಲಾಯಿತು. ಮಗನ ಈ ಥರ ಸಾವನ್ನು ಸಹಿಸಲಾರದೆ ಆ ತಾಯಿ ಹುಚ್ಚಾಳಾಗಿದ್ದಾಳೆ. ಹಲ್ದರ್ ಬಿಸ್ವಾಸ್‌ನನ್ನು ಕಾಂಗ್ರೆ ಸೇರಲು ಇಲ್ಲವಾದರೆ ಮನೆ ಬಿಡಲು ಒತ್ತಾಯ ಹಾಕಲಾಗುತ್ತಿದೆ.

ಇದು ಮಾಜಿ ಮುಖ್ಯಮಂತ್ರಿ ಹಾಗೂ ಈಗ ವಿರೋಧ ಪಕ್ಷದ ಮುಖಂಡ ನೃಪೇನ್ ಚಕ್ರವರ್ತಿ ನೇತೃತ್ವದ ಸಿಪಿಐ(ಎಂ) ಅಧ್ಯಯನ ತಂಡದ ಭೇಟಿಯ ನಂತರ ಸ್ಪಷ್ಟಗೊಂಡಿರುವ ಅಂಶಗಳು. ಈ ತಂಡದಲ್ಲಿ ಕಾಂ. ನೃಪೇನ್ ಚಕ್ರವರ್ತಿಯವರಲ್ಲದೆ ಹೃಷ್ಯಮೂಕ್, ಕಾತ್ರಬನ್ ಹಾಗೂ ಸಬ್ರೂಮ್‌ನ ಎಂ.ಎಲ್. ಎ.ಗಳು ಮಹಿರ್‌ಪುರ್-ಭುರಾಕಾಲಿಯ ಬಿ.ಡಿ.ಸಿ. ಸದಸ್ಯರು, ಸಿಪಿಐ(ಎಂ)ನ ಸಬ್ರೂಮ್ ಡಿವಿಜನ್‌ನ ಸಮಿತಿಯ ಕಾರ್ಯದರ್ಶಿ ಹಾಗೂ ಇಪ್ಪತ್ತು ಸದಸ್ಯರು ಇದ್ದರು.

Printed and published by P.Ramachandra Rao' on behalf of Communist Party of India (Marxist) Karnataka State Committee, 95A, 11 cross, Mune…